ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ
ಮಾಸಪತ್ರಿಕೆ

ಮಾರ್ಚ್ 2026 ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:8, Pages:56
March - 2026, Price Rs. 20/-



## ಒಂಟಿಮಿಟ್ಟ
## ಶ್ರೀ ಕೋದಂಡ ರಾಮಸ್ವಾಮಿಯವರ
## ಕಲ್ಯಾಣೋತ್ಸವ (31-03-2026)



# ಒಂಟಿಮಿಟ್ಟ, ಶ್ರೀಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

## ಮಾರ್ಚ್ 25 ರಿಂದ ಏಪ್ರಿಲ್ 03 ರ ವರೆಗೆ

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 25-03-2026 | ಬುಧವಾರ | ನ್ಯಾಸಾಭಿಷೇಕ | ಅಂಕುರಾರ್ಪಣೆ |
| 26-03-2026 | ಗುರುವಾರ | ಧ್ವಜಾರೋಹಣ | ಶೇಷವಾಹನ |
| 27-03-2026 | ಶುಕ್ರವಾರ | ವೇಣುಗಾನಾಲಂಕಾರ | ಹಂಸವಾಹನ |
| 28-03-2026 | ಶನಿವಾರ | ವಟಪಾತ್ರಶಾಯಿ ಅಲಂಕಾರ | ಸಿಂಹವಾಹನ |
| 29-03-2026 | ಭಾನುವಾರ | ನವನೀತಕೃಷ್ಣಾಲಂಕಾರ | ಹನುಮತ್ಸೇವೆ |
| 30-03-2026 | ಸೋಮವಾರ | ಮೋಹಿನಿಸೇವೆ | ಗರುಡಸೇವೆ |
| 31-03-2026 | ಮಂಗಳವಾರ | ಶಿವಧನುರ್ಭಾಣಾಲಂಕಾರ | ಎದುರ್ಕೊಲು, ಕಲ್ಯಾಣೋತ್ಸವ, ಗಜವಾಹನ |
| 01-04-2026 | ಬುಧವಾರ | ರಥೋತ್ಸವ | -------- |
| 02-04-2026 | ಗುರುವಾರ | ಕಾಳೀಯಮರ್ಧನಾಲಂಕಾರ | ಅಶ್ವವಾಹನ |
| 03-04-2026 | ಶುಕ್ರವಾರ | ಚಕ್ರಸ್ನಾನ | ಧ್ವಜಾವರೋಹಣ |



# ಭಗವದ್ಗೀತೆ



**ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಮ್।**
**ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತನಿಶ್ಚಯಃ॥**

**ಸತ್ತರೆ, ಸ್ವರ್ಗವನ್ನು ಪಡೆಯುತ್ತಿ. ಗೆದ್ದರೆ ಭೂಮಿಯನ್ನು (ಅರಸನಾಗಿ) ಅನುಭವಿಸುತ್ತಿ. ಆದ್ದರಿಂದ ಅರ್ಜುನ, ಕಾದುವ ನಿರ್ಧಾರ ಮಾಡಿ ಎದ್ದೇಳು.**

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -37)



**ರಾಮ ಗೋವಿಂದ ಹರಿ ಕೃಷ್ಣ ಗೋವಿಂದ**
**ದಾಮೋದರ ಹರಿ ವಿಷ್ಣು ಮುಕುಂದ**

**ಮತ್ಸ್ಯಾವತಾರದೊಳಾಡಿದನೆ**
**ಮಂದರಾಚಲವ ಬೆನ್ನೊಳಾಂತವನೇ**
**ಅಚ್ಚ ಸೂಕರನಾಗಿ ಬಾಳಿದನೆ**
**ಮದ ಹೆಚ್ಚಿ ಹಿರಣ್ಯನ ಸೀಳಿದನೇ**

**ಬಲಿಯೊಳು ದಾನವ ಬೇಡಿದನೆ**
**ಕ್ಷತ್ರಕುಲವ ಬಿಡದೆ ಕ್ಷಯ ಮಾಡಿದನೆ**
**ಜಲನಿಧಿಗೆ ಬಿಲ್ಲ ಹೂಡಿದನೆ**
**ಕಾಮಗೊಲಿದು ಗೊಲ್ಲತಿಯೊಳು ಆಡಿದನೆ**

**ಸಾಧಿಸಿ ತ್ರಿಪುರರ ಗೆಲಿದವನೆ**
**ಪ್ರತಿವಾದಿಸಿ ಹಯವೇರಿ ಮೆರೆದವನೆ**
**ಭೇದಿಸಿ ವಿಶ್ವವ ಗೆಲಿದವನೆ**
**ಬಿಡದಾದಿ ಕೇಶವ ನಮಗೊಲಿದವನೆ**

**ರಾಧಾಕೃಷ್ಣ ಜಯ ಕುಂಜವಿಹಾರಿ**
**ಮುರಳೀಧರ ಗೋವರ್ಧನಧಾರೀ**
**ಶಂಖ ಚಕ್ರ ಪೀತಾಂಬರಧಾರೀ**
**ಕರುಣಾಸಾಗರ ಕೃಷ್ಣಮುರಾರಿ**

**- ಶ್ರೀ ಕನಕದಾಸರು**



# ಈಶಾವಾಸ್ಯೋಪನಿಷತ್

## ಮಂತ್ರ -3

- ಓಂ ಪ್ರಕಾಶ್ ಭಟ್
9964025922

**ಅಸುರ್ಯಾ ನಾಮ ತೇ ಲೋಕಾ ಅಂಧೇನ ತಮಸಾಽವೃತಾಃ**
**ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾಽತ್ಮಹನೋ ಜನಾಃ ॥**

ಇಲ್ಲಿ ಉತ್ತರ ಶ್ಲೋಕದ ಕೊನೆಗೆ "ಆತ್ಮಾ" ಶಬ್ದವಿದೆ. ಮೊದಲ ಶ್ಲೋಕದಲ್ಲಿ ಯಾರನ್ನು 'ಈಶ' ಎಂದು ಕರೆದರೋ ಅವನನ್ನೇ ಇಲ್ಲಿ "ಆತ್ಮ" ಎಂದು ಕರೆಯಲಾಗಿದೆ. ಹಾಗಾದರೆ 'ಆತ್ಮ' ಬಹು ಅರ್ಥದಲ್ಲಿ ತೆರೆದುಕೊಳ್ಳುತ್ತಾ ಹೋಗುತ್ತದೆ. 'ಆತ್ಮ' ಎಂದರೆ, ದೇಹವೂ ಹೌದು. ಮಧ್ಯಭಾಗಕ್ಕೆ ಆ ಹೆಸರೂ ಇದೆ. ಮನಸ್ಸೂ ಹೌದು. ಇನ್ನೂ ಮುಂದೆ ಹೋದರೆ ಜೀವ. ಅದಕ್ಕಿಂತಲೂ ಸೂಕ್ಷ್ಮಕ್ಕೆ ಹೋದಾಗ 'ಆತ್ಮ' ಎಂದರೆ ಎಲ್ಲಾ ಜೀವಿಗಳಿಗೂ ಅಂತರ್ಯಾಮಿಯಾಗಿ ಇರತಕ್ಕಂತಹ ಭಗವತ್ತತ್ತ್ವವೇ ಆಗಿದೆ. ಆದ್ದರಿಂದ ಉಪನಿಷತ್ತು ಇಲ್ಲಿ 'ಆತ್ಮ' ಎಂದರೆ ಭಗವಂತನನ್ನೇ ಹೇಳುತ್ತದೆ.

ಭಗವಂತನ ಅರಿವು, ಅಸ್ತಿತ್ವವನ್ನು ಮರೆತು ಬದುಕುವವರ ಜೀವನ, ಅವಸ್ಥೆ ಏನಾಗುತ್ತದೆ? ದೇಹ ಕಳೆದುಕೊಂಡ ಮೇಲೆ 'ತಾಮಸ' ಲೋಕವನ್ನು ಸೇರುತ್ತಾರೆ. ಅಂದರೆ, ಬೆಳಕಿನ ಲೋಕಕ್ಕೆ ಸೇರುವುದಿಲ್ಲ. ಕತ್ತಲೆಯ ಕೂಪಕ್ಕೆ ಸೇರುತ್ತಾರೆ. 'ಅಸುರ್ಯಾ' ಎಂದರೆ ಸೂರ್ಯ (ಬೆಳಕು) ಇಲ್ಲದ ಲೋಕವೂ ಹೌದು. ಅಸುರರು ಹೋಗುವ ಲೋಕವೂ ಹೌದು.

ಅಸುರರು ಎಂದರೆ ಯಾರು? 'ಅಸು' ಅಂದರೆ ಇಂದ್ರಿಯಗಳು. ಈ ಇಂದ್ರಿಯಗಳಲ್ಲೇ ರಮಿಸುವವರು ಅಸುರರು. ನಾವು ಎಲ್ಲರೂ, ಯಾರೂ ಅಸುರರು ಆಗಬಹುದು. ಇಂದ್ರಿಯಸುಖದಲ್ಲೇ ಜೀವನದ ಪರಮಾರ್ಥ ಇದೆ. ಅದರಾಚೆಗೆ ನಿಜವಾದ ಸುಖ ಇದೆ ಎನ್ನುವುದನ್ನು ಮರೆತವರು. ಅಂದರೆ ಸತ್ಯಕ್ಕೆ ಬೆನ್ನು ಹಾಕುವವರು ಅಸುರರು. ಇದು ಯಾವ ಲೋಕ ಎಂದರೆ, ಎಲ್ಲಿದೆ ಎಂದರೆ, ಅದು ಎಲ್ಲೋ ಹೊರಗಿರುವ ಲೋಕ ಅಲ್ಲ, ನಮ್ಮ ಬದುಕನ್ನೇ ಉಪನಿಷತ್ತು ಹೇಳುತ್ತದೆ. ಗರ್ಭಕೋಶವನ್ನು ಕತ್ತಲೆಕೋಣೆ ಎಂದು ಸಾಂಕೇತಿಕವಾಗಿ ಹೇಳುತ್ತಾರೆ. ಹುಟ್ಟುತ್ತಾ, ಸಾಯುತ್ತಾ ಮತ್ತೆ ಹುಟ್ಟುತ್ತಾ ಇರುವ ಇಲ್ಲೇ ಸುತ್ತುತ್ತ ಇರುವ ಪರಿಸ್ಥಿತಿಯ ಲೋಕವನ್ನು ಇದು ತಿಳಿಸುತ್ತದೆ. ಸಂಸಾರದಲ್ಲೇ ಸುತ್ತುತ್ತಾ ಇರುವ ಸಂಸಾರದ ಸುಖವೇ ಪರಮಸುಖ, ಅದರಾಚೆಗೆ ಇರುವ ಸತ್ಯವನ್ನು ಒಪ್ಪದೇ ಕತ್ತಲೆಯಲ್ಲೇ, ಕತ್ತಲೆಯನ್ನೇ ಸುಖ ಎಂದು ಭಾವಿಸುವವರ ಜೀವನದ ಸ್ಥಿತಿಯನ್ನು ತಿಳಿಸುತ್ತಾ, ಆ ಸ್ಥಿತಿ ನಮಗೆ ಬಾರದಿರಲಿ ಎಂದು ಎಚ್ಚರಿಸುತ್ತದೆ. ಸುಖದ ಆಚೆಗೆ ಇರುವ ಪರಮಾತ್ಮತತ್ತ್ವದ ಉಪಾಸನೆಯನ್ನು ಇಲ್ಲಿ ಪರೋಕ್ಷವಾಗಿ ಒತ್ತಿ ಹೇಳಿದ್ದಾರೆ.

ಸೂಕ್ಷ್ಮದೇಹದಿಂದ ಅನುಭವಿಸುವಂತಹ ಸ್ವರ್ಗ-ನರಕಗಳನ್ನು ಶಾಸ್ತ್ರವು ಒಪ್ಪುತ್ತದೆ. ಈ ದೊಡ್ಡ ಸ್ಥೂಲದೇಹಕ್ಕೆ ಅವು ಗೋಚರವಾಗುವುದಿಲ್ಲ. ಮನುಷ್ಯ ಮಾಡಿದ ತಪ್ಪನ್ನು, ತಪ್ಪಿಗೆ ಫಲವನ್ನು ಅನುಭವಿಸುವ ಲೋಕವನ್ನು ಜೀವನು ಸತ್ತ ಮೇಲೆ ಪಡೆಯುತ್ತಾನೆ. ಇದೂ ಈ ಮಂತ್ರಕ್ಕೆ ಅನ್ವಯವಾಗುತ್ತದೆ.

ಇಂತಹ ಬದುಕು ಯಾರಿಗೂ ಬರಬಾರದು. ಎರಡನೇ ಮಂತ್ರದಲ್ಲಿ ಸಾಧಕನಿಗೆ ಬದುಕಿನಲ್ಲಿ ಇರಬೇಕಾದ ಮುಖ ಹೇಳಿದರೆ, ಮೂರನೇ ಮಂತ್ರದಲ್ಲಿ ಇರಬಾರದ ಮುಖವನ್ನು ಹೇಳುತ್ತದೆ. ಆದ್ದರಿಂದ ಆತ್ಮತತ್ತ್ವವನ್ನು ಸರಿಯಾಗಿ ತಿಳಿದುಕೊಳ್ಳಬೇಕು ಎಂದು ಮೂಲಾರ್ಥ. ಆತ್ಮತತ್ತ್ವಕ್ಕೆ ನಾವು ಅರ್ಪಿಸಿಕೊಂಡು ಬದುಕಬೇಕು.

ಅದನ್ನು ಏನು ಎಂದು ತಿಳಿದುಕೊಳ್ಳಬೇಕು? ಹೇಗೆ ತಿಳಿದುಕೊಳ್ಳಬೇಕು? ಅದರ ಅರಿವಿನ ಮೂಲ ಏನು? ಎಂದಾಗ ಸ್ವಾಯಂಭುವಮನು ತನ್ನ ಅನುಸಂಧಾನವನ್ನು ಮುಂದಿನ ಮಂತ್ರದಲ್ಲಿ ಹೇಳುತ್ತಾನೆ. ಅದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀವಿಶ್ವಾವಸು/ಶ್ರೀ ಪರಾಭವ ನಾಮ ಸಂವತ್ಸರ ಫಾಲ್ಗುಣ - ಚೈತ್ರ ಮಾಸ ಸಂಚಿಕೆ

ಸಂಪುಟ:05 ಮಾರ್ಚ್ - 2026 ಸಂಚಿಕೆ:08



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಮುದ್ದಾಡ ರವಿಚಂದ್ರ, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,(FAC)
ತಿ.ತಿ.ದೇ., ತಿರುಪತಿ.

**ಪ್ರಕಾಶಕರು,ಸಂಪಾದಕರು,**
**ಪ್ರಧಾನ ಸಂಪಾದಕರು** (ಎಫ್.ಎ.ಸಿ)
ಡಾ॥ವಿ.ಜಿ.ಚೊಕ್ಕಲಿಂಗಂ,ಎಮ್.ಎ.ಪಿಎಚ್.ಡಿ.,
ಪಿ.ಜಿ.ಡಿಪ್.ಇನ್.ಜೆ.ಎಂ.ಸಿ

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್,ಬಿ.ಎ. ಬಿ.ಇಡಿ
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ : 0877 - 2264543
: 0877 - 2264359
ಪ್ರಧಾನ ಸಂಪಾದಕರು : 0877 - 2264363

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
editorsapthagiri@gmail.com
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸ ಪತ್ರಿಕೆಯನ್ನು ವೀಕ್ಷಿಸಲು
www.tirumala.org
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಪ್ರಧಾನ ಸಂಪಾದಕರು

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಮಾಘಮಾಸದ ಶುಕ್ಲ ಪಕ್ಷದ ಸ್ನಾನದ ಮಹಿಮೆ | - ಶ್ರೀಧರ ರಾಯಸಂ | 07 |
| ಶ್ರೀರಾಮ ರಾಜ್ಯಾಭಿಷೇಕ | - ಡಿ॥ ಎಸ್. ಆರ್. ಪೂಜಾರ್ | 09 |
| ಅನಂತ ಸುಖ - ಸಂತೋಷ ನೀಡುವ ಮಾಸ ಫಾಲ್ಗುಣ | - ಶ್ರೀಮತಿ. ವಾರುಣಿ ಹೊನ್ನಾಳಿ | 12 |
| ಹೊಳವನಹಳ್ಳಿ ಮತ್ತು ಕ್ಯಾಮೇನ ಹಳ್ಳಿಯ ಸುಂದರ ದೇವಾಲಯಗಳು | - ಕೆಂಗೇರಿ ಚಕ್ರಪಾಣಿ | 16 |
| ತಿರುಕ್ಕೋವಲೂರ್ | - ಶ್ರೀಮತಿ ಸೂರ್ಯವಂಶಿ | 18 |
| ಹರಿಕಥಾಮೃತಸಾರ ಮಹಿಮೆ ಅಪಾರ | - ಶ್ರೀಮತಿ ಪ್ರಿಯಪ್ರಾಣೇಶ ಹರಿದಾಸ | 21 |
| ಯುಗಾದಿ | - ಡಾ॥ ಗುರುರಾಜಪೋಶೆಟ್ಟಿ ಹಳ್ಳಿ | 24 |
| ರಾಮನ ದರುಶನ ಭಾಗ್ಯದಿಂದ ಪುನೀತಳಾದ ಶಬರಿ | - ಹನುಮಂತ ಮ. ದೇಶಕುಲಕರ್ಣಿ | 31 |
| ಅಮೂಲ್ಯ ಆಸ್ತಿ - ಸಂಕೀರ್ತನ ಭಂಡಾರ | - ಎಸ್. ವೆಂಕಟೇಶಮೂರ್ತಿ | 33 |
| ಶ್ರೀರಾಮ ನವಮಿ | - ಶ್ರೀಮತಿ ಕೆ.ವಿ. ಪದ್ಮಾವತಿ | 34 |
| (ಪುಸ್ತಕ ಪರಿಚಯ) ಭಕ್ತಿಯಿಂದ ಬೌದ್ಧಿಕತೆಗೆ ವ್ಯಾಸರಾಜರ ಪರಂಪರೆಯನ್ನು ಮರು ಓದುವ ಅಗತ್ಯ | - ಪ್ರಣವ | 36 |
| ಶ್ರುತಿಗಳ ಮಂಗಳ ಸಂದೇಶ | - ಕಲ್ಯಾಣಿ ಮೂರ್ತಿರಾಮನಾಥಪುರ | 37 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್. ನರಸಿಂಹನ್ | 40 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 42 |
| ಶ್ರೀ ವೆಂಕಟಾಚಲ ಮಹಾತ್ಮ್ಯೆ | - ಶ್ರೀಮತಿ ಎನ್. ಪಾರ್ವತಿ | 44 |
| ರಾಶಿಫಲಗಳು | - ಶ್ರೀಮಾತಾ ಅನುಗ್ರಹ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ವಿನೀತಭಾವವೇ ಎಲ್ಲರಿಗೂ ಭೂಷಣ | - ಎ.ಆರ್. ರಘುರಾಮ | 48 |
| ಚಿತ್ರಕಥೆ - ಶ್ರೀರಾಮ - ಸುಗ್ರೀವರ ಸ್ನೇಹ | - ಆರ್.ಕೆ.ವಿ | 52 |

**ಮುಖಚಿತ್ರ** - ಶ್ರೀ ಸೀತಾ ಸಮೇತ ಶ್ರೀಕೋದಂಡರಾಮಸ್ವಾಮಿ, ಒಂಟಿಮಿಟ್ಟ
**ಹಿಂಬದಿಚಿತ್ರ** - ಅನ್ನಮಾಚಾರ್ಯರು (ಚಿತ್ರಕಲೆ-ದೇವನಾಥನ್)

## ಸಂಪಾದಕೀಯ

# ಧರ್ಮದ ಮತ್ತೊಂದು ಹೆಸರೇ "ಶ್ರೀರಾಮ"

**ಭಾ**ರತೀಯ ಸಂಸ್ಕೃತಿಯಲ್ಲಿ ಪರ್ವದಿನಗಳು ಕೇವಲ ಆಚಾರಕ್ಕೆ ಪರಿಮಿತವಾದುದಲ್ಲ. ಅವು ನಮ್ಮ ಜೀವನದ ರೀತಿಯನ್ನು ಬದಲಿಸಿಕೊಳ್ಳುವ ಅವಕಾಶವನ್ನು ನೀಡುವಂತಹವಾಗಿವೆ. ಅಂತಹಾ ಪುಣ್ಯದಿನಗಳಲ್ಲಿ ಅತ್ಯಂತ ವಿಶೇಷವಾದುದೆಂದರೆ ಅದು "ಶ್ರೀರಾಮನವಮಿ" ಅಯೋಧ್ಯಾಪತಿಯಾದ ಶ್ರೀರಾಮಚಂದ್ರನು ಅವತರಿಸಿದ ಪುಣ್ಯದಿನ. ಧರ್ಮವೆಂದರೇನು? ಒಬ್ಬ ವ್ಯಕ್ತಿಯ ಆದರ್ಶ ಜೀವನ ಹೇಗಿರಬೇಕು? ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ನಮ್ಮೆದಿರಿಗೆ ನಿಲ್ಲುತ್ತದೆ. ಅದಕ್ಕೇ "ರಾಮೋ ವಿಗ್ರಹವಾನ್‌ಧರ್ಮ" ಅಂದರೆ ಧರ್ಮಕ್ಕೆ ಉತ್ತಮವಾದ ಉದಾಹರಣೆ ಶ್ರೀರಾಮ.

ಶ್ರೀರಾಮನು ರಾಜನಾಗುವ ಮೊದಲು ಒಬ್ಬ ಆದರ್ಶವಂತನಾದ ಮಗ, ಪತಿ, ಸೋದರ, ಮಿತ್ರ, ಪಿತೃವಾಕ್ಯ ಪರಿಪಾಲನೆಗಾಗಿ ರಾಜ್ಯವನ್ನೇ ತ್ಯಜಿಸಿ ವನವಾಸವನ್ನು ಸ್ವೀಕರಿಸಿದ ಧೀಶಾಲಿ! ಆತನ ತ್ಯಾಗಬುದ್ಧಿ, ಸತ್ಯನಿಷ್ಠೆ ಇಂದಿನ ಆಧುನಿಕ ಸಮಾಜಕ್ಕೆ ಅತ್ಯ ಗತ್ಯವಾದಂತಹಾ ಗುಣಗಳಾಗಿವೆ. ಅಧಿಕಾರ, ಸಂಪತ್ತು, ಸ್ವಾರ್ಥಕ್ಕಾಗಿ ನೀತಿಯನ್ನು ನ್ಯಾಯವನ್ನು ಬಿಡುವಂತಹಾ ಈ ಕಾಲದಲ್ಲಿ "ಧರ್ಮೋ ರಕ್ಷತಿ ರಕ್ಷಿತಃ" ಎಂಬ ಸತ್ಯವನ್ನು ತನ್ನ ಜೀವನದಲ್ಲಿ ಸಾರಿ ಹೇಳಿದ ಮಹಾನುಭಾವ ಶ್ರೀರಾಮಚಂದ್ರ! ರಾಮಾಯಣ ಒಂದು ಇತಿಹಾಸ ಮಾತ್ರ ಅಲ್ಲಾ-ಒಂದು ಜೀವನ ಶಾಸ್ತ್ರವೆಂದೂ ಹೇಳಬಹುದು. ಅದರಲ್ಲಿ ಬರುವ ಪ್ರತಿಯೊಂದು ಪಾತ್ರವೂ ಒಂದೊಂದು ಪಾಠ ವಾಗಿದೆ. ಸೀತಾದೇವಿಯ ಸಹನೆ, ಲಕ್ಷ್ಮಣ ಶತ್ರುಘ್ನರ ಸೇವಾತತ್ಪರತೆ, ಹನುಮಂತಹ ದಾಸ್ಯಭಕ್ತಿ, ಭರತನ ತ್ಯಾಗ - ಇವೆಲ್ಲವೂ ನಮಗೆ ಮನುಷ್ಯರಾಗಿ ಹುಟ್ಟಿದ ಮೇಲೆ ಹೇಗಿರಬೇಕೆಂದು ತಿಳಿಸುತ್ತಿವೆ. ಅದಕ್ಕೇ ಶ್ರೀರಾಮನ ದೇವಾಲಯದಲ್ಲೇ ಅಲ್ಲದೇ, ಪ್ರಜೆಗಳ ಹೃದಯ ಗಳಲ್ಲೂ ನಿತ್ಯನೂತನನಾಗಿ ನೆಲೆಸಿದ್ದಾನೆ. ಈ ಶ್ರೀರಾಮನವಮಿಯ ಸಂದರ್ಭದಲ್ಲಿ ಪೂಜೆಗಳು ವ್ರತಗಳಿಗೇ ಸೀಮಿತವಾಗದೇ ಶ್ರೀರಾಮನ ಆದರ್ಶ ಗುಣಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಆಚರಿಸುವುದಕ್ಕೆ ಮುಂದಾಗೋಣ. ಸಂಕಲ್ಪವನ್ನು ಮಾಡೋಣ. ಸತ್ಯ, ನ್ಯಾಯ, ಕರ್ತವ್ಯನಿಷ್ಠೆ ಎಂಬ ಬೆಲೆಯನ್ನು ಮತ್ತಷ್ಟು ವೃದ್ಧಿಗೊಳಿಸಿಕೊಂಡು ಸಮಾಜದಲ್ಲಿ ಧರ್ಮದ ಬೆಳಕನ್ನು ಬೆಳಗಿಸೋಣ. ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ - ಇದೇ ಶ್ರೀರಾಮನಿಗೆ ನಾವು ಬೆಳಗಿಸುವಂತಾಹ ಬೆಳಕು.

ಇನ್ನು ಈ ಮಾಸದಲ್ಲೇ ಮುಖ್ಯವಾದ ಚೈತ್ರಮಾಸವು ಪ್ರಾರಂಭವಾಗುವುದು, ಆ ಪುಣ್ಯದಿನವನ್ನು 'ಯುಗಾದಿ' ಅಥವಾ 'ಉಗಾದಿ' ಎಂದು ಆಚರಿಸುವುದು ಪ್ರತೀತಿ. ಈಗ ಪ್ರಭವಾದಿ ಅರವತ್ತು ಸಂವತ್ಸರಗಳಲ್ಲಿ ನಲವತ್ತನೆಯ 'ಪರಾಭವ' ನಾಮ ಸಂವತ್ಸರಕ್ಕೆ ಕಾಲಿ ಡುತ್ತಿದ್ದೇವೆ. ಕಳೆದ 'ವಿಶ್ವಾವಸು' ನಾಮ ಸಂವತ್ಸರದಲ್ಲಿ ಸವಿದಂತಹಾ ಸಿಹಿ ಘಟನೆಗಳನ್ನು ಮೆಲಕು ಹಾಕುತ್ತಾ ನೂತನ ಸಂವತ್ಸರ ದಲ್ಲಿ ನಡೆಯುವಂತಹಾ ಕೆಲಸಗಳು ಯಾವುದೇ ಅಡೆತಡೆಯಿಲ್ಲದಂತೆ ನಡೆಯಲೆಂದು ದೇವರನ್ನು ಪ್ರಾರ್ಥಿಸೋಣ.


32,000 ಸಾವಿರ ಕೀರ್ತನೆಗಳನ್ನು ರಚಿಸಿದ ಪದಕವಿತಾ ಪಿತಾಮಹ, ದ್ರವಿಡಾಗಮ ಸಾರ್ವಭೌಮ, ವಾಗ್ಗೇಯಕಾರರಾದ 'ಶ್ರೀಮಾನ್ ತಾಳ್ಳಪಾಕ ಅನ್ನಮಾಚಾರ್ಯರ' 523 ನೆಯ ವರ್ಧಂತಿಯನ್ನು ಈ ತಿಂಗಳ ಫಾಲ್ಗುಣ ಬಹುಳ ಮಾಸದ ದ್ವಾದಶಿಯಂದು ತಿರುಮಲೆ ತಿರುಪತಿ ದೇವಸ್ಥಾನದವರು ಅತ್ಯಂತ ವೈಭವದಿಂದ ತಿರುಪತಿಯಲ್ಲಿ ಮತ್ತು ಅವರು ಜನ್ಮಿಸಿದ ಕಡಪ ಜಿಲ್ಲೆಯ ತಾಳ್ಳಪಾಕದಲ್ಲಿ ನಡೆಸುವುದು ಮೊದಲಿನಿಂದಲೂ ಬಂದಿರುವ ಸಂಪ್ರದಾಯ. ಎಲ್ಲಾ ದಿಕ್ಕುಗಳಲ್ಲೂ ವ್ಯಾಪಿಸಿರುವ ಅವರ ಸಂಕೀರ್ತನೆಗಳನ್ನು ನೆನಪಿಸಿಕೊಳ್ಳುತ್ತಾ ಅವರಿಗೆ ವಿನಮ್ರಪೂರ್ವಕವಾದ ನಮಸ್ಕಾರಗಳನ್ನು ಸಮರ್ಪಿಸೋಣ.

ತಿರುಮಲೆಯ ಸಪ್ತಗಿರಿಯಲ್ಲಿ ಅನೇಕ ಪವಿತ್ರವಾದ ತೀರ್ಥಗಳಿವೆ. ಅವುಗಳಲ್ಲಿ ಅತ್ಯಂತ ಮಹಿಮೆಯನ್ನು ಹೊಂದಿರುವಂತಹದು 'ಕುಮಾರಧಾರ ತೀರ್ಥ' ಆ ತೀರ್ಥ ಮುಕ್ಕೋಟಿಯೂ ಈ ತಿಂಗಳಿನಲ್ಲೇ ಬರುವುದು ಅತ್ಯಂತ ಸಂತೋಷದಾಯಕವಾದ ವಿಷಯ ವಾಗಿದೆ. ವರ್ಷಕ್ಕೊಮ್ಮೆ ಫಾಲ್ಗುಣ ಹುಣ್ಣಿಮೆಯ ಸಂದರ್ಭದಲ್ಲಿ ಪ್ರಕೃತಿಯ ಸೌಂದರ್ಯದ ನಡುವೆ ನಿರ್ವಹಿಸುವ ಕುಮಾರಧಾರ ತೀರ್ಥ ಮುಕ್ಕೋಟಿಯನ್ನು ದರ್ಶಿಸಿ, ಸ್ನಾನವನ್ನು ಆಚರಿಸುವುದನ್ನು ಭಕ್ತರು ಪ್ರತ್ಯೇಕವಾದ ಅನುಭವವನ್ನು ಪಡೆಯುತ್ತಾರೆ.

ಇನ್ನು ಲಕ್ಷ್ಮೀಜಯಂತೀ, ಮತ್ಸ್ಯಜಯಂತಿ, ಹೋಲಿ, ಧರ್ಮರಾಜದಶಮಿಯಂತಹಾ ಹಬ್ಬಗಳು, ಹಾಗೇ ತಿರುಪತಿ ಶ್ರೀ ಕೋದಂಡ ರಾಮಸ್ವಾಮಿ, ವಾಲ್ಮೀಕಿಪುರದಲ್ಲಿರುವ ಶ್ರೀಪಟ್ಟಾಭಿರಾಮ, ಒಂಟಿಮಿಟ್ಟ ಶ್ರೀ ಕೋದಂಡರಾಮಸ್ವಾಮಿ ಬ್ರಹ್ಮೋತ್ಸವಗಳು, ತಿರು ಮಲೆಯಲ್ಲಿ ನಡೆಯುವ ಶ್ರೀಹರಿಯ ವಸಂತೋತ್ಸವಗಳು ಈ ತಿಂಗಳಿನಲ್ಲೇ ಬರುವುದು ವಿಶೇಷ. ಈ ಉತ್ಸವಗಳಲ್ಲಿ ಭಕ್ತಿಶ್ರದ್ಧೆಗಳಿಂದ ಪಾಲ್ಗೊಂಡು ಎಲ್ಲರೂ ಸ್ವಾಮಿಯ ಕೃಪೆಗೆ ಪಾತ್ರರಾಗೋಣ ಬನ್ನಿ.

"ಓಂ ನಮೋ ವೇಂಕಟೇಶಾಯ"






# ಮಾಘಮಾಸದ ಶುಕ್ಲ ಪಕ್ಷದ ಸ್ನಾನದ ಮಹಿಮೆ

**– ಶ್ರೀಧರ ರಾಯಸಂ**

ಮಾಘಮಾಸದಲ್ಲಿ ಅದರಲ್ಲೂ ಶುಕ್ಲ ಪಕ್ಷದ ಮಾಘ ಸ್ನಾನವನ್ನು ಯಾರು ತಪ್ಪದೇ ಮಾಡಿದರೆ ತಮ್ಮ ಸಂಪೂರ್ಣ ಅಭೀಷ್ಟೆಗಳನ್ನು ಪಡೆಯುವರು ಎಂದು ಪುರಾಣಗಳಲ್ಲಿ ತಿಳಿಸಿದ್ದಾರೆ. ಇದರ ಮಹತ್ವವನ್ನು ಭೃಗು ಋಷಿಗಳು ಒಂದು ಸನ್ನಿವೇಶವನ್ನು ವಿವರಿಸಿದ್ದಾರೆ. ಪೂರ್ವದಲ್ಲಿ ಪ್ರಜೆಗಳು ದುಃಖತಪ್ತರಾಗಿ ಮಳೆ ಬೆಳೆಯಿಲ್ಲದೆ ಹತ್ತು ದಿಕ್ಕಿಗೆ ದಿಕ್ಕಾಪಾಲಾಗಿ ಓಡಿ ಹೋದರು. ಹಿಮ ಪರ್ವತ ಮತ್ತು ಸಹ್ಯಪರ್ವತದ ಮಧ್ಯ ಸ್ಥಳದ ಭಾಗದಲ್ಲಿ ವೇದಾಧ್ಯಯನ ಎಲ್ಲವೂ ನಿಂತು ಹೋಗಿ, ಧರ್ಮಕ್ಕೆ ಲೋಪವು ಬರಲು ಹಣ್ಣು, ಹಂಪಲು, ಗೆಡ್ಡೆ, ಗೆಣಸುಗಳು ಬೆಳೆಯದೆ ನೀರಿನ ಅನಾನುಕೂಲ ಆಗಲು, ಅನಿವಾರ್ಯವಾಗಿ ಭೃಗು ಋಷಿಗಳು ಶಿಷ್ಯರೊಂದಿಗೆ ರೇವಾನದಿಯ ತೀರದಿಂದ ಸಹ್ಯ ಪರ್ವತಕ್ಕೆ ಹೋಗಿ ನೆಲೆಸಿದರು. ಸಹ್ಯ ಪರ್ವತವು ಕೈಲಾಸ ಪರ್ವತದಂತೆ ಶೋಭಿಸಿ, ಅಲ್ಲಿಯ ಪಶ್ಚಿಮ ಪ್ರದೇಶದ ಮಣಿಕೂಟವೆಂದು ಪ್ರಸಿದ್ಧವಾದ ಬಂಗಾರ ಪರ್ವತ ಮೂವತ್ತೆರಡು ಸಾವಿರ ಯೋಜನ ವಿಸ್ತಾರ ಹೊಂದಿತ್ತು, ಅನೇಕ ಮರಗಳಿಂದ ಶೋಭಿಸುತ್ತಿತ್ತು. ಪರ್ವತದ ಶಿರಸ್ಸು ಹತ್ತು ಯೋಜನ ಅದರ ತಳಭಾಗ ಹದಿನಾರು ಯೋಜನವುಳ್ಳದಾಗಿತ್ತು. ದುರ್ಭಿಕ್ಷೆ ಮಳೆ ಬೆಳೆಯಿಲ್ಲದೆ ಭೃಗು ಋಷಿಗಳು ಶಿಷ್ಯರೊಂದಿಗೆ ಅಲ್ಲಿಗೆ ಬಂದು ಅದನ್ನು ನೋಡಿ ಅಲ್ಲಿಯೇ ಸಂತೋಷದಿಂದ ನೆಲೆಸಲು ನಿರ್ಧರಿಸಿದರು. ತಪಸ್ಸನ್ನು ಮಾಡಲು ಸೂಕ್ತ ಪ್ರದೇಶವೆಂದು ಸಂತೋಷದಿಂದ ನೆಲೆಸಿದರು. ಹೀಗೆ ಆ ಪರ್ವತದಲ್ಲಿ ಭೃಗು ಋಷಿಗಳು ಶಿಷ್ಯರೊಂದಿಗೆ ವಾಸಮಾಡುತ್ತಿರಲು,ಅಲ್ಲಿಗೆ ಕಿನ್ನರ ದಂಪತಿಗಳು ಬಂದರು. ಕಿನ್ನರ ದಂಪತಿಗಳು ಭೃಗು ಋಷಿಗಳಿಗೆ ಶಿಷ್ಯ ಗುಂಪಿಗೆ ನಮಸ್ಕರಿಸಿ,ದುಃಖದಿಂದ ತಲೆ ಬಗ್ಗಿಸಿ ನಿಂತರು. ಅಚ್ಚರಿಯಿಂದ ಭೃಗು ಋಷಿಗಳು, ಯಾಕೆ ದುಃಖತಪ್ತರಾಗಿ ಬಂದಿರುವಿರಿ ಎಂದು ಅವರ ಮುಖವನ್ನು ನೋಡುತ್ತಾ ಪ್ರಶ್ನಿಸಿದರು. ಕಿನ್ನರ ಪುರುಷನಾದ ವಿದ್ಯಾಧರನು ಮುನಿಗಳೆ ನಾವು ಪುಣ್ಯ ಫಲದಿಂದ ದೇವತಾ ದೇಹವನ್ನು ದಿವ್ಯ ಸ್ತ್ರೀ ಸುಖ ಅನುಭವಿಸಿದರೂ,ನನ್ನ ಮುಖ ಮಾತ್ರ ಹುಲಿಯ ಮುಖದಂತಿದೆ. ಇದು ಯಾವ ಕರ್ಮ ಫಲವೆಂದು ತಿಳಿಯಲಿಲ್ಲ. ಇದನ್ನು ಸ್ಮರಿಸಿಕೊಂಡು ನನಗೆ ನನ್ನ ಮನಸ್ಸಿಗೆ ಯಾವ ಸುಖವಿಲ್ಲದಂತಾಗಿದೆ. ಆದರೆ ನನ್ನ ಪತ್ನಿ ರೂಪವತಿ ಮಧುರವಾದ ಧ್ವನಿಯುಳ್ಳವಳಾಗಿ ನರ್ತನ ಗಾನ ಸಹ ಮಾಡುವವಳು. ಇವಳು ಬಾಲ್ಯದಲ್ಲಿ ವೀಣಾ ನುಡಿಸುವುದನ್ನು ಕಂಡು ನಾರದ ಮಹರ್ಷಿಗಳು ಸಹ ಸಂತೋಷಪಟ್ಟಿದ್ದಾರೆ. ಇಂದ್ರ ದೇವರು ಸಹ ಸಂತೋಷಪಟ್ಟಿದ್ದಾರೆ. ರುದ್ರದೇವರು ಸಹ ಮುದಗೊಂಡಿದ್ದಾರೆ. ಸೌಂದರ್ಯಾದಿಗಳಲ್ಲಿ ಇವಳನ್ನು ಸಹ ಯಾರೂ ಮೀರಿಸಲು ಸ್ವರ್ಗದಲ್ಲಿ ಯಾವ ಸ್ತ್ರೀಯರೂ ಇಲ್ಲವೆನ್ನಬಹುದು. ದೇವತಾ ಮುಖದಲ್ಲಿರುವ ನನ್ನ ಪತ್ನಿ ಎಲ್ಲಿ ಹುಲಿ ಮುಖವಿರುವ ನಾನೆಲ್ಲಿ ಅದಕ್ಕಾಗಿ ನಾನು ಸದಾ ಮನಸ್ಸಿನಲ್ಲಿ ವ್ಯಥೆಪಡುತ್ತಿರುವೆನು. ಇದಕ್ಕೆ ಕಾರಣ ಏನೆಂದು ಭೃಗು ಋಷಿಗಳನ್ನು ವಿದ್ಯಾಧರನು ಪ್ರಶ್ನಿಸಿದನು. ಅದಕ್ಕೆ ಋಷಿಗಳು ಉತ್ತರಿಸುತ್ತಾ, ಎಲೈ ವಿದ್ಯಾಧರ, ನಿನ್ನ ಅಲ್ಪವಾದ ಕರ್ಮವು ಪರಿಣಾಮದಲ್ಲಿ ಭಯಂಕರವಾಗಿದೆ. ನೀನು ಪೂರ್ವ ಜನ್ಮದಲ್ಲಿ ಮಾಘಮಾಸದ ಏಕಾದಶಿ ಉಪವಾಸ ಮಾಡಿ, ದ್ವಾದಶಿಯಲ್ಲಿ ತೈಲಾಂಭ್ಯಂಜನವನ್ನು ಮಾಡಿರುವಿ. ಹುಲಿ ಮುಖ ಅದಕ್ಕಾಗಿ ಬಂದಿರುವುದು. ನೀನು ಏಕಾದಶಿ ಉಪವಾಸವನ್ನು ಮಾಡಿ ಮರು ದಿನ ದ್ವಾದಶೀ ಪಾರಣಿ ಮಾಡಿ ಆ ಮೇಲೆ ತ್ರಯೋದಶಿ ಬಂದಿತೆಂದು ತೈಲಾಂಭ್ಯಂಜನವನ್ನು ಮಾಡಿದ್ದಿ. ಅದರಿಂದ ನಿನಗೆ ಹುಲಿ ಮುಖ ಬಂತೆಂದು ಒಂದು ವೇಳೆ ದ್ವಾದಶೀ ಇರುವಾಗಲೇ ಅಭ್ಯಂಜನ ಮಾಡಿದ್ದರೇ, ನೀನು ಸಂಪೂರ್ಣ ಹುಲಿಯಾಗು ಬಿಡುತ್ತಿದ್ದಿ. ಇದಕ್ಕೆ ಒಂದು ದೃಷ್ಟಾಂತ ಹೇಳುವೆ ಎಂದು ಭೃಗು ಋಷಿಗಳು ಒಂದು ಕಥೆಯನ್ನು ಹೇಳಿದರು. ಈ ಹಿಂದೆ ಒಬ್ಬ ರಾಜ ಪುರೂರವ ದ್ವಾದಶೀ ತಿಥಿಯಂದು ಅಭ್ಯಂಜನವನ್ನು ಮಾಡಿ ಕುರೂಪಿ ಆಗಿ ದುಃಖಪಡುತ್ತಾ ದೇವತಾ ಸರೋವರದಲ್ಲಿ ಹತ್ತಿರ ವಾಸ ಮಾಡುತ್ತಾ ಆ ಸರೋವರದಲ್ಲಿ ಸ್ನಾನ ಮಾಡುತ್ತಾ ಶುದ್ಧನಾಗಿ



ಪರಮಾತ್ಮನನ್ನು ಸ್ಮರಿಸುತ್ತಾ ಒಂದು ತಿಂಗಳು ಆಹಾರ ಹೀನ ವಾಗಿ ತಪಸ್ಸು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿ, ಪರ ಮಾತ್ಮನು ಅವನು ಹಿಂದೆ ಏಳು ಜನ್ಮಗಳಲ್ಲಿ ಮಾಡಿದ್ದ ಪೂಜೆ ತಿಳಿದು ಕೊಂಡು, ಪ್ರತ್ಯಕ್ಷನಾದನು.

ಮಾಘ ಮಾಸದ ಶುಕ್ಲ ಪಕ್ಷದ ದ್ವಾದಶೀ ತಿಥಿಯಂದು ಈ ಹಿಂದೆ ಮಾಡಿದ್ದು ಜ್ಞಾಪಿಸಿ ಪರಮಾತ್ಮ ಅವನಿಗೆ ಶಂಖದ ತೀರ್ಥದಿಂದ ಅಭಿಷೇಕ ಮಾಡಿ ಅತ್ಯಂತ ಸುಂದರ ರೂಪವನ್ನು ಪಡೆಯುವ ಹಾಗೆ ಮಾಡಿದನು. ಇದರಿಂದ ದೇವಲೋಕದ ಅಪ್ಸರಾ ಸ್ತ್ರೀಯರು ಅವನ ಸೌಂದ ರ್ಯವನ್ನು ಕಂಡು ಆಶೆ ಪಟ್ಟರು. ತದನಂತರ ಸುಂದರ ರೂಪವನ್ನು ಪಡೆದು, ಪುರೂರವ ರಾಜನು ತನ್ನ ಊರಿಗೆ ವಾಪಸ್ಸು ಹೊರಟನು. ಎಲೈ ವಿದ್ಯಾಧರನೆ, ನೀನೂ ಸುಂದರ ರೂಪ ಪಡೆಯಲು ಮಣಿಕೂಟ ಪರ್ವತದ ನದಿಯ ನೀರಿನಲ್ಲಿ ಮಾಘ ಸ್ನಾನವನ್ನು ಮಾಡು. ಅದರ ವಿಧಿ ವಿಧಾನಗಳನ್ನು ತಿಳಿಸುವೆ ಎಂದು ಭೃಗು ಋಷಿಗಳು ಹೇಳಿದರು.

ಪುಷ್ಯ ಶುಕ್ಲ ಏಕಾದಶಿ ತಿಥಿ ಆರಂಭಿಸಿ ಬರಿ ನೆಲದ ಮೇಲೆ ಮಲಗಿ ಒಂದು ತಿಂಗಳು ಆಹಾರವಿಲ್ಲದೆ ಮೂರು ಹೊತ್ತು ಸ್ನಾನ ಮಾಡಿ ದೇವ ರನ್ನು ಪೂಜಿಸು. ಭೋಗವನ್ನು ತ್ಯಜಿಸಿ ಮಾಘ ಶುಕ್ಲ ಏಕಾದಶಿ ಉಪವಾಸ ಮಾಡಿ ಶುದ್ಧನಾಗಬೇಕು. ನಂತರ ನಿನಗೆ ದ್ವಾದಶಿ ತಿಥಿಯಂದು ಮಂತ್ರ ದಿಂದ ಪವಿತ್ರ ನೀರನ್ನು ಅಭಿಷೇಕ ಮಾಡುವೆ ಆಗ ನಿನ್ನ ಮುಖ ಮನ್ಮಥನಂತೆ ಆಗುತ್ತದೆ. ನಂತರ ನಿನ್ನ ಮುಖ ದೇವತೆಗಳ ಮುಖದಂತಾಗುವುದು. ನಿನ್ನ ಪತ್ನಿಯೊಂದಿಗೆ ಸುಖವಾಗಿ ಜೀವಿಸಬಹುದು. ಮಾಘಮಾಸದ ಪ್ರಭಾವವನ್ನು ತಿಳಿದುಕೊಂಡು ಯಾವಾಗಲೂ ತಪ್ಪದೇ ಮಾಘಸ್ನಾನ ಮಾಡಬೇಕು. ಹೀಗೆ ಭೃಗು ಋಷಿಗಳು ಮಾಘಸ್ನಾನ ಪರಮ ಪವಿತ್ರ ಎಂದು ತಿಳಿಸಿ ಹೇಳಿದರು.

ವಿದ್ಯಾಧರನು ಅವರ ಹತ್ತಿರ ಇದ್ದು, ತನ್ನ ಪತ್ನಿ ಯೊಂದಿಗೆ ನದಿಯಲ್ಲಿ ಸ್ನಾನ ಮಾಡಿದನು ಭೃಗು ಋಷಿಗಳು ಅನುಗ್ರಹ ಆಶೀರ್ವಾದದಿಂದ ತನ್ನ ಅಭೀಷ್ಟೆಗಳನ್ನು ಹೊಂದಿ ದನು. ತರುವಾಯ ಆತನು ದೇವತೆಗಳಂತೆ ಮುಖವುಳ್ಳವ ನಾಗಿ ಮಣಿ ಪರ್ವತದಲ್ಲಿ ಸಂತೋಷದಿಂದ ಕಾಲ ಕಳೆ ದನು. ಭೃಗು ಋಷಿಗಳು ಅವನಿಗೆ ಅನುಗ್ರಹ ಮಾಡಿ ಅವರೂ ಸಹ ವಿಂಧ್ಯ ಪರ್ವತಕ್ಕೆ ಹೊರಟರು. ಸ್ವಲ್ಪ ಸಮಯ ಕಳೆದ ಮೇಲೆ ಶಿಷ್ಯರಿಂದ ಕೂಡಿ, ಭೃಗುಋಷಿಗಳು ರೇವಾನದಿ ತೀರಕ್ಕೆ ಹೋದರು. ಹೀಗೆ ಶುಕ್ಲ ಪಕ್ಷದ ಮಾಘಮಾಸದ ಸ್ನಾನ ಅತಿ ಪವಿತ್ರ ಎಂದು ಪುರಾಣಗಳ ಇತಿಹಾಸದ ಮೂಲಕ ತಿಳಿದು, ನಮ್ಮ ಅಭೀಷ್ಟೆಗಳನ್ನು ಪೂರೈಸಿಕೊಳ್ಳ ಬಹುದು.




# ಶ್ರೀರಾಮ ರಾಜ್ಯಾಭಿಷೇಕ

– ದಿ॥ಎಸ್. ಆರ್. ಪೂಜಾರ್

ಲಂಕಾಧೀಶ ರಾವಣನ ಸಂಹಾರದ ನಂತರ ಪ್ರಭು ಶ್ರೀರಾಮನು ಲಂಕಾಧೀಶನನ್ನಾಗಿ ರಾವಣನ ಸಹೋದರ ವಿಭೀಷಣನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ರಾಜನನ್ನಾಗಿ ಅಲಂಕರಿಸಿದನು. ಆಗ ವಿಭೀಷಣನು ಶ್ರೀರಾಮನನ್ನು ಕೋರಿದ್ದೇನೆಂದರೆ ಪ್ರಭೋ ಯುದ್ಧದಲ್ಲಿ ಹೋರಾಡಿದ ನಿಮಗೆ ದಣಿವಾಗಿರಬಹುದು. ದಯಮಾಡಿ ಸ್ನಾನವನ್ನು ಮಾಡಿ ದಿವ್ಯ ವಸ್ತ್ರಗಳನ್ನು ಧರಿಸಿ ಭೋಜನ ಮಾಡಿ ವಿಶ್ರಾಂತಿಯನ್ನು ಪಡೆಯಿರಿ ಎಂದು ಪ್ರಾರ್ಥಿಸಿದನು. ಕೆಲ ದಿನಗಳು ಇಲ್ಲಿ ತಂಗಿ ಅಯೋಧ್ಯೆಗೆ ತೆರಳಿರಿ ಎಂದನು. ಆಗ ಭಗವಾನ್ ಶ್ರೀರಾಮನು ವಿಭೀಷಣನಿಗೆ ಹೇಳಿದ್ದೇನೆಂದರೆ ರಾಜಾ ವಿಭೀಷಣ ಈಗ ನಾನು ವಿಶ್ರಾಂತಿ ಪಡೆಯುವ ಸಮಯವಿಲ್ಲ. ನನ್ನ ಸಹೋದರ ಮಹಾಬಾಹು ಭರತನು ಸಂಕಷ್ಟದಲ್ಲಿದ್ದಾನೆ. ಆತನು ನಾನು ಯಾವಾಗ ದರುಶನ ನೀಡುವೆನೋ ಎಂದು ಹಗಲಿರುಳು ಹಂಬಲಿಸುತ್ತಿದ್ದಾನೆ. ನಾನು ಅಯೋಧ್ಯೆಗೆ ಕೂಡಲೇ ಹೋಗದಿದ್ದರೆ ಭರತನು ಅಗ್ನಿಪ್ರವೇಶ ಮಾಡಲು ಸಿದ್ಧನಾಗಿದ್ದಾನೆ. ನಾನು ಕೂಡಲೇ ಹೋಗಿ ಅನಾಹುತವನ್ನು ತಪ್ಪಿಸಿ ಸಮಾಧಾನ ಪಡಿಸಬೇಕಾಗಿದೆ. ಆದ್ದರಿಂದ ನೀನು ನನ್ನ ಪ್ರಯಾಣದ ಬಗ್ಗೆ ವ್ಯವಸ್ಥೆ ಮಾಡು ಎಂದನು ಶ್ರೀರಾಮ.

ಪ್ರಭು ಶ್ರೀರಾಮನ ಅಣತಿಯಂತೆ. ವಿಭೀಷಣನು ತನ್ನ ಸಹೋದರನಾದ ಕುಬೇರನ ಪುಷ್ಪಕ ವಿಮಾನವನ್ನು ಲಂಕೆಗೆ ತರಿಸಿದನು. ವಿಶ್ವಕರ್ಮನು ನಿರ್ಮಿಸಿದ ಆ ಪುಷ್ಪಕವಿಮಾನವು ಶಿಖರದಂತೆ ಎತ್ತರವಾಗಿತ್ತು. ಅದು ಪ್ರಯಾಣಿಸುವವರ ಮನಸ್ಸಿನಂತೆ ತನ್ನ ವೇಗವನ್ನು ನಿಯಂತ್ರಿಸುತ್ತಿತ್ತು. ಅದರ ಬಾಗಿಲುಗಳು ಸುವರ್ಣಾಚ್ಛಾದಿತವಾಗಿದ್ದವು. ವಿಮಾನದ ಗೋಡೆಗಳು ಮುತ್ತು, ರತ್ನಗಳಿಂದ ಅಲಂಕೃತವಾಗಿದ್ದವು. ಕಿಡಿಕಿಗಳಿಗೆ ರೇಷ್ಮೆ ಹಾಗೂ ಮುತ್ತಿನ ಸರಗಳನ್ನು ಇಳಿ ಬಿಡಲಾಗಿತ್ತು. ವಿಮಾನದ ಮೆಟ್ಟಿಲುಗಳು ಬೆಳ್ಳಿಯಿಂದ ಮಾಡಲ್ಪಟ್ಟಿದ್ದವು. ಆ ರಥದ ಒಳಗೆ ಬೆಳ್ಳಿ ಕುಂಡಲಿಗಳಲ್ಲಿ ವರ್ಷಾವಧಿ ಸುಂಗಧ ಸೂಸುವ ಪುಷ್ಪಗಳು ಅರಳಿದವು. ಇದಲ್ಲದೆ ವಿವಿಧ ಫಲವೃಕ್ಷಗಳು ರಸಭರಿತವಾಗಿ ಎಲ್ಲ ಬಗೆಯ ಫಲಗಳಿಂದ ಶೋಭಿಸುತ್ತಿದ್ದವು ವಿಮಾನವು ಜನಸಾಂದ್ರತೆ ಕಡಿಮೆ ಇದ್ದಾಗ ಚಿಕ್ಕದಾಗಿಯೂ ಜನಸಂಖ್ಯೆ ಹೆಚ್ಚಿದಾಗ ವಿಶಾಲವಾಗುವ ವ್ಯವಸ್ಥೆಯನ್ನು ವಿಶ್ವಕರ್ಮನು ನಿರ್ಮಿಸಿದ್ದನು ಕುಳಿತುಕೊಳ್ಳಲು ಮೃದುವಾದ ಹಂಸದ ತುಪ್ಪಳಿನಿಂದ ಮಾಡಲಾಗಿತ್ತು. ಫಲವೃಕ್ಷಗಳು ಕೈಗೆ ಎಟುಕುವಂತಿದ್ದವು ಹಾಗೂ ಅನೇಕ ಬಗೆಯ ಹಣ್ಣುಗಳು ಒಂದೇ ಗಿಡದಲ್ಲಿ ಬಿಟ್ಟ ರಸಭರಿತ ಹಣ್ಣುಗಳಾದ ಮಾವು, ಮೂಸಂಬೆ, ಕಿತ್ತಳೆ, ಸೇಬು, ದ್ರಾಕ್ಷಿ ಮೊದಲಾದ ಫಲಗಳನ್ನು ಪಡೆಯಬಹುದಾಗಿತ್ತು. ಬಂಗಾರದ ನೀರಿನ ಹೊಳೆಯಲ್ಲಿ ಸುವಾಸನೆಯುಳ್ಳ ತಂಪಾದ ಪಾನೀಯವನ್ನು ಪಾನಮಾಡಬಹುದಾಗಿತ್ತು. ಪುಷ್ಪಕ ವಿಮಾನವು ವೇಗವಾಗಿ ಚಲಿಸುವಾಗ ಅಲ್ಲಾಟವಾಗದೆ ಸಾಗುತ್ತಿತ್ತು. ಹೊರಗಿನ ದೃಶ್ಯಗಳನ್ನು ನೋಡಲು ಪಾರದರ್ಶಕ ಕಿಟ್ಟಿಗಳಿದ್ದವು.





ಪ್ರಭು ಶ್ರೀರಾಮನು ಸೀತಾ ಸಮೇತ ಲಕ್ಷ್ಮಣನೊಂದಿಗೆ ತನ್ನ ಕಪಿ ಸೈನ್ಯದೊಂದಿಗೆ ಬಂದು ಆಸೀನನಾದನು. ಶ್ರೀರಾಮನು ಆಜ್ಞೆಯಂತೆ ಪುಷ್ಪಕ ವಿಮಾನವು ಅಯೋಧ್ಯೆಯ ಕಡೆಗೆ ಸಾಗಿತ್ತು. ವಿಮಾನ ಆಕಾಶದೆತ್ತರಕ್ಕೆ ಹಾರಿದಾಗ ಸೀತೆಗೆ ಕಿಟಕಿಯ ಮೂಲಕ ಹೊರಗಿನ ದೃಶ್ಯವನ್ನು ತೋರಿಸಿದನು ಸಮುದ್ರದ ತೊರೆಗಳ ಅರ್ಭಕ್ಷ ಗಿರಿಶಿಖರಗಳ ಅದ್ಭುತ, ನದಿ ಝರಿಗಳ ಪ್ರಸಾತ, ಸೃಷ್ಟಿ ಸೌಂದರ್ಯದ ಹಚ್ಚಹಸಿರು, ಜಲಪಾತ, ಹಾಗೂ ಪುಣ್ಯಕ್ಷೇತ್ರಗಳ ದೇಗುಲಗಳನ್ನು ಸೀತೆಯು ಕಣ್ತುಂಬಿಕೊಂಡು ಪುಲಕಿತಳಾದಳು. ಕೆಲವೇ ಕ್ಷಣಗಳಲ್ಲಿ ವಿಮಾನವು ಭಾರದ್ವಾಜ ಮುನಿಗಳ ಆಶ್ರಮಕ್ಕೆ ಬಂದಿತು.

ಶ್ರೀರಾಮನ ಆದೇಶದಂತೆ ವಿಮಾನವು ಭಾರದ್ವಾಜ ಮುನಿಗಳ ಆಶ್ರಮಕ್ಕೆ ಬಂದಿತು ಶ್ರೀರಾಮನ ಆದೇಶದಂತೆ ವಿಮಾನವು ಭಾರದ್ವಾಜ ಮುನಿಗಳಾಶ್ರಮದ ಹತ್ತಿರ ಇಳಿಯಿತು. ಶ್ರೀರಾಮನು ಸೀತೆಯೊಂದಿಗೆ ಮುನಿಗಳ ಆಶ್ರಮ ಪ್ರವೇಶಿಸುವ ಮುನ್ನ ತನ್ನ ಪರಮ ಸೇವಕ ಹನುಮಂತನನ್ನು ಅಯೋಧ್ಯೆಗೆ ಕಳುಹಿಸಿ ಭರತನಿಗೆ ಇನ್ನು ಕೆಲವೇ ಸಮಯದಲ್ಲಿ ಅಯೋಧ್ಯೆಗೆ ತಲುಪಿಸಿರುವ ಸಂದೇಶವನ್ನು ಕಳಿಸಿದನು.


ಜಾತಕ ಪಕ್ಷಿಯಂತೆ ಕಾಯುತ್ತಿದ್ದ ಭರತನಿಗೆ ವೀರ ಹನುಮಂತನಿಂದ ಶ್ರೀರಾಮನು ಪರಿವಾರ ಸಮೇತ ಆಗಮಿಸಲಿರುವ ಸಮಾಚಾರ ಕೇಳಿ ಹನುಮಂತನನ್ನು ಬಿಗಿದಪ್ಪಿ ಕುಣಿದಾಡಿದನು. ಆ ಸಂದೇಶ ಕೇಳಿದ ಭರತನು ಭಾವುಕನಾಗಿ ಮಾತುಗಳು ಹೊರಡದೆ ಮೈಮರೆತು ಆನಂದಾಶೃಗಳನ್ನು ಸುರಿಸತೊಡಗಿದನು.

ಅಯೋಧ್ಯೆಯ ಪ್ರಜೆಗಳೆಲ್ಲರೂ ಉತ್ಸುಕರಾಗಿ ಶ್ರೀರಾಮನ ಸ್ವಾಗತಕ್ಕೆ ಅಯೋಧ್ಯದ ಪ್ರತಿಬೀದಿಗಳನ್ನು ತಳಿರು ತೋರಣಗಳಿಂದ ಅಲಂಕರಿಸಿ ಥಳಿಹೊಡೆದು ವಿವಿಧ ಬಣ್ಣಗಳ ರಂಗೋಲಿ ಹಾಕಿ ಶೃಂಗರಿಸಿದರು. ಶ್ರೀರಾಮ ಭರತರ ವಾತ್ಸಲ್ಯ ಕಂಡ ಹನುಮಂತನು ಇಂಥವರ ಸೇವಾ ಅವಕಾಶ ತನಗೆ ಸಿಕ್ಕಿದ್ದಕ್ಕಾಗಿ ಸಂತಸದಿಂದ ಕುಣಿದಾಡಿದನು. ಅರಮನೆಯನ್ನು ದೀಪಾಲಂಕಾರದಿಂದ ಬೆಳಗಿಸಿದರು. ರಾಜ ಋಷಿಗಳಾದ ವಶಿಷ್ಠರು

ಶ್ರೀರಾಮನಿಗೆ ಶಿರದಲ್ಲಿ ಅಲಂಕರಿಸಲು ಶ್ರೀಬ್ರಹ್ಮ ದೇವರು ತಾನೇ ಸಿದ್ಧಪಡಿಸಿದ ರತ್ನಖಚಿತ ಕಿರೀಟವು ಸಿದ್ಧಗೊಂಡು ಶ್ರೀರಾಮನ ಶಿರವನ್ನಲಂಕರಿಸಲು ಕಾಯುತ್ತಿತ್ತು. ಋಷಿಗಳ ಆದೇಶದಂತೆ ಸಕಲ ಪುಣ್ಯ ಕ್ಷೇತ್ರಗಳ ತೀರ್ಥವನ್ನು ತರಿಸಲಾಗಿತ್ತು. ಇವರ ಸಂಭ್ರಮ ಮುಗಿಲು ಮುಟ್ಟಿದಾಗ ಕೊಂಬು ಕಹಳೆಗಳು ಮೊಳಗಿ ಶ್ರೀರಾಮನ ಬರುವಿಕೆಯನ್ನು ಸೂಚಿಸಿದವು.

ಶ್ರೀರಾಮನು ಸೀತಾ, ಲಕ್ಷ್ಮಣಾ, ಕಪಿಸೈನ್ಯ ಹಾಗೂ ವಿಭೀಷಣನೊಂದಿಗೆ ಪುಷ್ಪಕ ವಿಮಾನದಿಂದಿಳಿದು ಅಯೋಧ್ಯೆಯ ಪುಣ್ಯ ಭೂಮಿಗೆ ನಮಸ್ಕರಿಸುತ್ತಾ ತಾನಾಗಿ ಓಡೋಡಿ ಬಂದ ಭರತನನ್ನು ಅಪ್ಪಿ ಆತನ ಮೈದಡವಿ ಸಂತೈಸಿದನು. ಮುಗಿಲು ಮುಚ್ಚುವಂತೆ ಜೈ ಜೈಕಾರ ಮೊಳಗಿತು. ಸಕಲ ಋಷಿ ವೃಂದದವರು ಮಂತ್ರ ಘೋಷ ಮಾಡಿದರು.

ಶ್ರೀರಾಮನಿಗೆ ಸುವರ್ಣ ಕಮಲದ ಹಾರವನ್ನು ಹಾಕಿ ಆಶೀರ್ವದಿಸಿ ಶ್ರೀರಾಮನ ಕರ ಪಿಡಿದು ಅರಮನೆಗೆ ಕರೆದೊಯ್ದರು. ಮುತ್ತೈದೆಯರು ಆರತಿ ಬೆಳಗಿದರು ಹಾಗೂ ಪುಷ್ಪಾರ್ಚನೆಯನ್ನು ಮಾಡಿದರು. ನಂತರ ಶ್ರೀರಾಮನು ತನ್ನ ಮಾತೆಯರ ದರ್ಶನಾಶೀ



ರ್ವಾದ ಪಡೆಯಲು ಅರಮನೆಯ ಅಂತಃಪುರಕ್ಕೆ ಬಂದನು. ಮಾತೆಯರಾದ ಕೌಸಲ್ಯ, ಕೈಕಾ ದೇವಿ, ಸುಮಿತ್ರ ಶ್ರೀರಾಮನನ್ನು ಹೃತ್ಪೂರ್ವಕ ವಾತ್ಸಲ್ಯಾ ಲಂಗನೆ ನೀಡಿ ಆಶೀರ್ವದಿಸಿ ಹರಿಸಿದರು.

ಮರುದಿನವೇ ಪಟ್ಟಾಭಿಷೇಕಕ್ಕೆ ಸಕಲ ಸಿದ್ಧತೆಗಳಾಗಿದ್ದವು. ರತ್ನ ಖಚಿತ ಸಿಂಹಾಸನವು ಎಲ್ಲರ ಕಣ್ಣು ಕುಕ್ಕಿಸಿತು. ಮುನಿಶ್ರೇಷ್ಠರು ಶ್ರೀರಾಮನಿಗೆ ಸಕಲ ತೀರ್ಥಗಳಿಂದ ಪ್ರೋತ್ಸಾಹಿಸಿ ಸೀತಾ ರಾಮನನ್ನು ಕರಪಿಡಿದು ಸಿಂಹಾಸನದಲ್ಲಿ ಕುಳ್ಳಿರಿಸಿದರು. ಶ್ರೀರಾಮನು ಪಟ್ಟಾಭಿಷೇಕ ವೈಭವೋಪೇತವಾಗಿ ನೆರವೇರಿತು.

ದೇವತೆಗಳು ಆಕಾಶದಿಂದ ಪುಷ್ಪ ವೃಷ್ಟಿ ಸುರಿಸಿದರು. ಪ್ರಜೆಗಳು ಜೈಜೈಕಾರ ಮಾಡಿದರು. ಸಿಂಹಾಸನದ ಅಕ್ಕಪಕ್ಕದಲ್ಲಿ ಲಕ್ಷ್ಮಣ ಭರತರು ನಿಂತು ಚಾಮರವನ್ನು ಬೀಸುತ್ತಿದ್ದರು. ಮಾರುತಿ ಹಾಗೂ ಶತ್ರುಘ್ನರು ಶ್ರೀರಾಮನ ಸಿಂಹಾಸನದಲ್ಲಿ ಕುಳಿತು ತನ್ಮಯರಾಗಿದ್ದರು.

ಶುಭ ಮುಹೂರ್ತದಲ್ಲಿ ಶ್ರೀರಾಮನಿಗೆ ರತ್ನ ಖಚಿತ,ಕಿರೀಟಧಾರಣೆಗೊಂಡಿತು. ಶ್ರೀರಾಮ ಎಲ್ಲರನ್ನೂ ಆನಂದದ ದೃಷ್ಟಿ ಬೀರಿ ಶುಭ ಸಂದೇಶ ನೀಡಿದನು. ನಂತರ ಪ್ರಜೆಗಳು, ಪ್ರತಿನಿಧಿಗಳು, ಅಕ್ಕ ಪಕ್ಕ ಅರಸರು ಶ್ರೀರಾಮನಿಗೆ ಕಾಣಿಕೆ ನೀಡಿದರು.

ಶ್ರೀರಾಮನು ಈ ಸಂದರ್ಭದಲ್ಲಿ ತನ್ನೊಂದಿಗೆ ಯುದ್ಧದಲ್ಲಿ ಹೋರಾಡಿದವರಿಗೆ ಕಪಿಸೈನಿಕರಿಗೆ ಕೈಗೆ ಬಂದಷ್ಟು ಸುವರ್ಣನಾಣ್ಯಗಳನ್ನು ನೀಡಿ ಸಂತಸಪಟ್ಟನು. ಕೊನೆಗೆ ತನ್ನ ಬಂಟ ಮಾರುತಿಗೆ ತನ್ನ ಕೊರಳಲ್ಲಿದ್ದ ಕಂಠಿಸರವನ್ನು ತಾನೇ ಕರೆದು ಆತನ ಕೊರಳಿಗೆ ಹಾಕಿ ತನ್ನ ಸೇವಕನ ಬಗ್ಗೆ ಹೆಮ್ಮೆಯಿಂದ ಅಪ್ಪಿದನು. ಆದರೆ ಹನುಮಂತ ತನ್ನ ಕೊರಳಲ್ಲಿ ಶ್ರೀರಾಮನು ಹಾಕಿದ ಕಂಠಿಹಾರದಲ್ಲಿದ್ದ ಬೆಲೆಬಾಳುವ ಮುತ್ತುಗಳನ್ನು ಕಿತ್ತಿ ತನ್ನ ಹರಿತದಂತದಿಂದ ಕಚ್ಚಿ ಒಂದೊಂದೇ ಮುತ್ತುಗಳನ್ನು ನೆಲದ ಮೇಲೆ ಬೀಸಾಕುತ್ತಿದ್ದುದನ್ನು ಕಂಡ ಸೀತಾಮಾತೆಗೆ ಹನುಮಂತನ ವರ್ತನೆ ಕಂಡು ಕೋಪದಿಂದ ಕೇಳಿಯೇ ಬಿಟ್ಟಳು.

“ಹನುಮಂತ ನನ್ನ ಪ್ರಭು ಶ್ರೀರಾಮನು ನಿನ್ನ ಸೇವೆ ಮೆಚ್ಚಿ ಅವರೇ ನಿನ್ನ ಕೊರಳಿಗೆ ಹಾಕಿ ಆಶೀರ್ವದಿಸಿದ ಹಾರದಲ್ಲಿಯ ಮುತ್ತುಗಳನ್ನು ಹಲ್ಲಿನಿಂದ ತುಂಡರಿಸಿ ಏಕೆ ಚೆಲ್ಲಿದೆ? ಎಂದು ಕೋಪದಿಂದ ಕೇಳಿದಳು. ಆಗ ಹನುಮಂತ ಸೀತಾ ಮಾತೆಗೆ ಕರಜೋಡಿಸಿ ಹೇಳಿದ್ದೇನೆಂದರೇ ಅಮ್ಮಾ! ನೀವು ಮೊದಲು ಶಾಂತರಾಗಿರಿ ಏಕೆಂದರೆ ನನ್ನ ಪ್ರಭು ಶ್ರೀರಾಮನಿಲ್ಲದ ಯಾವ ವಸ್ತುಗಳೂ ನನಗೆ ಬೇಡ. ಅವರು ತೊಡಿಸಿದ ಹಾಕಿದಲ್ಲಿಯ ಮುತ್ತುಗಳಲ್ಲಿ ನಾನು ಶ್ರೀರಾಮನನ್ನು ಕಾಣಲಿಲ್ಲ. ಆದ್ದರಿಂದ ಕಚ್ಚಿ ಎಸೆದೆ ಎಂದಾಗ ಎಲ್ಲರೊಂದಿಗೆ ಶ್ರೀರಾಮನಿಗೂ ಅಚ್ಚರಿಯುಂಟಾಯಿತು. ಆಗ ಸೀತಾಮಾತೆಯು ಹಾಗಾದರೇ ನಿನ್ನಲ್ಲಿ ಶ್ರೀರಾಮನಿರುವನೇ? ಎಂದು ಕೇಳಿದಳು.

ಹನುಮಂತನು ತಕ್ಷಣವೇ ಎದ್ದು ತನ್ನ ಎದೆಯನ್ನು ಬಗೆದು ಸೀತಾಮಾತೆಗೆ ತೋರಿಸಿದನು. ಹನುಮಂತನು ತನ್ನ ಎದೆಬಗೆದಾಗ ಅಲ್ಲಿ ಶ್ರೀರಾಮಸೀತೆ ಇಬ್ಬರೂ ಇದ್ದರು ಈ ಅದ್ಭುತ ದೃಶ್ಯ ನೋಡಿದವರೆಲ್ಲ **“ಜೈ ಶ್ರೀರಾಮ ಸೀತಾ ಜೈಹನುಮಂತ”** ಎಂದು ಜಯಕಾರ ಮಾಡಿದರು. ಆಗ ಸೀತಾಮಾತೆಗೆ ತನ್ನ ತಪ್ಪಿನ ಅರಿವಾಗಿ ಹನುಮಂತನನ್ನು ತನ್ನ ಹತ್ತಿರ ಕರೆದು ಮೈದಡವಿ ಆಶೀರ್ವದಿಸಿದಳು.

# ಅನಂತ ಸುಖ - ಸಂತೋಷ ನೀಡುವ ಮಾಸ ಫಾಲ್ಗುಣ

ಶ್ರೀಮತಿ ವಾರುಣಿ ಹೊನ್ನಾಳಿ
99160 22982



ಫಾಲ್ಗುಣನೇ ಪಲ್ಲವಿ, ಪಂಕ್ತಿಗಳನ್ನು ಇರಿಸಿ ಮುನ್ನುಡಿ ಬರೆಯುವಾತ. ಮಾಸದ ವಿಶೇಷತೆ ಎಂದರೆ ಚಾಂದ್ರಮಾನ ಮತ್ತೆ ಸೌರಮಾನ ಗಳೆರಡನ್ನು ಸಮ್ಮಿಲನಗೊಳಿಸುವುದು. ಸನಾತನ ಭಾರತೀಯ ಚಿಂತನೆಯಲ್ಲಿ ಸೂರ್ಯ-ಚಂದ್ರರು ಜಗದ ಎರಡು ಕಣ್ಣು. ಜ್ಞಾನೇಂದ್ರಿಯದ ಸಂಕೇತ. ಇವರಿಬ್ಬರ ಗತಿಯನ್ನು ಆಧರಿಸಿಯೇ ಲೋಕದ ವ್ಯವಹಾರ ನಿರ್ದೇಶಿತವಾಗುತ್ತದೆ ಎಂಬುದು ಯುಗ ಯುಗಮಾನಕ್ಕೂ ಸತ್ಯ.

6 ಋತು 12 ಮಾಸದಲ್ಲಿ ಶಿಶಿರ (ಮಾಘ-ಫಾಲ್ಗುಣ) ಅಂತಿಮ ಚರಣಗಳು. ಋತು ಲಕ್ಷಣ ತುಟ್ಟ ತುದಿ ತಲುಪಿದುದನ್ನು ಹೇಳಿದರೆ ಮತ್ತೊಂದೆಡೆ ವಸಂತನ ಆಗಮನವನ್ನೂ ಸದ್ದಿಲ್ಲದೇ ಉದ್ಘೋಷಿಸುವ ಕಾಲಘಟ್ಟ ಎಂಬುದು ವಿಶೇಷದಲ್ಲಿ ವಿಶೇಷ. ಗಡ ಗಡ ನಡುಗಿಸುವ ಚಳಿರಾಯನ ಚಲ್ಲಾಟಕ್ಕೆ ಇನ್ನು ಆಸ್ಪದವೇ ಇಲ್ಲ. ಫಾಲ್ಗುಣ ಮಾಸ ವಿವಿಧ ಗುಣ ಮತ್ತು ಫಲಗಳಿಗೆ ಆಕರವಾಗುವ ಸೃಷ್ಟಿ ಕ್ರಿಯೆ ಮುಂದೆ ಆರಂಭವಾಗುವುದಕ್ಕೆ ಶಿಶಿರ ಚಾಲನೆ ನೀಡುತ್ತಾನೆ. ಇದು ನಿಸರ್ಗದ ವಿಸ್ಮಯವೂ ಹೌದು. ಕಾಲಪುರುಷನ ನಿರ್ಧಾರವೂ ಹೌದು ಎಂಬುದು ಸತ್ಯಸ್ಯಸತ್ಯ.

### ಹೊಸತನ ಮೂಡಲು ಹಳೆಯದೆಲ್ಲವೂ ಉದುರಿ ಹೋಗಬೇಕು.

ಫಾಲ್ಗುಣದ ಮೊಗದಲ್ಲಿ ಶಿಶಿರ ಮೆಲ್ಲನೆ ಪ್ರವೇಶ ಮಾಡಿದ ಎಂದರೆ ಮಾಸದ ಬಹುತೇಕ ಹೊತ್ತು ಮುಂಜಾನೆಯ ಮಂಜು, ಹಿಮಪಾತ ಮತ್ತು ಸಂಜೆಯ ಶೀತ ಮಾರುತಗಳ ನಡುವೆಯೇ ಕಳೆದು ಹೋಗುತ್ತದೆ. ಈ ಮಾಸದಲ್ಲಿ ಮುಂಚಿನಂತೆಯೆ ಕೆಲಸ ಲಘು-ಬೇಗನೆ ಸಾಗುವುದಿಲ್ಲ. ಚಳಿಯ ಕಂಪನಕ್ಕೆ ನಡು-ನಡುವೊಮ್ಮೆ ಬಿಸಿ ಬಿಸಿ ಪಾನೀಯ ಗುಟುಗುರಿಸುತ್ತಿರಬೇಕು ಎನ್ನುತ್ತದೆ ಮನ. ಆಗಲೇ ಅದಕ್ಕೊಂದು ನವ ಚೇತನ.

ಹಸಿರನುಟ್ಟ ತುಂಬಿದ ಬಸುರಿಯಂತೆ ಸಂಭ್ರಮಿಸುತ್ತಿದ್ದ ಮರಗಳೆಲ್ಲವೂ ಒಮ್ಮೆಲೆ ಪಟ ಪಟನೆ ಎಲೆಯುದುರಿಸಿಕೊಂಡು ಪಳೆಯುಳಿಕೆಗಳಂತೆ ನಿಂತು ಬಿಡುತ್ತದೆ. ಸಸ್ಯ ಸಂಕುಲಗಳ ಭೂಮಿಕೆಯಲ್ಲಿ ಎಲ್ಲಿ ನೋಡಿದರೂ ಒಣಗಿದ ಎಲೆಗಳದ್ದೇ ರಾಶಿ ರಾಶಿ ಹಣ್ಣೆಲೆ ಉದುರಿದರೆ ತಾನೇ ಚಿಗುರೆಲೆ ಮೂಡಲು ಅವಕಾಶ! ಹಳೆಯದೆಲ್ಲ ಕಳೆದು ಹೋಗಿ ಹೊಸತನಕ್ಕೆ ನವ ಚಿಗುರು ಮೂಡಲಿ ಎಂದು ಪ್ರಕೃತಿಯೇ ಧ್ವನಿಸುತ್ತದೆ. ಹಾಗೆಯೇ ಶಿಶಿರ ತೆರೆ ಮರೆಗೆ ಸರಿದು ಹೋಗುವ ಹೊತ್ತಿನಲ್ಲಿ ಗಿಡ, ಮರಗಳಲ್ಲಿ ಹೊಸ ಚಿಗುರು ಮೂಡುತ್ತದೆ. ಕೋಗಿಲೆಗಳು ನವ ವರ್ಷದ ಸಂಭ್ರಮಕ್ಕೆ ಉಲಿಯಲು ಮಾವಿನ ಚಿಗುರನ್ನು ತಿಂದು ಕೊರಳನ್ನು ಶುದ್ಧೀಕರಿಸಿಕೊಳ್ಳುತ್ತವೆ.

ಹೌದಲ್ಲವೇ, ಇತ್ತ ಮನುಜರ ನಿತ್ಯದ ಬದುಕಿನ ವ್ಯವಹಾರದಲ್ಲಿ ಅದೆಲ್ಲೋ ಮೂಲೆಯಲ್ಲಿದ್ದ ಉಣ್ಣೆ ಬಟ್ಟೆ, ಸ್ವೆಟರ್, ಜಾಕೆಟ್, ಟೋಪಿಗಳು ಮೈಯನ್ನು ಬೆಚ್ಚನೆ ಅಪ್ಪಿರುತ್ತವೆ. ಹೀಗೆ ಚಳಿಗಾಲ ಕಾಡುತ್ತದೆ,

### ಶರತ್ ಕಾಲದ ವಿದಾಯ - ವಸಂತಕ್ಕೆ ಸ್ವಾಗತ ನೀಡುವ ಭವ್ಯ ಕಾಲ

ಹಿಂದೂ ಪಂಚಾಂಗದ ಸಂವತ್ಸರದ ಕೊನೆಯ ಮಾಸವೇ ಫಾಲ್ಗುಣ. ಹೆಸರಿನಲ್ಲೇ ಇದು ಶುಭಕರ ಮಾಸ ಎಂದು ಧ್ವನಿಸುತ್ತದೆ. ಸಿಹಿಯಾದ (ಫಲ್ಗು) ಗುಣ ಅಥವಾ ಪುಣ್ಯ ಗುಣಗಳನ್ನು ಭರಪೂರವಾಗಿ ನೀಡುವ ತಿಂಗಳು ಎಂದು ಇದರ ಅರ್ಥ. ಇನ್ನೊಂದು ವ್ಯಾಖ್ಯಾನದಲ್ಲಿ ಸಂತೋಷ ಮತ್ತು ಸಂಭ್ರಮ ಸ್ಫುರಿಸುವ ತಿಂಗಳು ಎಂದೇ ಫಾಲ್ಗುಣವನ್ನು ಪರಿಗಣಿಸಲಾಗಿದೆ.

ಚಾಂದ್ರಮಾನ ವರ್ಷದ ಅಂತಿಮ ಚರಣವೇ ಫಾಲ್ಗುಣ. ಇದು ಸೌರಮಾನ ವರ್ಷಕ್ಕೂ ಅಂತಿಮ ಮಾಸ. ಈ ಮಾಸದಲ್ಲಿ ಸೂರ್ಯ ಕುಂಭ ರಾಶಿಯಿಂದ ಮೀನರಾಶಿಗೆ ಪಾದಾರ್ಪಣೆ ಮಾಡುತ್ತಾನೆ. ಫಲ್ಗುಣೀ ನಕ್ಷತ್ರದಲ್ಲಿ ಹುಣ್ಣಿಮೆ ಸಂಭವಿಸುವ ಮಾಸವಾದ್ದರಿಂದ ಇದಕ್ಕೆ ಫಾಲ್ಗುಣ ಎಂಬ ನಾಮಧೇಯ ದೊರಕಿದೆ. ಮಾಸದ ಅಧಿಪತಿ ಗೋವಿಂದ. ಹಳೆಯ ಸಂವತ್ಸರವನ್ನು ಬೀಳ್ಕೊಟ್ಟು. ಹೊಸ ವರ್ಷಕ್ಕೆ ಸ್ವಾಗತ ನೀಡುವ ಈ ಮಾಸದಲ್ಲಿ ಏನೇನು ವಿಶೇಷತೆ, ಆಚರಣೆ ಎಂದು ಒಮ್ಮೆ ಅವಲೋಕಿಸೋಣ.

### ಚಾಂದ್ರಮಾನ ಸೌರಮಾನ ಸಮ್ಮಿಲನ :

ಸೌರಮಾನದ 12 ರಾಶಿಗಳಲ್ಲಿ ಮೀನ-ಕೊನೆಯದು. ಇದರ ನಂತರ ಚಾಂದ್ರಮಾನದ ವಸಂತ ಋತುವಿನೊಂದಿಗೆ ಸೌರಮಾನದ ಮೇಷ ರಾಶಿಗೆ ಸೂರ್ಯನ ಆಗಮನ. ಹೊಸ ವರ್ಷಾರಂಭಕ್ಕೆ ಈ

ಕಾಡಿಸುತ್ತದೆ. ಶಿಶಿರ ಹೀಗೇ-ಈ ಶಿಶಿರ ಸುಮ್ಮನೆ ಬಂದು ಹೋಗುವವನಲ್ಲ, ಸುಮ್ಮನಿರುವವನೂ ಅಲ್ಲ. ಕನಸು-ಕಲ್ಪನೆಗಳನ್ನು ಒಳಗೊಳಗೇ ಕೊರೆದು ಕನವರಿಕೆಗಳ ನೆನಪುಗಳನ್ನು ಹೊತ್ತು ತರುತ್ತಾನೆ. ಸವಿಗನಸಿನಲ್ಲೇ ಮಧುವಾದ ಅನುಭವ ನೀಡುತ್ತಾನೆ. ಕಡೆಗೆ ಕಾಲಚಕ್ರದಲ್ಲಿ ಲೀನವಾಗಿ ಹೋಗುವ ವೇಳೆಗೆ ಬೆಚ್ಚನೆಯ ರಸಿಕ ಸ್ಪಂದನವನ್ನೂ ನೀಡುತ್ತಾನೆ. ವಸಂತದ ಮುಂಜಾನೆಯ ಸೂರ್ಯೋದಯಕ್ಕೆ ನಿಚ್ಚಳ ನೀಲಾಕಾಶವನ್ನು ಬಿಟ್ಟುಕೊಟ್ಟು ವಿರಮಿಸುತ್ತಾನೆ.

### ಬಣ್ಣದೋಕುಳಿಯ ಮಾಸದಲ್ಲಿ ಎಲ್ಲರೂ ಮೀಯೋಣ..

ರಂಗಿನಾಟದ ಹೋಳಿ ಹಬ್ಬ ಎಂದರೆ ಅದು ಭಾರತೀಯರ ಸಂಭ್ರಮಾಚರಣೆಯ ಅತ್ಯಂತ ದೊಡ್ಡ ಹಬ್ಬಗಳಲ್ಲಿ ಒಂದು. ಇಲ್ಲಿ ಯಾವುದೇ ಜಾತಿ, ಮತಗಳ-ಹಿರಿಯರು- ಕಿರಿಯರು ಎಂಬ ಭೇದವಿಲ್ಲದ ಬಹಿರಂಗ ಆಚರಣೆ ಇದು. ಇದಕ್ಕೊಂದು ಧಾರ್ಮಿಕ, ಐತಿಹಾಸಿಕ ಹಿನ್ನೆಲೆಯೂ ಇದೆ.

ಶ್ರೀಕೃಷ್ಣನು ತನ್ನ ಬದುಕಿನ ಬಹುಪಾಲು ಸಮಯವನ್ನು ಆನಂದೋತ್ಸಾಹದಿಂದಲೇ ಕಳೆದಿದ್ದ ಮಥುರಾ, ವೃಂದಾವನ, ಗೋವರ್ಧನ, ಗೋಕುಲ, ನಂದಗಾಂವ್ ಮತ್ತು ಬರ್ಸಾನಗಳಲ್ಲಿ. ಇವೆಲ್ಲವೂ ಹೋಳಿ ಆಚರಣೆಯ ಸಂಭ್ರಮ ಅವೋಘವಾಗಿರುತ್ತದೆ. ಹೋಳಿ ಆಡುವುದು ಎಂದರೆ ದುಷ್ಟ ಶಕ್ತಿಗಳ ಮೇಲೆ ಸಾತ್ವಿಕ ಶಕ್ತಿಗಳ ದಿಗ್ವಿಜಯ ವಿಜಯೋತ್ಸವದ ಸಂಕೇತವೇ ಈ ಹಬ್ಬ. ಬಣ್ಣಗಳ ಈ ಹಬ್ಬವು ಸಾಮಾಜಿಕ-ಸಾಂಸ್ಕೃತಿಕ ಮತ್ತು ಧಾರ್ಮಿಕ ಸಾಮರಸ್ಯವನ್ನು ಎಲ್ಲ ದೇಶಕಾಲಗಳಲ್ಲೂ ಬಿಂಬಿಸುತ್ತದೆ. ವಸಂತನನ್ನು ಸ್ವಾಗತಿಸಲು ನಿಸರ್ಗವೇ ನಲಿಯುತ್ತಿರುವಾಗ ನಾವೇಕೆ ಸುಮ್ಮನಿರಬೇಕು? ಕುಣಿದು ಕುಪ್ಪಳಿಸಿ ಸಂಭ್ರಮಿಸಬೇಕಲ್ಲವೇ? ಅದೇ ರಂಗಿನಾಟ ಹಾಗಾದರೆ ಈ ಹೋಳಿ ಹಬ್ಬ ಏಕೆ ಮತ್ತು ಹೇಗೆ ಎಂದು ತಿಳಿಯೋಣ.



ವೈರಾಗ್ಯ ತಾಳಿ ತಪಸ್ಸಿಗೆ ಕುಳಿತ ರುದ್ರ ದೇವ ಗಿರಿಜೆಯ ಭಕ್ತಿಗೆ ಮೆಚ್ಚಿ ಆಕೆಗೆ ಒಲಿದದ್ದು, ಅದನ್ನು ಸಾಧ್ಯಗೊಳಿಸಿದ ಕಾಮ ದಹನ, ರತಿಯ ವಿಲಾಪಕ್ಕೆ ಕರಗಿದ ರುದ್ರನಿಂದ ಕಾಮ ಅನಂಗನಾಗಿಯೂ ಜೀವಂತವಾಗಿದ್ದು, ಆ ಸಂಭ್ರಮಾರ್ಥವಾಗಿ ಅಸಂಖ್ಯ ರಂಗುಗಳ ಓಕುಳಿಯಾಟ ಮಾಡುವುದು ಪ್ರಾಚೀನ ಸಂಪ್ರದಾಯ. ಇದು ಚಿರಪ್ರೇಮಿಗಳಿಗೊಂದು ಆನಂದಮಯ ಕೂಟವನ್ನೇ ಕಲ್ಪಿಸುತ್ತದೆ.

ಈ ದಿನ ಸಾಂಕೇತಿಕವಾಗಿ ಕಾಮದೇವನ ಮರದ ಮೂರ್ತಿಯನ್ನು ಸುಡಲಾಗುತ್ತದೆ. ನಂತರ ಸಾಮೂಹಿಕವಾಗಿ ಓಕುಳಿ ಆಡಲಾಗುತ್ತದೆ. ಬಗೆ ಬಗೆಯಾದರು ದೇಹದ ಬಣ್ಣ,ಎಲ್ಲರ ನಗೆಯೂ ಒಂದೇ ಅಣ್ಣ-ಎಂದು ಸಾರುವ ಹೋಳಿ ಹಬ್ಬದಾಚರಣೆ, ರಂಗು ರಂಗಾಗುವ ಮೂಲಕ ಸಮಾನತೆ ಸಂದೇಶ ನೀಡುವ ಅಲ್ಲಿ ಸಾಮಾಜಿಕ ತಾರತಮ್ಯ ನಿವಾರಿಸುವ, ಎಲ್ಲರನ್ನೂ ಒಗ್ಗೂಡಿಸುವ ಆಶಯದ ಹೋಳಿ ಇದೆ. ಈ ರಂಗು ಜಗದಗಲ, ಮುಗಿಲಗಲ ವಿಸ್ತರಿಸುವುದು ಈ ಫಾಲ್ಗುಣ ಮಾಸದ ಹುಣ್ಣಿಮೆಯಲ್ಲೇ.

### ಹೋಳಿದಹನ

ಹೋಳಿಕಾ ದಹನ ಮಾಡುವುದು ಫಾಲ್ಗುಣ ಹುಣ್ಣಿಮೆ ಸಂದರ್ಭದ ಇನ್ನೂ ಒಂದು ಆಚರಣೆ. ಹಿರಣ್ಯಕಶಿಪುವಿನ ಸಹೋದರಿ ಹೋಳಿಕಾ ಎಂಬಾಕೆ ತಪಸ್ಸು ಮಾಡಿ ಬೆಂಕಿಯ ತಾಪವನ್ನು ನಿಗ್ರಹ ಮಾಡಿಕೊಳ್ಳುವ ವರವನ್ನು ಬ್ರಹ್ಮದೇವನಿಂದ ಪಡೆದಿದ್ದಳು. ಹರಿ ಧ್ಯಾನವನ್ನು ಬಿಟ್ಟು ನನ್ನ ಧ್ಯಾನವನ್ನೇ ಮಾಡು ಎಂದು ಮಗ ಪ್ರಹ್ಲಾದನಿಗೆ ಹಿರಣ್ಯಕಶಿಪು ಹೇಳುತ್ತಾನೆ. ಆದರೆ ನಿರಂತರ ಹರಿ ಧ್ಯಾನವನ್ನೇ ಮಾಡುತ್ತಿದ್ದ ಬಾಲಕನ ಮೇಲೆ ಉಗ್ರಕೋಪವನ್ನು ತೋರಿ, ಇವನನ್ನು ಬೆಂಕಿಯಲ್ಲಿ ಹಾಕಬೇಕು ಎಂದು ನಿರ್ಧರಿಸುತ್ತಾನೆ.

ಆಗ ಹೋಳಿಕಾಳನ್ನು ಕರೆದು ಪ್ರಹ್ಲಾದನೊಂದಿಗೆ ಬೆಂಕಿಯಲ್ಲಿ ಕುಳಿತುಕೋ. ಅವನನ್ನು ಬೆಂಕಿಯಲ್ಲಿ ಸುಡಲಿ. ನಂತರವಾದರೂ ನನ್ನ ಧ್ಯಾನ ಮಾಡಲಿ ಎಂದು ಆದೇಶಿಸುತ್ತಾನೆ. ಹೋಳಿಕಾ ಹಾಗೆಯೇ ಮಾಡುತ್ತಾಳೆ. ಪ್ರಹ್ಲಾದನು ವಿಷ್ಣುವಿಗೆ ಮಾಡಿದ ಪ್ರಾರ್ಥನೆ ಫಲವಾಗಿ ಅವನನ್ನು ಬೆಂಕಿ ಸುಡಲೇ ಇಲ್ಲ. ಆದರೆ ಇಂಥಾ ಹರಿ ಭಕ್ತಿ ಇರುವ ಪ್ರಹ್ಲಾದನನ್ನು ಬೆಂಕಿ ಜ್ವಾಲೆ ನಡುವೆ ತನ್ನ ತೊಡೆ ಮೇಲೆ ಕೂರಿಸಿಕೊಂಡ ಪಾಪದ ಫಲವಾಗಿ ಹೋಲಿಕಾಳೇ ಸುಟ್ಟು ಭಸ್ಮವಾಗುತ್ತಾಳೆ.

ಬಾಲಕ ಪ್ರಹ್ಲಾದನ ಹರಿಭಕ್ತಿ ಎಲ್ಲರ ಕಣ್ಣು ತೆರೆಸುತ್ತದೆ. ಈ ಪ್ರಸಂಗವನ್ನು ಸ್ಮರಿಸಿಕೊಳ್ಳಲು ಹರಿಯೇ ಸರ್ವೋತ್ತಮ, ಜಗದ್ ರಕ್ಷಕ ಎಂಬುದನ್ನು ಮತ್ತೆ ಮತ್ತೆ ನೆನಪಿಸಿಕೊಡಲು, ಆತನ ಸ್ಮರಣೆ ಮಾಡಿದರೆ ಎಂಥಾ ಸಂಕಷ್ಟಗಳೂ ದೂರ ಹೋಗುತ್ತವೆ ಎಂಬುದನ್ನು ಮತ್ತೆ ಮತ್ತೆ ಅರಿವು ಮಾಡಿಕೊಡಲು ಹೋಳಿಕಾ ದಹನ ಆಚರಣೆ ಮಾಡಲಾಗುತ್ತದೆ.

### ಪಯೋವ್ರತ ಆಚರಣೆ

ಫಾಲ್ಗುಣ ತಿಂಗಳಲ್ಲಿ ಪಯೋವ್ರತ ಆಚರಣೆಗೆ ಮಾನ್ಯತೆ ನೀಡಲಾಗಿದೆ. ಅದಿತಿಯು ತನಗೆ ವಿಷ್ಣುವೇ ಮಗನಾಗಿ ಜನಿಸಿ, ದೇವೇಂದ್ರನಿಗೆ ಬಲಿಯಿಂದ ಉಂಟಾಗುತ್ತಿರುವ ಪೀಡೆಯಿಂದ ರಕ್ಷಿಸಬೇಕು ಎಂದು ಮಾಡಿದ ವ್ರತವೇ ಪಯೋವ್ರತ. ಇದರ ಫಲವೇ ವಾಮನಾವತಾರ. ಸಂತಾನ ಭಾಗ್ಯವನ್ನು ಬಯಸುವವರು ಈ ಮಾಸದಲ್ಲಿ ಕೃಷ್ಣನನ್ನು ಆರಾಧಿಸುವ ಸಂಪ್ರದಾಯವಿದೆ. ಅದಕ್ಕಾಗಿಯೇ ನಿಯಮಾನುಸಾರ ಪಯೋವ್ರತ ಮಾಡುತ್ತಾರೆ. ಉತ್ತಮ ಗುಣ ಸಂಪನ್ನರಾಗಲಿರುವ ಮಕ್ಕಳನ್ನು ಪಡೆಯಲು ಈ ವ್ರತವು ವರದಾನವಾಗಿದೆ.

### ಮಾಸಾಚರಣೆಯ ಆಶಯ ಹೀಗಿದೆ...

ಬಾಹ್ಯವಾಗಿ ಕಾಣುವ ರವಿ ಅಂತರಂಗ ಬೆಳಗುವ ಸೂರ್ಯನೂ ಆಗಬೇಕು. ಹೊರಗೆ ಕಣ್ಮನ ಸೆಳೆಯುವ ನಿಸರ್ಗದ ಸೊಬಗು, ಇಡೀ ಮನುಕುಲದ ಭವ್ಯ ವ್ಯಕ್ತಿತ್ವಕ್ಕೆ ಭೂಷಣವಾಗಬೇಕು. ಹೊರಗಣ ದಿನಕರ



ಪ್ರಚೋದಿಸುವ ಜ್ಞಾನಾಗ್ನಿ ನಮ್ಮೆಲ್ಲರ ದೋಷಗಳನ್ನೂ ದಹಿಸಿಬಿಡುವ ಅಂತರಂಗದ ಪ್ರಾಣಾಗ್ನಿಯಾಗಬೇಕು. (ಇದೇ ಕಾಮ ದಹನದ ಅರ್ಥ ಮತ್ತು ವ್ಯಾಖ್ಯಾನ). ವರ್ಣಾತ್ಮಕ ಮನ ಮತ್ತು ಒಳಗಿನ ಅದಮ್ಯ ಉತ್ಸಾಹಗಳು ವರ್ಣನಾತೀತ ಗಮ್ಯಕ್ಕೆ ಹಾರಬೇಕು. ಆ ಮೂಲಕ ವಾಸ್ತವ ಪ್ರಕೃತಿ ವೈಭವ ಮೇಳೈಸುವ ಪರ್ವ ಕಾಲದಲ್ಲಿ ಅಂತರಂಗದ ದರ್ಶನವೂ ಆಗಬೇಕು ಎಂಬುದು ಈ ಫಾಲ್ಗುಣದ ಬಹು ದೊಡ್ಡ ಆಶಯ. ಇದನ್ನು ಅರ್ಥ ಮಾಡಿಕೊಂಡವರು ಮಾತ್ರ ವಸಂತನನ್ನು ಅರಿಯಬಲ್ಲರು. ಚೈತ್ರದ ಮಹತ್ವವನ್ನು ತಿಳಿದು ಹೊಸ ಬದುಕನ್ನು ಮತ್ತಷ್ಟು ಬಲಪಡಿಸಲು ಸಮರ್ಥರಾದಾರು.

ಫಾಲ್ಗುಣ ಮಾಸವು ಹಿಂದೂ ಧರ್ಮದ ಚಾಂದ್ರಮಾನ ಪಂಚಾಂಗದ ದ್ವಾದಶ ಮಾಸ. ಸೂರ್ಯಕುಂಭ ರಾಶಿಯಲ್ಲಿರುವಾಗ ಬರುವ ಅಮಾವಾಸ್ಯೆಯ ಮಾರನೆಯ ದಿನದಿಂದ ಈ ಮಾಸ ಪ್ರಾರಂಭವಾಗಿ ಮೀನಮಾಸದ ಅಮಾವಾಸ್ಯೆಯಂದು ಪೂರ್ತಿಯಾಗುತ್ತದೆ. ಕುಂಭ ಮತ್ತು ಮೀನ ಈ ಎರಡು ಮಾಸಗಳಲ್ಲಿ ಬರುವ ಅಮಾವಾಸ್ಯೆಗಳ ಮಧ್ಯವರ್ತಿಯ ಕಾಲವೇ ಫಾಲ್ಗುಣ ಮಾಸ. ಸಾಮಾನ್ಯವಾಗಿ ಈ ತಿಂಗಳಿನ ಹುಣ್ಣಿಮೆಯ ದಿವಸ ಫಲ್ಗುಣೀ ನಕ್ಷತ್ರ ಸೇರುವುದರಿಂದ ಇದನ್ನು ಫಲ್ಗುಣ ಅಥವಾ ಫಾಲ್ಗುಣ ಎಂದು ಪ್ರಾಚೀನರು ಕರೆದರು. ಪೂರ್ವ ಫಲ್ಗುಣಿ, ಉತ್ತರ ಫಲ್ಗುಣೀ-ಈ ಎರಡೂ ನಕ್ಷತ್ರಗಳಲ್ಲೊಂದು ಅಥವಾ ಇವುಗಳ ಹಿಂದು ಮುಂದಿನ ನಕ್ಷತ್ರಗಳಲ್ಲೊಂದು ಈ ಹುಣ್ಣಿಮೆಯಂದು ಸೇರುತ್ತವೆ. ಈ ಮಾಸದ ಕೃಷ್ಣಪಕ್ಷದ ಅಷ್ಟಮೀ ದಿವಸ ಮಾಡುವ ಶ್ರಾದ್ಧವೇ ವರ್ಷಾಂತ್ಯದ ಅಷ್ಟಕಾಶ್ರಾದ್ಧ ಎಂದು ಹೆಸರಾಗಿದೆ.


**ವಿಶೇಷ ದಿನಗಳು:**

ಈ ಮಾಸದಲ್ಲಿ ಬರುವ ಆಮಲಕೀ ಏಕಾದಶಿ (ಶುಕ್ಲ ಏಕಾದಶಿ) ಪವಿತ್ರ ದಿನವಾಗಿದೆ. ಇದನ್ನು ಆಚರಿಸುವ ಮೂಲಕ ವ್ಯಕ್ತಿಯು ವಿಷ್ಣುವಿನ ವಾಸಸ್ಥಾನವಾದ ವೈಕುಂಠವನ್ನು ತಲುಪುತ್ತಾನೆ ಎಂದು ನಂಬಲಾಗಿದೆ. ಮರುದಿನವೇ ಗೋವಿಂದ ದ್ವಾದಶಿ. ಈ ದಿನ ವಿಷ್ಣುವನ್ನು ಪ್ರಾರ್ಥಿಸಿ ಗಂಗಾ ನದಿಯಲ್ಲಿ ಸ್ನಾನ ಮಾಡಬೇಕು. ಇದು ಸಾಧ್ಯವಾಗದಿದ್ದರೆ ಹತ್ತಿರದ ನದಿಯಲ್ಲಿ ಮೀಯಬಹುದು. ಇದರಿಂದ ಉತ್ತಮ ಆರೋಗ್ಯ ಪ್ರಾಪ್ತಿ ಇದೆ. ಹೋಳಿ ದಹನ (ಶುಕ್ಲ ಚತುರ್ದಶಿ) ತಿರುಪತಿಯಲ್ಲಿ ತೆಪ್ಪೋತ್ಸವ (ಹುಣ್ಣಿಮೆ) ರಂಗ ಪಂಚಮಿ (ಕೃಷ್ಣ ಪಂಚಮಿ) ಪಾಪವಿಮೋಚನಿ ಏಕಾದಶಿ (ಕೃಷ್ಣ ಏಕಾದಶಿ) ಮತ್ತು ಯುಗಾದಿ ಅಮಾವಾಸ್ಯೆ-ಈ ದಿನಗಳು ತಮ್ಮದೇ ಆದ ವಿಶೇಷತೆಗಳನ್ನು ಹೊಂದಿವೆ. ರಾವಣನನ್ನು ಸಂಹಾರ ಮಾಡಲು ಶ್ರೀರಾಮನು ಉಪವಾಸವನ್ನು ಆಚರಿಸಿದ ದಿನವೇ ವಿಜಯ ಏಕಾದಶಿ. ಉಪವಾಸ ಮತ್ತು ಆಚರಣೆಗಳು ದೇಹವನ್ನು ಶುದ್ಧೀಕರಿಸಲು ಮತ್ತು ಯಶಸ್ಸಿಗೆ ಅಡ್ಡಿಯಾಗುವ ಅಡೆತಡೆಗಳನ್ನು ತಪ್ಪಿಸಲು ಸಹಾಯ ಮಾಡುತ್ತದೆ ಎಂಬುದಕ್ಕೆ ದಿಟ್ಟ ನಿದರ್ಶನವಿದು.

ಶಿಗ್ಮಾ ಆಚರಣೆ ಗೋವಾದಲ್ಲಿ ಪ್ರಖ್ಯಾತವಾಗಿದೆ. ಮಾಸದ ಕೃಷ್ಣಪಕ್ಷದ ಚತುರ್ದಶಿಯಂದು ದೇಶಾದ್ಯಂತ ಮಹಾ ಶಿವರಾತ್ರಿಯು ಸಂಪನ್ನಗೊಳ್ಳುತ್ತದೆ. ರುದ್ರದೇವರ ಆರಾಧನೆಗೆ ಇದು ಜಾಗರಣೆ ಮೂಲಕ ದೊರಕುವ ವಿಶೇಷ ಸಂದರ್ಭವಾದರೆ ರಾಜಸ್ಥಾನದ ಜನಪ್ರಿಯ ಜಾತ್ರೆ ಖತುಶ್ಯಾಮ್ಜಿಯಲಿ ಫಾಲ್ಗುಣ ಮೇಳ ವಿಶ್ವ ಖ್ಯಾತಿಯನ್ನೂ ಗಳಿಸಿದೆ. ಉತ್ತರ ಭಾರತದ ರಾಜ್ಯಗಳಲ್ಲಿ ಪುಲೇರಾದೂಜ್ ಆಚರಣೆಯನ್ನು ಶುಕ್ಲ ಪಕ್ಷ ದ್ವಿತೀಯ ದಿನ ಆಚರಿಸಲಾಗುತ್ತದೆ. ಈ ದಿನವು ಭಗವಾನ್ ಕೃಷ್ಣ ಮತ್ತು ರಾಧೆಯರ ಸಂಯೋಗವನ್ನು ಸೂಚಿಸುವ ದಿನವಾಗಿದೆ.

**ಚಂದ್ರ ಜನಿಸಿದ, ನರಸಿಂಹ ಅವತಾರದ ಸಂದರ್ಭ :**

ಫಾಲ್ಗುಣ ಶುಕ್ಲ ಚೌತಿಗಣೇಶನ ಆರಾಧನೆಗೆ ಪ್ರಶಸ್ತ ಕಾಲವಾಗಿದೆ.(ಎಳ್ಳು) ತಿಲದಿಂದ ತಯಾರಿಸಿದ ಖಾದ್ಯಗಳನ್ನು ಗಣೇಶನಿಗೆ ನೈವೇದ್ಯವಾಗಿ ಸಮರ್ಪಿಸುವುದು, ತಿಲ ಹೋಮಗಳು ಈ ಮಾಸದಲ್ಲಿ ದೋಷ ನಿವಾರಣೆಗೆ ಸಹಕಾರಿ. ಫಾಲ್ಗುಣದಲ್ಲೇ ಶ್ರೀಹರಿಯು ವಿಷ್ಣು ಭಕ್ತ ಪ್ರಹ್ಲಾದನನ್ನು ರಕ್ಷಿಸಲು ನರಸಿಂಹ ಅವತಾರ ತಾಳಿದ. ನರಸಿಂಹನ ಅವತಾರದಲ್ಲಿ ಹಿರಣ್ಯಕಶ್ಯಪುವನ್ನು ಸಂಹಾರ ಮಾಡಿ ಪ್ರಹ್ಲಾದನನ್ನು ರಕ್ಷಿಸಿದ. ಹಾಗಾಗಿಯೇ ಫಾಲ್ಗುಣ ಮಾಸದಲ್ಲಿ ಹರಿಯನ್ನು ಬಹು ವಿಧವಾಗಿ ಆರಾಧಿಸಲಾಗುತ್ತದೆ. ಇದೇ ಮಾಸದಲ್ಲಿ ರುದ್ರದೇವ ಕಾಮದೇವನನ್ನು ಭಸ್ಮಮಾಡಿದ. ಚಂದ್ರನನ್ನು ಶಿರದಲ್ಲಿ ಧರಿಸಿದ. ಫಾಲ್ಗುಣ ಮಾಸವು ಚಂದ್ರನ ಜನನದ ಮಾಸ ಹಾಗಾಗಿ ಮಾಸ ಪರ್ಯಂತ ಚಂದ್ರನ ಪೂಜೆಯೂ ವಿಶೇಷ. ಒತ್ತಡ ನಿವಾರಣೆ, ಇಂದ್ರಿಯಗಳ ನಿಯಂತ್ರಿಸುವ ಶಕ್ತಿ ಹೆಚ್ಚಲು ಚಂದ್ರಾರಾಧನೆ ಬಹು ಉತ್ತಮ. (ಹಾಗಾಗಿಯೇ ಚಂದ್ರಮಾಮನಸೋ ಜಾತಃ... ಎನ್ನುತ್ತದೆ ಪುರುಷ ಸೂಕ್ತ ಮಂತ್ರ)



ದಾನಕ್ಕೂ ಈ ಫಾಲ್ಗುಣ ಮಾಸ ಅತ್ಯಂತ ಪವಿತ್ರ. ಪೂರ್ಣ ಫಲಪ್ರದ. ಉಳ್ಳವರು ಬಡವರಿಗೆ ದವಸ, ಧಾನ್ಯ, ವಿವಿಧ ತೈಲಗಳು, ಋತು ಮಾನದಲ್ಲಿ ದೊರಕುವ ಫಲಗಳು, ಗುಣಮಟ್ಟದ ವಸ್ತ್ರ, ಉಡುಪು ಇತ್ಯಾದಿ ದಾನ ಮಾಡುವ ಪದ್ಧತಿ ಇದೆ. ಇದು ಪಿತೃ ದೇವತೆಗಳಿಗೂ ಪ್ರಿಯವಾಗುವ ಕಾರ್ಯವಾಗಿದೆ. ಹಿರಿಯರ ಅನುಗ್ರಹದಿಂದ ಅನಂತ ಶುಭಫಲ ನಮಗೆ ಪ್ರಾಪ್ತಿಯಾಗುತ್ತದೆ ಎನ್ನುತ್ತವೆ ಶಾಸ್ತ್ರ-ಪುರಾಣ ಆಧಾರಗಳು. ಹಾಗಾಗಿಯೇ ಚೈತ್ರ ಬರುವ ಮುನ್ನವೇ ಪುಣ್ಯ ಸಂಪಾದನೆ ಪರ್ವ ಆರಂಭವಾಗುತ್ತದೆ.

**ರಾಮಾಯಣ - ಮಹಾಭಾರತದ ನಂಟು**

ಫಾಲ್ಗುಣ ಮಾಸ ಅತ್ಯಂತ ಮಹತ್ವ ಪಡೆದ ತಿಂಗಳು. ಏಕೆಂದರೆ ರಾಮಾಯಣ ಮತ್ತು ಮಹಾಭಾರತದ ಪ್ರಮುಖ ಘಟ್ಟಗಳು ಘಟಿಸಿದ್ದು ಇದೇ ಪವಿತ್ರ ಮಾಸದಲ್ಲಿ ಎನ್ನುವುದು ಹಲವರಿಗೆ ತಿಳಿದಿಲ್ಲ. ಈ ಮಾಸದಲ್ಲಿ, ಕೃಷ್ಣ ಪಕ್ಷದ ಅಷ್ಟಮಿಯೇ ಲೋಕಮಾತೆ ಸೀತಾದೇವಿಯ ಜನ್ಮ ದಿನ. ಸಾಮ್ರಾಟನಾಗಿದ್ದ ಜನಕ ಮಹಾರಾಜನು ಸೀತಾದೇವಿಯನ್ನು ಭೂಮಿಯಲ್ಲಿ ಕಂಡು ಕೊಂಡ ಪುಣ್ಯ ಪ್ರದ ದಿನವಿದು. ರಾಮ - ರಾವಣರ ಯುದ್ಧವು ಫಾಲ್ಗುಣ ಬಹುಳ ಪಾಡ್ಯ ಮೊದಲುಗೊಂಡಿತು ಎನ್ನುತ್ತದೆ ಮೂಲ ವಾಲ್ಮೀಕಿ ರಾಮಾಯಣ.

ಲಕ್ಷ್ಮಣ ಮತ್ತು ಮೇಘನಾಥನ ಯುದ್ಧವೂ ಈ ಕಾಲದಲ್ಲೇ ಆಯಿತು. ಮಹಾಭಾರತದಲ್ಲಿ ಧರ್ಮರಾಜ ಫಾಲ್ಗುಣ ಬಹುಳ ಅಷ್ಟಮಿಯಂದು ಜನಿಸಿದ. ಭೀಮನು ಫಾಲ್ಗುಣ ಶುದ್ಧ ತ್ರಯೋದಶಿ ಜನ್ಮ ತಾಳಿದ. ದುರ್ಯೋಧನ, ದುಶ್ಯಾಸನ ಮತ್ತು ಇತರ 15 ಕೌರ ವರೂ ಫಾಲ್ಗುಣದಲ್ಲೇ ಹುಟ್ಟಿದರು. ಈ ಮಾಸದಲ್ಲಿ ಶ್ರೀಕೃಷ್ಣನ ಮೂರು ರೂಪಗಳನ್ನು ಬಾಲ, ಯುವ ಮತ್ತು ಗುರು ಕೃಷ್ಣ ಎಂದು ಪೂಜಿಸುವ ಪದ್ಧತಿ ಇದೆ. ಮಹಾ ಅವತಾರಿ ಎಂದೇ ಖ್ಯಾತರಾದ ಶ್ರೀ ರಾಮಕೃಷ್ಣ ಪರಮಹಂಸರು ಜನಿಸಿದ್ದೂ ಇದೇ ಮಾಸದಲ್ಲಿ.

**ಲಕುಮಿ ಅವತಾರವಾದ ತಿಂಗಳು**

**ಕರಗದ ಸಂಪತ್ತು ನೀಡುವ ಲಕ್ಷ್ಮೀ ಪೂಜೆ :**

ಫಾಲ್ಗುಣ ಶುಕ್ಲ ಪೂರ್ಣಿಮೆಯು ಮಹಾಲಕ್ಷ್ಮೀ ಜಯಂತಿ ಎಂದೇ ಖ್ಯಾತವಾಗಿದೆ. ಸಮುದ್ರ ಮಂಥನದ ಸಮಯದಲ್ಲಿ ಜಗಜ್ಜನನಿ ಶ್ರೀ ಲಕ್ಷ್ಮೀ ದೇವಿಯು ಫಾಲ್ಗುಣ ಪೂರ್ಣಿಮೆಯಂದೇ ಜನಿಸಿದಳು ಎಂದು ನಂಬಲಾಗಿದೆ.

ಅಂದು ಪವಿತ್ರ ನದಿಗಳಲ್ಲಿ ಸ್ನಾನ ಮಾಡುವುದು ಅತ್ಯಂತ ಶ್ರೇಷ್ಠ ಎನಿಸಿದೆ. ನಂತರ ಗಾಯತ್ರಿ ಮಂತ್ರ ಜಪ ಮಾಡುವುದು ಮಾನ್ಯವಾಗಿದೆ.



ಚೈತ್ರ ಮಾಸವು ಧಾರ್ಮಿಕ, ನೈಸರ್ಗಿಕವಾಗಿ ಮತ್ತು ವೈಜ್ಞಾನಿಕವಾಗಿ ವಿಶೇಷ ಮಹತ್ವ ಪಡೆದಿದೆ. ಅದಕ್ಕೆ ಮುಂಗಾಣ್ಕೆಯಾಗಿ ಫಾಲ್ಗುಣ ಈಗ ಅಡಿ ಇಡುತ್ತಿದೆ. ಈ ತಿಂಗಳಲ್ಲಿ ದಾನ ಮಾಡುವುದರಿಂದ ಎಂದಿಗೂ ಕರಗದ ಸದ್ಗುಣಗಳು, ಸಂಪತ್ತು ಪ್ರಾಪ್ತಿಯಾಗುತ್ತದೆ ಎಂದು ಹಲವು ಗ್ರಂಥಗಳು ಉಲ್ಲೇಖ ನೀಡಿವೆ.

**ಕವಿವಾಣಿ ಆಶಯ :**

''ಶಿವಮಂದಿರ ಸಮವೆನ ಸುಂದರ ಸುಮ ಶೃಂಗಾರದ ಗಿರಿ ಶೃಂಗಕೆ.... ಬಾ ಫಾಲ್ಗುಣ ರವಿ ದರ್ಶನಕೆ'' ಎನ್ನುತ್ತದೆ ಕವಿವಾಣಿ. ಫಾಲ್ಗುಣ ಮಾಸದ ರವಿ ದರ್ಶನವನ್ನು ಪಡೆಯಲು ನಮ್ಮೆಲ್ಲರನ್ನೂ ಈ ಸಾಲುಗಳು ಸ್ವಾಗತಿಸುತ್ತದೆ. ಆಗ ತಾನೇ ಉದಯಿಸುತ್ತಿರುವ ಸೂರ್ಯನನ್ನು ಇದು ವರ್ಣಿಸುತ್ತಾ ಉದಯರವಿ ಉಂಟು ಮಾಡಬಹುದಾದ ಪರಿಣಾಮಗಳಿಗೆ ಇರುವ ವಿವಿಧ ಆಯಾಮಗಳನ್ನು ದರ್ಶನ ಮಾಡಿಸುತ್ತದೆ. ಈ ಆಯಾಮಗಳಿಗೂ ಫಾಲ್ಗುಣ ಮಾಸಕ್ಕೂ ಸಂಬಂಧವನ್ನು ಕಲ್ಪಿಸುತ್ತಿದೆ ಎಂಬುದು ವಿಶೇಷ. ಕೊರೆಯುವ ಚಳಿಯ ಆಟವನ್ನು ಕ್ಷೀಣಿಸುತ್ತಾ ಹೃನ್ಮನಗಳಿಗೆ ಆಪ್ಯಾಯಮಾನ ವಾತಾವರಣ ಕಲ್ಪಿಸುವ ವಸಂತನ ಬರುವಿಕೆಗೆ ಅಣಿಯಾಗಿಸುವಲ್ಲಿ ಫಾಲ್ಗುಣ ತನ್ನ ಧನ್ಯತೆಯನ್ನು ಕಂಡು ಕೊಳ್ಳುತ್ತಾನೆ. ಚೈತ್ರಾ ಆಗಮನವನ್ನು ನಾವೆಲ್ಲರೂ ಸ್ವಾಗತಿಸೋಣ, ಶಿಶಿರದ ಸವಿ ನೆನಪಿನೊಂದಿಗೆ.



# ಹೊಳವನಹಳ್ಳಿ ಮತ್ತು ಕ್ಯಾಮೇನ ಹಳ್ಳಿಯ ಸುಂದರ ದೇವಾಲಯಗಳು

- ಕೆಂಗೇರಿ ಚಕ್ರಪಾಣಿ
94483 86886

**ಕೊ**ರಟಗೆರೆ ತಾಲ್ಲೂಕಿನ ಹೋಬಳಿ ಕೇಂದ್ರವಾದ ಹೊಳವನಹಳ್ಳಿಯು ಐತಿಹಾಸಿಕ ಗ್ರಾಮ. ಹೊಳವನ ಹಳ್ಳಿಯು ಒಂದು ಪಾಳೆಯಪಟ್ಟಿನ ಆಡಳಿತ ಕೇಂದ್ರವಾಗಿದ್ದು. ಇಲ್ಲಿ ಹೊಳವನಹಳ್ಳಿಯ ನಾಯಕರು ಸುಮಾರು ಸಾ.ಶ. 1680 ರಿಂದ ಸಾ.ಶ 1776 ರವರೆಗೆ ಆಡಳಿತ ನಡೆಸಿದ್ದರು. ಇವರಲ್ಲಿ ರಣಬಯಿರೇಗೌಡ, ಬಯಜಾಗೌಡ, ಇಮ್ಮಡಿ ರಣ ಬಯಿರೇಗೌಡ, ಮುಮ್ಮಡಿ ರಣಬಯಿರೇ ಗೌಡರುಗಳು ಆಡ ಳಿತ ನಡೆಸಿದ್ದುದಕ್ಕೆ ಶಾಸನಾಧಾರವಿದೆ. ಇವರ ಆಳ್ವಿಕೆಯ ಮೂರು ತಾಮ್ರ ಶಾಸನಗಳು ಹೊಳವನಹಳ್ಳಿಯಲ್ಲಿ ದೊರೆ ತಿವೆ.

ಹೊಳವನಹಳ್ಳಿ ಗ್ರಾಮದ ನಡುವೆ ಶ್ರೀರಾಮ ದೇವಾ ಲಯವಿದೆ. ದೇವಾಲಯವು ಗರ್ಭಗೃಹ. ಅಂತರಾಳ, ನವ ರಂಗ, ಮುಖಮಂಟಪಗಳನ್ನು ಒಳಗೊಂಡ ರಚನೆಯಾಗಿದೆ. ದೇವಾಲಯದ ಪ್ರಧಾನ ಗರ್ಭಗುಡಿಗೆ ಅಂದದ ಇತ್ತೀಚಿನ ಶಿಖರವಿದೆ. ದೇವಾಲಯದ ಸುತ್ತಲೂ ಪ್ರಾಕಾರವಿದ್ದು, ಭಕ್ತಾದಿ ಗಳು ತಂಗಲು ಮಂಟಪವಿದೆ. ಹೊಳವನಹಳ್ಳಿಯ ಶ್ರೀರಾಮ ದೇವಾಲಯದ ಗರ್ಭಗುಡಿಯಲ್ಲಿ ಸೀತಾರಾಮ ಲಕ್ಷ್ಮಣರ ಮೂರ್ತಿಗಳಿವೆ. ಇಲ್ಲಿಯ ಶ್ರೀರಾಮಚಂದ್ರ ಮೂರ್ತಿಯು ವಿಶೇಷವಾಗಿದೆ. ದೇವನು ಚತುರ್ಭುಜನಾಗಿ ಶಂಖ, ಚಕ್ರಗಳನ್ನು ಧರಿಸಿರುವನು. ಸಾಮಾನ್ಯವಾಗಿ ಶ್ರೀ ರಾಮಚಂದ್ರನ ಮೂರ್ತಿಯು ದ್ವಿಬಾಹುವಾಗಿರುವುದು, ಆದರೆ ಹೊಳವನಹಳ್ಳಿಯ ಶ್ರೀರಾಮಚಂದ್ರನು ನಾಲ್ಕು ಬಾಹುಗಳನ್ನು ಹೊಂದಿರುವ ಅಪರೂಪದ ಮೂರ್ತಿಯಾಗಿದೆ.

ದೇವನನ್ನು ವೈಕುಂಠರಾಮಸ್ವಾಮಿಯೆಂದು ಕರೆಯು ವರು. ಅಲಂಕೃತ ಪ್ರಭಾವಳಿಯ ನಡುವೆ ಕಿರೀಟ ಮಕುಟ ವನ್ನು ಧರಿಸಿರುವ ಶ್ರೀರಾಮನು ಹಸನ್ಮುಖಿಯಾಗಿರುವನು. ಶ್ರೀರಾಮಚಂದ್ರನು ಧರಿಸಿರುವ ಪೀತಾಂಬರ, ಕೊರಳಿಗೆ ಧರಿ ಸಿರುವ ಹಾರ,ಭುಜಕೀರ್ತಿ,ಕೈಗೆ ಹಿಡಿದಿರುವ ಬಿಲ್ಲು ಬಾಣಗಳು ಬಹಳ ಕಲಾತ್ಮಕವಾಗಿವೆ. ಶ್ರೀರಾಮನ ಬಲ ಬದಿಯಲ್ಲಿ ಲಕ್ಷ್ಮಣ ಹಾಗೂ ಎಡಬದಿಯಲ್ಲಿ ಸೀತಾಮಾತೆಯ ಬಿಡಿ ಶಿಲ್ಪಗಳಿವೆ. ಅಂತರಾಳದ ಪ್ರವೇಶ ದ್ವಾರದ ಇಕ್ಕೆಲಗಳಲ್ಲಿ ದ್ವಾರಪಾಲಕ ರಾದ ಜಯ ವಿಜಯರಿರುವರು.ನವರಂಗದಲ್ಲಿರುವ ಕಂಬಗಳು ಸರಳವಾಗಿದ್ದು ವಿಜಯನಗರೋತ್ತರ ಶೈಲಿಯಲ್ಲಿದೆ. ಅಂತರಾ ಳದಲ್ಲಿ ಮಾರುತಿಯ ಸಣ್ಣ ಮೂರ್ತಿಯಿದೆ. ದೇವಾಲಯದ ಮುಂದೆ ಧ್ವಜಸ್ತಂಭ ಮತ್ತು ಬಲಿಪೀಠಗಳಿವೆ. ಹೊಳವನಹಳ್ಳಿ ಗ್ರಾಮದಲ್ಲಿ ಮಾರಮ್ಮನ ದೇವಾಲಯ ಮತ್ತು ರಾಘವೇಂದ್ರ ಸ್ವಾಮಿಗಳ ಮಠವಿದೆ.

## ಕ್ಯಾಮೇನಹಳ್ಳಿಯ ಮಾರುತಿ ದೇವಾಲಯ:

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನಲ್ಲಿರುವ ಕ್ಯಾಮೇನಹಳ್ಳಿಯು ತಾಲ್ಲೂಕು ಕೇಂದ್ರದಿಂದ ಕೇವಲ ಹನ್ನೊಂದು ಕಿ.ಮೀ. ದೂರದಲ್ಲಿರುವ ಗ್ರಾಮ. ಕ್ಯಾಮೇನ ಹಳ್ಳಿಯ ಗ್ರಾಮದ ಸಮೀಪ. ದೇವರಾಯನದುರ್ಗದಲ್ಲಿ ಹುಟ್ಟುವ ಜಯ, ಮಂಗಳಿ ಮತ್ತು ಗರುಡಾಚಲ ನದಿಗಳ ಸಂಗಮ ಸ್ಥಳವಿದೆ. ಇದು ಸುಪ್ರಸಿದ್ಧ ಹನುಮಕ್ಷೇತ್ರ. ಕ್ಯಾಮೇನ ಹಳ್ಳಿಯನ್ನು ಹಿಂದೆ ಕಮನೀಯ ಕ್ಷೇತ್ರ ಎಂದು ಕರೆಯಲಾಗಿದೆ. ಕಮನೀಯ ಕ್ಷೇತ್ರವು ಕಾಲಾಂತರದಲ್ಲಿ ಕ್ಯಾಮೇನಹಳ್ಳಿ ಯಾಗಿದೆ ಎಂದು ಪ್ರತೀತಿ.

ಕ್ಯಾಮೇನಹಳ್ಳಿಯ ಆಂಜನೇಯ ದೇವಾಲಯವು ಸುಪ್ರಸಿದ್ಧ ಮಾರುತಿಯ ದೇವಾಲಯವಾಗಿದೆ. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಪ್ರವೇಶ ಮಂಟಪಗಳ ನ್ನೊಳಗೊಂಡ ರಚನೆಯಾಗಿದೆ. ಗರ್ಭಗುಡಿಯಲ್ಲಿ ಸುಮಾರು ಏಳು ಅಡಿಗಳಷ್ಟು ಎತ್ತರವಿರುವ ಮಾರುತಿಯ ಸುಂದರ ಮೂರ್ತಿಯಿದೆ. ಮಾರುತಿಯ ಮುಖವು ಪಾರ್ಶ್ವಕ್ಕೆ ತಿರುಗಿರದೆ, ನೇರವಾಗಿ ಮುಖಮಾಡಿಕೊಂಡು ನಿಂತಿರುವಂತೆ ರಚಿಸ ಲಾಗಿದೆ. ಒಂದು ಶಿಲಾ ಹಲಗೆಯ ಮೇಲೆ ಉಬ್ಬು ಶಿಲ್ಪವಾಗಿ

ಮೂಡಿರುವ ಮಾರುತಿಯ ಎತ್ತಿದ ಬಲಗೈ ಅಭಯ ಹಸ್ತದಲ್ಲಿದೆ. ಎಡಗೈಯಲ್ಲಿ ಸೌಗಂಧಿಕಾ ಪುಷ್ಪವನ್ನು ದೇವನು ಹಿಡಿದಿರುವನು. ಮಾರುತಿಯ ಪಾದದ ಕೆಳಗೆ ರಾವಣನ ಪುತ್ರನಾದ ಅಕ್ಷಕುಮಾರನಿರುವನು. ಕಿರೀಟ ಮಕುಟವನ್ನು ಪವನ ಸುತನು ಧರಿಸಿದ್ದು, ಶಿರದ ಇಕ್ಕೆಲಗಳಲ್ಲಿ ಶಂಖ, ಚಕ್ರಗಳನ್ನು ಉಬ್ಬು ಶಿಲ್ಪಗಳಾಗಿ ರಚಿಸಲಾಗಿದೆ. ಬಾಲವು ಮಾರುತಿಯನ್ನು ಸುತ್ತುವರೆದಿದ್ದು ಬಾಲದಲ್ಲಿ ಗಂಟೆಯಿದೆ. ಗಿರಿಜಾ ಮೀಸೆಯನ್ನು ಹೊಂದಿರುವ ಮಾರುತಿಯ ಮುಖಾರವಿಂದವು ಬಹಳ ಆಕರ್ಷಕವಾಗಿದೆ.



ಅಂತರಾಳದಲ್ಲಿ ನವರಂಗಕ್ಕೆ ತೆರೆದುಕೊಳ್ಳುವ ಗರ್ಭಗುಡಿಗಳಿವೆ. ಬಲಭಾಗದ ಗರ್ಭಗುಡಿಯಲ್ಲಿ ಸೀತಾ,ರಾಮ,ಲಕ್ಷ್ಮಣಾಂಜನೇಯರ ಮೂರ್ತಿಗಳಿವೆ. ಎಡಭಾಗದ ಗರ್ಭಗುಡಿಯಲ್ಲಿ ಶ್ರೀ ಭೂನೀಳಾ ಸಮೇತನಾದ ಶ್ರೀನಿವಾಸ ದೇವರ ಉತ್ಸವ ಮೂರ್ತಿಗಳನ್ನಿರಿಸಲಾಗಿದೆ.

### ಸ್ಥಳಪುರಾಣ :

ಕ್ಯಾಮೇನಹಳ್ಳಿಯ ಪುರಾಣ ಪ್ರಸಿದ್ಧಕ್ಷೇತ್ರ. ಸ್ಕಂದ ಪುರಾಣದ ಉತ್ತರ ಖಂಡದಲ್ಲಿ ಕ್ಷೇತ್ರದ ಬಗ್ಗೆ ಮಾಹಿತಿ ಸಿಗುತ್ತದೆ. ಇದು ಸುಪ್ರಸಿದ್ಧ ದೇವರಾಯನ ದುರ್ಗಕ್ಕೆ ಅತೀ ಸಮೀಪದಲ್ಲಿದೆ. ಇಲ್ಲಿ ಬ್ರಹ್ಮ ದೇವರಿಂದ ಪ್ರತಿಷ್ಠಿತವಾದ ಯೋಗಾನರಸಿಂಹ ಮತ್ತು ದೂರ್ವಾಸ ಮುನಿಗಳಿಂದ ಪ್ರತಿಷ್ಠಿತವಾದ ಭೋಗಾನರಸಿಂಹರ ಗುಡಿಗಳಿವೆ. ಪಾರ್ವತಿ ದೇವಿಯು ತನ್ನ ಪತಿ ರುದ್ರದೇವರಲ್ಲಿ ದೇವರಾಯನ ದುರ್ಗಕ್ಕೆ ಉಪಕ್ಷೇತ್ರವನ್ನು ತಿಳಿಸಲು ಕೋರುತ್ತಾಳೆ.



ರುದ್ರದೇವರು ಕಮನೀಯ ಕ್ಷೇತ್ರವಾದ ಮಾರುತಿಯ ದೇವಾಲಯವು ಉಪಕ್ಷೇತ್ರವಾಗಿದೆ ಎಂದು ತಿಳಿಸುತ್ತಾರೆ. ಇಲ್ಲಿಯ ಮಾರುತಿಯ ಮೂರ್ತಿಯು ಹನುಮ, ಭೀಮ, ಮಧ್ವರು ಮೂರು ರೂಪವನ್ನು ಹೊಂದಿದೆ. ಮೂರ್ತಿಯ ಕಾಲಕೆಳಗೆ ಅಕ್ಷಕುಮಾರನಿದ್ದು, ಬಾಲದಲ್ಲಿ ಗಂಟೆಯನ್ನು ಹೊಂದಿರುವ ಮಾರುತಿಯ ಅವತಾರದಲ್ಲಿ, ಮುಖದಲ್ಲಿ ಮೀಸೆ, ಪಕ್ಕದಲ್ಲಿ ಗದೆಯನ್ನು ಹೊಂದಿರುವ ಭೀಮಸೇನನ ರೂಪದಲ್ಲಿಯು ಹಾಗೂ ಎದುರು ಮುಖವಾಗಿ ದೇವರಾಯನ ದುರ್ಗದ ನರಸಿಂಹನನ್ನು ದರ್ಶಿಸುತ್ತಿರುವ ಮಧ್ವಾಚಾರ್ಯರ ರೂಪದಲ್ಲಿ ಕಾಣಿಸಿಕೊಂಡಿದೆ. ಕ್ಯಾಮೇನಹಳ್ಳಿಯ ಮಾರುತಿಯನ್ನು ಜನಮೇಜರಾಯನು ಪ್ರತಿಷ್ಠಾಪಿಸಿರುವನೆಂದು ಸ್ಥಳೀಯ ಐತಿಹಾಸ.

ಕ್ಯಾಮೇನಹಳ್ಳಿಯ ಹನುಮಂತ ದೇವಾಲಯದಲ್ಲಿ ಮಾಘಮಾಸದ ರಥಸಪ್ತಮಿಯಲ್ಲಿ ಬ್ರಹ್ಮ ರಥೋತ್ಸವವು ಪಾಂಚರಾತ್ರಾಗಮ ರೀತ್ಯಾ ವೈಭವವಾಗಿ ಜರುಗುತ್ತದೆ. ದೇವಾಲಯದ ಪೂಜಾ ಕೈಂಕರ್ಯವು ಮಧ್ವ ಸಂಪ್ರದಾಯದ ರೀತಿಯಲ್ಲಿ ಪ್ರತಿನಿತ್ಯ ಜರುಗುತ್ತದೆ.

### ಹೀಗೆ ಬನ್ನಿ :

ಕ್ಯಾಮೇನಹಳ್ಳಿಯ ಮಾರುತಿ ದೇವಾಲಯಕ್ಕೆ ಬೆಂಗಳೂರಿನಿಂದ ಬರುವವರು. ಬೆಂಗಳೂರು-ನೆಲಮಂಗಲ-ಡಾಬಸ್‌ಪೇಟೆ-ಉರುಡುಗೆರೆ-ಗೊರವನಹಳ್ಳಿ ಲಕ್ಷ್ಮೀ ದೇವಾಲಯದ ತಿರುವಿನಲ್ಲಿ ಬಲಕ್ಕೆ ತಿರುಗಿ ನಂತರ ಕ್ಯಾಮೇನಹಳ್ಳಿ ತಿರುವಿನಲ್ಲಿ ಎಡಕ್ಕೆ ತಿರುಗಿ ಕಮನೀಯ ಕ್ಷೇತ್ರವಾದ ಕ್ಯಾಮೇನಹಳ್ಳಿಯನ್ನು ಸೇರಬಹುದು.

ಕ್ಯಾಮೇನಹಳ್ಳಿಯ ಮಾರುತಿಯನ್ನು ದರ್ಶಿಸಿ, ನಂತರ ಒಂದು ಕಿ.ಮೀ. ದೂರವಿರುವ ಹೊಳವನಹಳ್ಳಿಯ ಶ್ರೀರಾಮ ದೇವಾಲಯವನ್ನು ದರ್ಶಿಸಬಹುದು. ಗೊರವನಹಳ್ಳಿ ತಿರುವಿನಿಂದ ಕ್ಯಾಮೇನಹಳ್ಳಿಯು ಹನ್ನೊಂದು ಕಿ.ಮೀ. ದೂರದಲ್ಲಿದೆ.

ಈ ದೇವಾಲಯದ ದರ್ಶನಕ್ಕೆ ಬರುವವರು ಸುಪ್ರಸಿದ್ಧ ನರಸಿಂಹ ಕ್ಷೇತ್ರ ದೇವರಾಯನ ದುರ್ಗ ಮತ್ತು ಗೊರವನಹಳ್ಳಿಯ ಲಕ್ಷ್ಮಿ ದೇವಾಲಯ ಮತ್ತು ಕೊರಟಗೆರೆಯ ಸಮೀಪವಿರುವ ಚಂಪೇನಹಳ್ಳಿಯ ಶ್ರೀಲಕ್ಷ್ಮೀನರಸಿಂಹ ದೇವಾಲಯಗಳನ್ನೂ ದರ್ಶಿಸಬಹುದು.

# ತಿರುಕ್ಕೋವಲೂರ್

## (ಮಧ್ಯದಿವ್ಯದೇಶ - 2)

**ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**

**ಅನುವಾದ : ಸೂರ್ಯವಂಶಿ**

"ಭಕ್ತೋಪಮರ್ಧರಸಿಕಃ"ಎಂದು ವೇದಾಂತ ದೇಶಿಕರು ಸ್ತುತಿಸಿದಂತಹಾ ಸ್ವಾಮಿ **"ತಿರುಕ್ಕೋವಲೂರ್"** ಎಂಬ ದಿವ್ಯದೇಶದಲ್ಲಿ ತ್ರಿವಿಕ್ರಮನಾಗಿ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಈ ದಿವ್ಯ ದೇಶವು ದಕ್ಷಿಣ ಅರ್ಕಾಟ್ ಜಿಲ್ಲೆಯಲ್ಲಿ ತಿರುವಣ್ಣಾಮಲೈನ ಸಮೀಪದಲ್ಲಿ ನೆಲೆಗೊಂಡಿದೆ. ಪಂಚ ಕೃಷ್ಣಾರಣ್ಯ ಕ್ಷೇತ್ರವೆಂದು ಕರೆಯಲ್ಪಡುವ ಐದು ಕ್ಷೇತ್ರಗಳಲ್ಲಿ ಈ ದಿವ್ಯದೇಶವೂ ಒಂದಾಗಿದೆ. ಮೂವರು ಆಳ್ವಾರರಾದ ಪೋಯ್‌ಗೈಆಳ್ವಾರರು, ಪೂದತ್ತಾಳ್ವಾರ್, ಪೇಯಾಳ್ವಾರುಗಳನ್ನು ಕಾಂಚೀಪುರ, ಮಹಾಬಲಿಪುರ, ಮೈಲಾಪೂರ್‌ನಿಂದ ಈ ದಿವ್ಯದೇಶಕ್ಕೆ ಕರೆಯಿಸಿಕೊಂಡಂತಹಾ ಘನತೆ ಈ ಸ್ವಾಮಿಗೆ ಸಲ್ಲುತ್ತದೆ. ಮೇಲೆ ತಿಳಿಸಿದ ಆಳ್ವಾರರೆಲ್ಲರೂ ಒಬ್ಬೊಬ್ಬರಾಗಿ ಮೃಕಂಡು ಮಹರ್ಷಿ ದೇಹಾಳಿ (ಹೊಸ್ತಿಲು)ಗೆ ಬಂದರು. ಈ ಚಿಕ್ಕ ಪ್ರದೇಶದಲ್ಲಿ ಒಳ್ಳೆಯ ಕುಂಭವೃಷ್ಟಿ ಕಾರ್ಗತ್ತಲಿನಲ್ಲಿ ಒಬ್ಬರನ್ನೊಬ್ಬರು ಅರಿಯದೇ ಪೋಯ್‌ಗೈ ಆಳ್ವಾರರು, ಪೂದತ್ತಾಳ್ವಾರರು, ಪೇಯಾಳ್ವಾರರು ಇಲ್ಲಿಗೆ ಬಂದರು.

ಆ ಮನೆಯ ಆವರಣದಲ್ಲಿ ಒಬ್ಬರು ಮಲಗಿದರೆ ಇಬ್ಬರು ಕುಳಿತುಕೊಳ್ಳಬೇಕು. ಮೂವರು ನಿಂತುಕೊಳ್ಳಬಹುದು ಎನ್ನುವಂತಹಾ ಸ್ಥಿತಿಯಲ್ಲಿದ್ದಾಗ ಆ ಸ್ವಾಮಿಯು ತಿರುಕ್ಕೋವಲೂರ್ ದೇಹಾಳೀಶ ಸ್ವಾಮಿ ಭಕ್ತರ ಸಂರಕ್ಷಣೆಯನ್ನು ಮಾಡುವ ಸಲುವಾಗಿ ಅವರ ನಡುವೆ ನಿಂತಿರುವಾಗ ಈ ಮೂವರಿಗೂ ಆ ಸ್ಥಳವು ಬಹಳ ಇರುಕಾಗಿ ತೋಚಿತು ಕೂಡಲೇ ಒಬ್ಬೊಬ್ಬರೂ ಒಂದೊಂದು ದೀಪವನ್ನು ಬೆಳಗಿಸಿ ಮೂರನೆಯ ಆಳ್ವಾರರಾದ ಪೇಯಾಳ್ವಾರರು ತಮ್ಮ ನಡುವೆ ಇರುವುದು 'ಶ್ರಿಯಃಪತಿ" ಎಂದು ಅರ್ಥವಾಗಿ ಆ ವಿಷಯವನ್ನು ಇತರರಿಗೆ ತಿಳಿಸಿದರು. ಆದ್ದರಿಂದಲೇ ಭಗವಂತನು "ಭಕ್ತೋಪಮರ್ಧರಸಿಕಃ" ಭಕ್ತರ ಸಂತೋಷವನ್ನು ಕಂಡು ತಾನೂ ಆನಂದಿಸುವವನು ಎನ್ನುವಂತಹಾ ಹೆಸರನ್ನು ಪಡೆದನು.

**ವಿಶೇಷಾಂಶಗಳು :**

| | |
|---|---|
| ಸ್ವಾಮಿಯ ಹೆಸರು: | ಆಯನಾರ್ ಗೋಪಾಲನ್, ಕೋವಲನ್ |
| ಅಮ್ಮನವರ ಹೆಸರು : | ಪುಷ್ಪವಲ್ಲಿ, ಪೂಂಕೋವಲ್ ನಾಚ್ಚಿಯಾರ್ |
| ತೀರ್ಥ : | ಪೆಣ್ಣೈನದಿ, ಕೃಷ್ಣತೀರ್ಥ, ಚಕ್ರತೀರ್ಥ |
| ವಿಮಾನ: | ಶ್ರೀಕರ ವಿಮಾನ |
| ಪ್ರತ್ಯಕ್ಷ: | ಮಹಾಬಲಿ, ಮೃಕುಂಡು ಮಹರ್ಷಿ ಬ್ರಹ್ಮ, ಇಂದ್ರ, ಶೌನಕ, ಕಾಶ್ಯಪ, ಕಾವಲರ್, ಕುಶಧ್ವಜ |
| ಕ್ಷೇತ್ರರಕ್ಷಕಿ : | ಯೋಗ ಮಾರ್ಗ ದುರ್ಗ |
| ಆಗಮ : | ವೈಖಾನಸ |
| ಮಂಗಳಾಶಾಸನ ಮಾಡಿದ ಆಳ್ವಾರರು : | ಪೋಯಗೈ ಆಳ್ವಾರರು, ಪೂದತ್ತಾಳ್ವಾರರು, ಪೇಯಾಳ್ವಾರರು, ಮತ್ತು ತಿರುಮಂಗೈ ಆಳ್ವಾರರು |

ಅಷ್ಟಾಕ್ಷರ, ದ್ವಯ, ಚರಮಶ್ಲೋಕ, ಪ್ರತಿಪಾದಕವಾದ ಮೂರು ಪ್ರಬಂಧಗಳನ್ನು ಮೂವರು ಆಳ್ವಾರರು ರಚಿಸಿದರು. ಅಂದಿನಿಂದ ಈ ಸ್ವಾಮಿಗೆ ದೇಹಾಳೀಶಃ ಎಂಬ ಹೆಸರು ಬಂದಿದೆ. "ದೇಹಾಳಿ" ಎಂದರೆ 'ಹೊಸ್ತಿಲು' ಅದರಲ್ಲಿ ದರ್ಶನವನ್ನು ನೀಡಿದನೆಂದು ಅರ್ಥ.

ಈ ದಿವ್ಯದೇಶದ ವೈಭವವನ್ನು ಪದ್ಮಪುರಾಣದಲ್ಲಿ ವಿಶೇಷವಾಗಿ ಹೇಳಲ್ಪಟ್ಟಿದೆ. ಮೂಲಮೂರ್ತಿ ತ್ರಿವಿಕ್ರಮಸ್ವಾಮಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದಾನೆ. ಆ ಸ್ವರೂಪವು ತನ್ನ ಒಂದು ದಿವ್ಯಪಾದವನ್ನು ಭೂಮಿಯ ಮೇಲೆ, ಮತ್ತೊಂದು ದಿವ್ಯಪಾದವನ್ನು ಆಕಾಶದತ್ತ ಎತ್ತಿ, ಭೂಮಿಯನ್ನು ಪಾದದಿಂದ ಅಳೆಯುವ ರೀತಿಯಲ್ಲಿ ನಿಂತಿರುವ ಭಂಗಿಯಲ್ಲಿ ಇನ್ನೆಲ್ಲೂ ಕಂಡು ಬರದ ರೀತಿಯಲ್ಲಿ ಸ್ವಾಮಿಯ ಬಲ ಭುಜ

ದಲ್ಲಿ 'ಶಂಖ', ಎಡಭುಜದಲ್ಲಿ 'ಚಕ್ರವನ್ನು' ಧರಿಸಿ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಇದಕ್ಕೆ ಕಾರಣವೇನೆಂದರೆ ಬಲಿ ಚಕ್ರವರ್ತಿಯ ಅಹಂಕಾರವನ್ನು ಅಡಗಿಸಿ ತ್ರಿವಿಕ್ರಮನಾಗಿ ಶಂಖವನ್ನು ತನ್ನ ಬಲಭುಜದಲ್ಲಿ ಅಂದರೆ ಬಲಗೈಗೆ ಬದಲಾಯಿಸಿಕೊಂಡು ಜೋರಾಗಿ ಶಂಖವನ್ನು ಊದಿದನು. ಹಾಗೇ ಈ ತಿರುಕ್ಕೋವಲೂರ್ ದಿವ್ಯ ದೇಶಕ್ಕೆ ಬಂದನಂತೆ. ಆದ್ದರಿಂದ ಈ ಸ್ವಾಮಿಯ ಬಲಭುಜದಲ್ಲಿ 'ಪಾಂಚಜನ್ಯ' ವೆಂಬ ಶಂಖ, ಎಡಭುಜದಲ್ಲಿ 'ಸುದರ್ಶನಚಕ್ರ' ಇಲ್ಲಿ ನಮಗೆ ಕಂಡು ಬರುತ್ತದೆ. ಅಂದರೆ ಆಯುಧಗಳು ಬದಲಾಗಿರುತ್ತವೆ. ಹಾಗೇ ಮೂಲಮೂರ್ತಿಯ ದಕ್ಷಿಣ ಪಾದದ ಪಕ್ಕದಲ್ಲಿ ಬಲಿ ಚಕ್ರವರ್ತಿ, ಎಡ ಭಾಗದಲ್ಲಿ ಶುಕ್ರಾಚಾರ್ಯ, ಮಾರ್ಕಂಡೇಯ ಮಹರ್ಷಿ ಅವರ ಪತ್ನಿ ಮತ್ತು ಮೂವರು ಆಳ್ವಾರರು ನೆಲೆಸಿರುತ್ತಾರೆ.

ಸ್ವಾಮಿಯ ಮೂಲಮೂರ್ತಿಯ ಸನ್ನಿಧಿಯ ಹಿಂದೆ ವಾಮನ ಮೂರ್ತಿ ನೆಲೆಸಿರುತ್ತಾನೆ. ಆಯನಾರ್ ಗೋಪಾಲನ್, ಕೋವಲನ್ ಎಂಬ ಹೆಸರುಗಳಿಂದಲೂ ಈ ಸ್ವಾಮಿಯು ಕರೆಯಲ್ಪಡುತ್ತಿದ್ದಾನೆ. ಅಮ್ಮನವರು ಪುಷ್ಪವಲ್ಲಿ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದಾಳೆ. ಇವರಿಗೆ ಪೂಂಕೋವಲ್ ನಾಚ್ಚಿಯಾರ್ ಎಂಬ ಹೆಸರೂ ಇದೆ. ತೀರ್ಥವು ಪೆಣ್ಣೆನದಿ, ಕೃಷ್ಣತೀರ್ಥ, ಚಕ್ರತೀರ್ಥ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ವಿಮಾನವು ಶ್ರೀಕರ ವಿಮಾನವೆಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಇಲ್ಲಿ ಮಹಾಬಲಿ, ಮೃಕಂಡು ಮಹರ್ಷಿ, ಬ್ರಹ್ಮ, ಇಂದ್ರ, ಶೌನಕ, ಕಾಶ್ಯಪ, ಕಾವಲರ್, ಕುಶ ಧ್ವಜರಿಗೆ ಸ್ವಾಮಿಯು ಪ್ರತ್ಯಕ್ಷವಾಗಿ ಅನುಗ್ರಹಿಸಿದನೆಂದು ಪುರಾಣವು ತಿಳಿಸುತ್ತಿದೆ. ಮಂಗಳಾಶಾಸನವನ್ನು ಮೂವರು ಆಳ್ವಾರರೊಂದಿಗೆ ತಿರುಮಂಗೈ ಆಳ್ವಾರರು ರಚಿಸಿದ್ದಾರೆ, ಇಲ್ಲಿ ವೈಖಾನಸ ಆಗಮ ಶಾಸ್ತ್ರದ ಪ್ರಕಾರ ಪೂಜೆ ನಡೆಯುತ್ತದೆ.

ಈ ದಿವ್ಯ ದೇಶದಲ್ಲಿ ಕೃಷ್ಣಾವತಾರಕ್ಕೂ ಮೊದಲೂ ಯಶೋದೆಗೆ ಜನ್ಮಿಸಿದ ಯೋಗಮಾಯೆ ಎಂಬ ದುರ್ಗೆಯು ಇಲ್ಲಿ ಒಂದು ಸನ್ನಿಧಿಯಲ್ಲಿ ಅರ್ಥಮಂಟಪದಲ್ಲಿ ನೆಲೆಸಿ ಈ ದಿವ್ಯದೇಶವನ್ನು ಕಾವಲು ಕಾಯುತ್ತಿದ್ದಾಳೆ. ಪ್ರತಿದಿನವೂ ದೇಹಾಳೀಶ ಸ್ವಾಮಿಗೆ, ಅಮ್ಮನವರಿಗೆ ನೈವೇದ್ಯ ಮಾಡಿದ



ನಂತರ ಈ ದುರ್ಗಾದೇವಿಗೂ ನೈವೇದ್ಯವನ್ನು ಮಾಡಲಾಗುತ್ತದೆ.

### ಸ್ಥಳಪುರಾಣ

1. ಮಾರ್ಕಂಡೇಯ ಮಹರ್ಷಿಯ ಕುಮಾರನಾದ ಮೃಕುಂಡು ಮಹರ್ಷಿ ದೇವದೇವನ ತ್ರಿವಿಕ್ರಮ ಅವತಾರವನ್ನು ದರ್ಶಿಸಿ ನಮಸ್ಕರಿಸಬೇಕೆಂದು ಭಾವಿಸಿ, ತನ್ನ ಧರ್ಮಪತ್ನಿಯೊಂದಿಗೆ ಅನೇಕ ದಿವ್ಯದೇಶಗಳನ್ನು ದರ್ಶಿಸುತ್ತಾ ಬರುತ್ತಿರುವ ಸಂದರ್ಭದಲ್ಲಿ ನಾರದಮಹರ್ಷಿಯ ಆದೇಶದ ಮೇರೆಗೆ ಕೃಷ್ಣಭದ್ರ ಎಂಬ ಹೆಸರು ಇರುವಂತಹಾ ಕೃಷ್ಣಾರಣ್ಯ ಕ್ಷೇತ್ರ, ಕೃಷ್ಣಪುರಿ ಎನ್ನುವಂತಹಾ ಈ ತಿರುಕ್ಕೋವಲೂರ್ ದಿವ್ಯದೇಶದಲ್ಲಿ ಆ ಗೋಪಾಲನನ್ನು ನೋಡಿದ ಮೃಕಂಡು ಮಹರ್ಷಿ ದಂಪತಿಗಳು ತಪಸ್ಸು ಮಾಡಿದಾಗ ಅರ್ಧರಾತ್ರಿಯ ಸಮಯದಲ್ಲಿ ಒಬ್ಬ ವೃದ್ಧನಂತೆ ಒಂದು ಚಿಕ್ಕ ಹುಡುಗಿಯೊಂದಿಗೆ ಬಂದು ಅವರಲ್ಲಿ ಭಿಕ್ಷೆಯನ್ನು ಬೇಡಿದನಂತೆ.

ಆಗ ಋಷಿ ಪತ್ನಿಯು ತನ್ನ ಪತಿವ್ರತಾಸಂಕಲ್ಪದಿಂದ ಮಹಾಲಕ್ಷ್ಮಿಯನ್ನು ಸುತ್ತಿಸಿ ಅದರ ಮೂಲಕ ಭೋಜನವನ್ನು ಸಂಪಾದಿಸಿ, ಅವರಿಗೆ ಭಿಕ್ಷೆಯನ್ನು ಸಮರ್ಪಿಸಿದ ಆಂತೆ, ಮೃಕಂಡು ಮಹರ್ಷಿಯ ಭಕ್ತಿಗೆ ಮೆಚ್ಚಿ, ಸಂತೋಷಿಸಿದ

ಭಗವಂತನು ಭೂಮಿಯನ್ನು ಮತ್ತು ಆಕಾಶವನ್ನು ಅಳೆಯುವ ರೀತಿಯಲ್ಲಿ ತ್ರಿವಿಕ್ರಮನಾಗಿ ಅವರಿಗೆ ದರ್ಶನವನ್ನು ನೀಡಿದನಂತೆ ಋಷಿ ದಂಪತಿಗಳು ತಮ್ಮ ಕೋರಿಕೆಯ ಮೇರೆಗೆ ಆ ಶ್ರಿಯಃಪತಿಯ ತ್ರಿವಿಕ್ರಮಾವತಾರ ಸ್ವರೂಪವನ್ನು ಕಣ್ಣಾರೆ ದರ್ಶಿಸಿ ಧನ್ಯರಾದರು. ಹಾಗೇ ಈ ದಿವ್ಯ ದೇಶದಲ್ಲಿ ನೀನು ನೆಲೆಸಬೇಕೆಂದು ಪ್ರಾರ್ಥಿಸಿದಾಗ ಭಗವಂತನು ಅಂದಿನಿಂದ ಇಂದಿಗೂ ಅಲ್ಲೇ ನೆಲೆಸಿ ಎಲ್ಲಾ ಭಕ್ತರಿಗೂ ದರ್ಶನ ಭಾಗ್ಯವನ್ನು ಕರುಣಿಸುತ್ತಿದ್ದಾನೆ.

2. ಕಾಲವನೆಂಬ ಒಬ್ಬ ಮಹರ್ಷಿಯು ಮತ್ತು ಇತರ ಮಹರ್ಷಿಗಳು ಈ ದಿವ್ಯದೇಶದಲ್ಲಿ ತಪಸ್ಸನ್ನು ಆಚರಿಸುತ್ತಿರುವಾಗ ಆ ತಪಸ್ಸಿಗೆ ಭಂಗವನ್ನುಂಟು ಮಾಡುವುದಕ್ಕೆ ಪಾತಾಳಕೇತು ಎಂಬ ರಾಕ್ಷಸನು ಪ್ರಯತ್ನಿಸಿದನು.

ಆಗ ಈ ಮಹರ್ಷಿಗಳೆಲ್ಲರೂ ಭಗವಂತನನ್ನು ಪ್ರಾರ್ಥಿಸಿದಾಗ ಆ ದೇವದೇವನು ಕುಶಧ್ವಜನೆಂಬ ರಾಜನ ಮೂಲಕ ಆ ರಾಕ್ಷಸನನ್ನು ಸಂಹಾರ ಮಾಡಿಸಿ,ಮುನಿಗಳನ್ನು ರಕ್ಷಿಸಿದ ಎಂಬುದು ಮತ್ತೊಂದು ಸ್ಥಳ ಪುರಾಣವು ತಿಳಿಸುತ್ತಿದೆ.

3. ದುರ್ವಾಸ ಮಹರ್ಷಿಯು ಶಾಪದಿಂದಾಗಿ ಸಮಸ್ತ ಐಶ್ವರ್ಯವನ್ನು ಕಳೆದುಕೊಂಡ ಇಂದ್ರನು ಈ ದಿವ್ಯದೇಶಕ್ಕೆ ಬಂದು ಸ್ವಾಮಿಯನ್ನು ಕುರಿತು ತಪಸ್ಸು ಮಾಡಿ ಆ ಭಗವಂತನ ಅನುಗ್ರಹವನ್ನು ಪಡೆದು ತಾನು ಕಳೆದುಕೊಂಡಿದ್ದ ಸಂಪತ್ತನ್ನೆಲ್ಲಾ ಪುನಃ ಪಡೆದು ಕೊಂಡನಂತೆ, ಇವೆಲ್ಲವೂ ಪದ್ಮಪುರಾಣದಲ್ಲಿ ಕಂಡು ಬರುತ್ತದೆ.

ತಿರುವಣ್ಣಾಮಲೈನ ಸಮೀಪದಲ್ಲಿ ಇರುವಂತಹಾ ಅತ್ಯಾಶ್ಚರ್ಯಕರವಾದ ಸ್ವರೂಪದಲ್ಲಿ ಚಿತ್ರ ವಿಚಿತ್ರವಾದ ವರ್ಣಶೋಭಿತವಾದ ತ್ರಿವಿಕ್ರಮಾವತಾರ ಸ್ವರೂಪನಾದ ಈ ಗೋಪಾಲನನ್ನು ದರ್ಶಿಸಿದರೆ ಸಮಸ್ತ ಮಂಗಳವೂ ಸಂತಾನವಿಲ್ಲದವರಿಗೆ ಸಂತಾನವು, ವಿವಾಹವಾಗದಿರುವವರಿಗೆ ಕಂಕಣಭಾಗ್ಯವು ದೊರೆತು ಧನ್ಯರಾಗುತ್ತಾರೆ.

ವಿಕ್ರಮ್ಯ ಯೇನ ವಿಜಿತಾನಿ ಜಗಂತಿ ಭೂಮ್ನಾ
ವಿಶ್ವಸ್ಯ ಯಂ ಪರಮಕಾರಣಮಾಮನಂತಿ ।
ವಿಶ್ರಾವಣಯನ್ ಪ್ರಣಯಿನಾಂ ವಿವಿಧಾನ್ ಪುಮರ್ಥಾನ್
ಗೋಪ್ತಾ ಸ ಮೇ ಭವತು ಗೋಪಪುರಾಧಿರಾಜ ॥

ಓಂ ತ್ರಿವಿಕ್ರಮಾಯ ನಮಃ



## STATEMENT ABOUT OWNERSHIP AND OTHER PARTICULARS ABOUT

## SAPTHAGIRI

**(MONTHLY)**

**FORM IV**

*See Rule 8*

| | | |
|---|---|---|
| 1. Place of Publication | : | TIRUPATI |
| 2. Periodicity of its Publication | : | Monthly |
| 3. Printer's Name | : | Sri R.V. Vijaykumar, BA., BEd. |
| Whether citizen of India | : | Yes |
| Address | : | Dy.Eo.,T.T.D.Press K.T.Road, Tirupati- 517507 |
| 4. Publisher's Name | : | **Dr. V.G.Chokkalingam,** M.A.,Ph.D.,P.G Dip In JMC |
| Whether citizen of India | : | Yes |
| Address | : | Chief Editor (FAC), Chief Editor Office, T.T.D.Press Building, 2nd floor, K.T.Road, Tirupati- 517507 |
| 5. Editor's Name | : | **Dr. V.G.Chokkalingam,** M.A.,Ph.D.,P.G Dip In JMC |
| Whether citizen of India | : | Yes |
| Address | : | Chief Editor Office, T.T.D.Press Building, 2nd floor, K.T.Road, Tirupati. |
| 6. Name and address of individuals who own the News paper and partners or share holders holding more than one percent of the Total Capital | } | Tirumala Tirupati Devasthanams |


*I, V.G. Chokkalingam, hereby declare that the particulars given above are true to the best of my knowledge and belief.*

TIRUPATI
Date : 28-2-2026

**(Sd.) Dr. V.G. Chokkalingam**
*Signature of the Publisher*

# ಹರಿಕಥಾಮೃತ ಸಾರ ಮಹಿಮೆ ಅಪಾರ

- ಶ್ರೀಮತಿ. ಪ್ರಿಯ ಪ್ರಾಣೇಶ ಹರಿದಾಸ
80504 36752




ಹಿಂದಿನ ಸಂಚಿಕೆಯಿಂದ

## ನಾಮಸ್ಮರಣೆ ಸಂಧಿ :

ಶ್ರೀ ಹರಿಕಥಾಮೃತಸಾರದ 13ನೇ ಸಂಧಿಯಾದ ನಾಮಸ್ಮರಣೆ ಸಂಧಿಯಲ್ಲಿ ದಾಸರ ಉಕ್ತಿಯಂತೆ ಕಲಿ ಯುಗದೊಳು ಹರಿನಾಮ ಸಂಕೀರ್ತನೆಯೇ ಪರಮ ದಿವ್ಯ ಔಷಧಿ ಎನ್ನುವಂತೆ ಈ ಸಂಧಿಯಲ್ಲಿ ಹರಿ ನಾಮಸ್ಮರಣೆ ಬಗ್ಗೆ ಹೇಳಿದ್ದಾರೆ.

**ಭಗವದ್ಗೀತೆಯಲ್ಲಿ ಹೇಳಿದಂತೆ**

**ಅನನ್ಯಾಶ್ಚಿಂತಯಂತೋ ಮಾಂ**
**ಯೇ ಜನಾಃ ಪರ್ಯುಪಾಸತೇ।**
**ತೇಷಾಂ ನಿತ್ಯಾಭಿಯುಕ್ತಾನಾಂ**
**ಯೋಗಕ್ಷೇಮಂ ವಹಾಮ್ಯಹಂ॥**

ಯಾರು ಅನನ್ಯಭಾವದಿಂದ ನನ್ನಲ್ಲೇ ಸ್ಥಿರಗೊಂಡ ಭಕ್ತರು ನನ್ನ ಚಿಂತನೆಯನ್ನು ಸದಾ ಮಾಡುತ್ತಾ ನಿಷ್ಕಾಮ ಭಾವದಿಂದ ನನ್ನಲ್ಲಿಯೇ ಸ್ಥಿರಮನಸ್ಕರಾಗಿರುವವರೊ ಅವರ ಯೋಗಕ್ಷೇಮವನ್ನು ನಾನೇ ಸ್ವತಃ ವಹಿಸಿಕೊಳ್ಳುತ್ತೇನೆ.

ಏಕಾದಶ ಇಂದ್ರೀಯಗಳಿಂದ ಮಾಡುವ ಪ್ರತಿ ಕರ್ಮದಲ್ಲಿ ಭಗವಂತನೇ ನಿಂತು ಮಾಡಿಸುವಾತ ಎಂಬ ಮರ್ಮವನ್ನು ತಿಳಿದುಕೊಂಡು ಅವನ ಶರಣಾಗತಿಯಾದರೆ ಅವನು ನಮ್ಮನ್ನು ನಿತ್ಯದಲ್ಲಿ ಕಾಪಾಡುವನು. ಇದನ್ನೇ ಈ ಕಲಿಯುಗದ ಪ್ರಭಾವದಲ್ಲಿ ಭಗವಂತನ ನಾಮಸ್ಮರಣೆ ಯಾವ ರೀತಿಯಲ್ಲಿ ಕಾಣಬೇಕು ಮತ್ತು ಮಾಡಬೇಕು ಎಂಬುದು ಹೇಳಿದ್ದಾರೆ.

**ಪ್ರತಿ ಸಂಧಿಯಂತೆ ಈ ಸಂಧಿಯಲ್ಲಿಯೂ ,**

**ಹರಿಕಥಾಮೃತಸಾರ ಗುರುಗಳ**
**ಕರುಣದಿಂದಾಪನಿತು ಪೇಳುವೆ**
**ಪರಮ ಭಾಗವದ್ಭಕ್ತರಿದನಾದರಿದಿ ಕೇಳುವುದು/ ಪ**
**"ಮಕ್ಕಳಾಡಿಸುವಾಗ ಮಡದಿಯೊಳು ಅಕ್ಕರದಿ ನಗುವಾಗ**
**ಹಯ ಪಲ್ಲಕ್ಕಿ ಗಜ ಮೊದಲಾದ ವಾಹನಗಳು ಏರಿ ಮೆರೆವಾಗ**
**ಬಿಕ್ಕುವಾಗ ಆಕಳಿಸುತಲಿ ದೇವಕ್ಕಿ ತನಯನ ॥ ಸ್ಮರಿಸುತಿಹ ನರ**
**ಸಿಕ್ಕ ಯಮದೂತರಿಗೆ ಅವ ಅವಲ್ಲಿ ನೋಡಿದರು॥"**

ಅಂದರೆ ಸಂಸಾರದಲ್ಲಿ ಹೆಂಡತಿ ಮಕ್ಕಳ ಜೊತೆಯಿರುವಾಗ ಸುಖ ಸಂತೋಷದಲ್ಲಿದ್ದಾಗ, ಅಳುವಾಗ, ಆಕಳಿಸುವಾಗ ಹೀಗೆ ಪ್ರತಿಯೊಂದು ಕರ್ಮದಲ್ಲಿ ನೆನೆಯಬೇಕು. ಹರಿ ಎಂಬ ಎಂಬೆರಡಕ್ಷರವನ್ನು ನಿತ್ಯದಲ್ಲಿ ಸ್ಮರಿಸುತ್ತಾ ನಡೆದರೆ ಒಂದು ಕಿಡಿ ಹತ್ತಿಯನ್ನು ಸುಡುವ ಹಾಗೇ ನಮ್ಮ ಪಾಪ ಕರ್ಮಗಳು ಕಡಿಮೆಯಾಗುತ್ತವೆ.

ಇನ್ನು ಏಳುವಾಗ, ಮಲಗುವಾಗ, ಸ್ನಾನ ಮಾಡುವಾಗ, ಉಣ್ಣುವಾಗ,ಯಾವುದೇ ಕುಲ ದೇಶ ಇರಲಿ ಅಲ್ಲಲ್ಲಿ ಭಗವಂತನ ಆ ರೂಪಗಳ ಚಿಂತನೆ ಮಾಡುತ್ತಿರಬೇಕು. ಪಿತೃಗಳಲ್ಲಿ ಸ್ವಧಾ ನಾಮದಿಂದ ಆಹಾರನಾಗಿರುತ್ತಾನೆ. ಭೂಮಿಯಲ್ಲಿ ಹುಟ್ಟುವ ಹಣ್ಣು, ಹುಲ್ಲು, ಕಾಯಿ ಪಲ್ಲೈಯಲ್ಲಿ ಪ್ರದ್ಯುಮ್ನ ಮತ್ತು ಅನಿರುದ್ಧನಾಗಿ ಇರುತ್ತಾನೆ.

"ಅನ್ನದ" ನಾಗಿ ನಾರಾಯಣನು ಮನುಷ್ಯ ಹಾಗೂ ಪಶುಗಳಿಗೆ 'ಅನ್ನ' ರೂಪದಲ್ಲಿರುತ್ತಾನೆ. ಹೀಗೆ ನಾಲ್ಕು ವಿಧವಾದ ಸ್ವಾಹ, ಸ್ವಧಾ, ಫಲ ತೃಣದಲ್ಲಿ ಇದ್ದು ಉಪಾಸನೆ ಮಾಡುವವರಿಗೆ ಸುಖ ಕೊಡುತ್ತಾನೆ. ಇನ್ನು ಮನಸ್ಸು, ಮಾತು, ದೇಹ ಮೂಲಕ ನಿತ್ಯದಲ್ಲಿ ವಾಯು ಅಂತರ್ಗತನಾದ ನಾರಾಯಣನಿಗೆ ಅನ್ನವೆಂದು ತಿಳಿದು ಕೃಷ್ಣಾರ್ಪಣ ಅಂದರೆ ಸದಾ ನಮ್ಮನ್ನು ಸಂತೈಸುವನು.

ಕೈಯಲ್ಲಿ ಸೂಜಿ ಹಿಡಿದು ಯುದ್ಧ ಗೆಲ್ಲುವನೆಂಬ ಅಹಂಕಾರದಲ್ಲಿ ಹೊರಟರೆ ಬಳಲುವನು. ಭಗವಂತನು ಪ್ರತಿ ಯುಗದಲ್ಲಿ ಸಾಮಾನ್ಯ ಮನುಷ್ಯನಂತೆ ಅವತರಿಸಿ ತನ್ನ ಲೀಲೆಗಳನ್ನು ತೋರಿಸಿ ದೈತ್ಯರನ್ನು ಸಂಹರಿಸುವನು. 24 ತತ್ವಗಳಲ್ಲಿ ಸಹಜ ಅಹಿತ ಅಚಲಗಳಲ್ಲಿ ಆ ರೂಪಗಳು ಮತ್ತು ನಾಮಗಳಿಂದ ಇರುವನು.

**ಜೀವರಂತರ್ಯಾಮಿ ಅಂಶಿ ಕಳೇವರಗಳೊಳಗಿಂದ್ರಿಯಗಳಲಿ**
**ತಾ ವಿಹಾರವಗೈಯುತನುದಿನವಂಶನಾಮದಲಿ**
**ಈ ವಿಷಯಗಳನುಂಡು ಸುಖಮಯ ಈವ ಸುಖ ಸಂಸಾರ ದುಃಖವ**
**ದೇವ ಮಾನವದಾನವರಿಗವಿರತ ಸುಧಾಮ ಸುಖ //**

ಭಗವಂತನು ''ಅಂಶಿ'' ರೂಪದಿಂದ (ಮೂಲರೂಪ) ಎಲ್ಲರ ದೇಹದಲ್ಲಿದ್ದು ಇಂದ್ರೀಯ ಮುಖಾಂತರ ಕ್ರೀಡೆಯಾಡುತ್ತಾ ಅಂಶ ನಾಮದಿಂದ (ಶ್ರೀ ಹರಿಯ ಅವತಾರಗಳ ರೂಪ) ವಿಷಯ ಭೋಗ ಮಾಡಿ ಸುಖಿಸಿ ದೇವ, ಮಾನವ, ದಾನವ ಹೀಗೆ ಎಲ್ಲರಿಗೂ ಸಂಸಾರ ಸುಖ ದುಃಖ ಕೊಡುವನು.

ಜಗತ್ತಿನಲ್ಲಿ ಎರಡು ತರಹ ಜೀವಿಗಳಾದ ಕ್ಷರ, ಅಕ್ಷರ ಇದ್ದಾರೆ ಅವರಲ್ಲಿಯೂ ಇದ್ದು ಮತ್ತು ಜಡಪ್ರಕೃತಿಯಲ್ಲಿ ಪ್ರಣವದಲ್ಲಿ, ಅಕ್ಷರದಲ್ಲಿ ಮಹಾಕಾಲ ಹಾಗೂ ಅಣುಕಾಲ ಹರಿಯು ಬೇರೆ ಬೇರೆ ನಾಮಗಳಿಂದ ಇದ್ದಾನೆ. ಪಂಚ ಭೇದಗಳಲ್ಲಿಯೂ ಸತತ ಹರಿಯನ್ನು ಸ್ಮರಿಸುತ್ತ ಅಚ್ಯುತನ ಪದ ಹೊಂದು ಎಂದಿದ್ದಾರೆ.

ದೀಪದಿಂದ ಕತ್ತಲೆಯನ್ನು ಕಳೆದು ಅಲ್ಲಿರುವ ಪದಾರ್ಥ ತೋರಿಸುವಂತೆ ಹರಿಯು ಅನೇಕ ರೂಪ ಮತ್ತು ಹೆಸರಿನಿಂದ ಎಲ್ಲಡೆಯಿದ್ದು ತನ್ನ ಮಹಿಮೆ ತಿಳಿಸುವನು.

ಕರುಣಾಮಯಿ ಭಗವಂತ ಹೇಗೆ ಇದ್ದಾನೆಂದರೆ ಸೂರ್ಯನಿಗೆ ಕಾಮನ ಬಿಲ್ಲುವಿನಂತೆ ಮೂರು ಲೋಕಗಳು (ಶ್ವೇತ ದ್ವೀಪ, ಅನಂತಾಸನ, ವೈಕುಂಠ ) ಹರಿಗೆ ಪ್ರತಿಬಿಂಬ ರೂಪದಿಂದ ಇರುವನು.

ತ್ರಿಗುಣಮಾನಿಯಾದ ರಮೆಯಸಹಿತವಾಗಿ ಸರ್ವಕಾಲದಲ್ಲೂ ಹರಿಯು ತೋರುವನು.

**ಚೇತನಾಚೇತನಗಳಲಿ ಗುರು ಮಾತರಿಶ್ವಾಂತರ್ಗತ**
**ಜಗನ್ನಾಥ ವಿಠಲ ನಿರಂತರದಿ ವ್ಯಾಪಿಸಿ ತಿಳಿಸಿದಲೆ/**
**ಕಾತರವ ಪುಟ್ಟಿಸಿ ವಿಷಯದಲಿ ಯಾತುಧಾನರ ಮೋಹಿಸುವ**
**ನಿರ್ಭೀತ ನಿತ್ಯಾನಂದಮಯ ನಿರ್ದೋಷ ನಿರವದ್ಯ,**

ಜೀವಜಡಗಳಲ್ಲಿ ವಾಯುದೇವ ಅಂತರ್ಗತನಾದ ದೋಷ ರಹಿತನಾದ ಜಗನ್ನಾಥವಿಠ್ಠಲನು ಯಾರಿಗೂ ತಿಳಿಯದಂತೆ ಎಲ್ಲಡೆ ಇದ್ದು ಪಕ್ಷಪಾತವಿಲ್ಲದೆ ಅವರವರ ಕರ್ಮಾನುಸಾರ ಸುಖದುಃಖ ಕೊಡುವನು. ಹೀಗೆ ಶ್ರೀಜಗನ್ನಾಥದಾಸರು ಈ ಪಿತೃಗಣ ಸಂಧಿಯಲ್ಲಿ ಭಗವಂತನ ಅನುಗ್ರಹ ಪಡೆಯಬೇಕಾದರೆ ಹಿರಿಯರ ಕಾರ್ಯವಾದ ಶ್ರಾದ್ಧ, ಪಕ್ಷ ಮಾಡಬೇಕು ಎಂದು ತಿಳಿಸುತ್ತ ಮಹತ್ವ ಹೇಳುತ್ತಾ ನಮ್ಮನ್ನು ಉದ್ಧರಿಸಿದ್ದಾರೆ.

ಹೀಗೆ ಸರ್ವಾಂತರ್ಯಾಮಿಯಾದ ಪರಮಾತ್ಮನು ಎಲ್ಲದರಲ್ಲೂ ಇದ್ದು ಕಾರ್ಯ ಮಾಡಿಸುವನು. ಅವರವರ ಸುಕರ್ಮವನ್ನು ಸ್ವೀಕರಿಸಿ ಸಕಲ ಜೀವರಾಶಿಗಳಿಗೂ ಮತ್ತು ಪಿತೃಗಳಿಗೂ ಸುಖವನಿತ್ತು ಎಲ್ಲ ಕಾಲದಲ್ಲಿಯೂ ಕಾರುಣ್ಯ ಸಾಗರನಾದ ಪರಮಾತ್ಮ ಕಾಯುತ್ತಿರುವನು.

ಯಾವ ರೀತಿ ಎಂದರೆ ಜಪ, ದೇವರ ಪೂಜೆ ಮಾಡುವುದರ ಮೂಲಕ ಸತ್ ಗ್ರಂಥಗಳ ಪಠಣೆಯಲ್ಲಿ ಪುರಾಣ ಶಾಸ್ತ್ರ, ಪ್ರವಚನಗಳನ್ನು ಓದುವುದರಿಂದ ಮತ್ತು ಆಲಿಸುವುದರಿಂದ ಭಗವದ್ ಚಿಂತನೆ ಮಾಡಬೇಕು.

**ಏನು ಮಾಡುವ ಪುಣ್ಯ ಪಾಪಗಳು ಆಣೆ ಮಾಡುವೆನೆಂಬ**
**ಅಧಮ ಹೀನ ಕರ್ಮಕೆ ಪಾತ್ರ ನಾ ಪುಣ್ಯಕ್ಕೆ ಹರಿಯೆಂಬ**
**ಮಾನವನು ಮಧ್ಯಮನು ದ್ವಂಧ್ವಕೆ ಶ್ರೀನಿವಾಸನೆ ಕರ್ತೃವೆಂದು**
**ಸದಾನುರಾಗದಿ ನೆನೆದು ಸುಖಿಸುವರೇ ನರೋತ್ತಮರು।**

ಅಧಮರು ಎಲ್ಲವನ್ನು ನಾನೇ ಮಾಡುತ್ತಿರುವೆ ಎಂಬ ಅಹಂಕಾರದಲ್ಲಿದ್ದರೆ, ಪಾಪ ಕರ್ಮ ನಾನು ಮಾಡುವಾತಾ ಪುಣ್ಯ ಭಗವಂತ ಮಾಡಿಸುವಾತ ಎಂದು ತಿಳಿಯುವವನು ಮಧ್ಯಮನು. ಇನ್ನು ಪಾಪ, ಪುಣ್ಯ, ಕರ್ಮ ಭಗವಂತನೇ ಮಾಡಿಸುವಾತ ಎಂದು ಪ್ರೀತಿಯಿಂದ ಸ್ವೀಕರಿಸಿ ನಡೆಯುವನು ನರೋತ್ತಮನು.

**ತೈತ್ತಿರೀಯೋಪನಿಷತಲ್ಲಿ**
**''ತತ್ ಸೃಷ್ಟ್ವಾ ತದೇವಾನುಪ್ರಾವಿಶತ್।**

**ತದನು ಪ್ರವಿಶ್ಯ ಸಚ್ಚ ತ್ಯಚ್ಚಾಭವತ್।**

ಪರಮಾಣುಗಳ ಪರಸ್ಪರ ಸಂಯೋಗದಿಂದ ವೈವಿಧ್ಯಗಳಿಂದ ತುಂಬಿದ ಭಿನ್ನ-ಭಿನ್ನ ಆಕಾರಗಳು ಪಡೆದುನಿಂತಿವೆ. ಇವೆಲ್ಲವೂ ಭಗವಂತನ ಪ್ರವೇಶದಿಂದಲೇ ಸಾಧ್ಯ. ಪ್ರಕೃತಿಯು ವಿವಿಧ ರೂಪಗಳನ್ನು ತಾಳಿ ಚಿತ್ರ ವಿಚಿತ್ರಗಳನ್ನು ತೋರಿಸುತ್ತದೆ ಎಂದು ಈ ಉಪನಿಷತ್ತು ಹೇಳುತ್ತದೆ.

ಅದರಂತೆ ಭಗವಂತನ ಅಧಿಷ್ಠಾನ ಹೊಂದಿರುವ ಅಗ್ನಿ, ಶಿವ, ಸೂರ್ಯ, ಚಂದ್ರ, ನಕ್ಷತ್ರ, ಭೂಮಿ, ಗಂಗಾದಿ ತೀರ್ಥಗಳ ಅಭಿಮಾನಿಗಳು, ಇಂದ್ರಿಯಾಭಿಮಾನಿಗಳಲ್ಲಿ ಹರಿಯ ಅಧಿಷ್ಠಾನವೆಂದು ಪೂಜಿಸಬೇಕು.

ದಾಸರು ಹೇಳಿದಂತೆ ಅಜ್ಞಾನಿಗಳ ಕೂಡ ಅಖಿಲ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡ ಜಗಳವೇ ಲೇಸು ಎನ್ನುವಂತೆ ಲೌಕಿಕರ ಜೊತೆ ಕೂಡಿ ಕ್ಷುಲ್ಲಕ ಚಿಂತನೆ ಮಾಡದೇ ಜ್ಞಾನಿ, ಸುಜ್ಞಾನಿಗಳ ಜೊತೆ ಸ್ನೇಹ ಹೊಂದಿ ಭಗವಂತನ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕು. ಭಗವಂತನು

ಎಲ್ಲರ ಹೃದಯ ಕಮಲದಲ್ಲಿದ್ದು ಸಾತ್ವಿಕ, ರಾಜಸ, ತಾಮಸ್ ಗುಣಗಳಿಂದ ಇದ್ದು ಅವರವರ ಕರ್ಮಾನುಸಾರ ಭೋಗ ಕೊಡುವವನು. ಉದಾಹರಣೆಗೆ ಹೇಳುವುದಾದರೆ ಕುಂಬಾರನು ಚಕ್ರ ತಿರುಗಿಸಿದಂತೆ ಭಗವಂತ ನಮ್ಮನ್ನು ಸಂಸಾರ ಸುಳಿಯಲ್ಲಿ ಸಿಲುಕಿಸಿ ಭೋಗ ಕೊಡುವವನು. ವೇದ ಶಾಸ್ತ್ರಗಳನ್ನ ರಿತು ಸಚರಿತ್ರರಾಗಿ, ನಿಷಿದ್ಧ ಕರ್ಮಗಳನ್ನು ಬಿಟ್ಟು ಇರುವ ಸಂಸಾರಿಗಳಿಗೆ ಸ್ವರ್ಗಾದಿಸುಖಗಳನ್ನು ಕೊಡುವನು ಪಾಪಿಗಳಿಗೆ ದುಃಖವನ್ನು ಕೊಡು ವನು. ತ್ರಿವಿಧ ಜೀವರಾದ ರಾಜಸರು, ತಾಮಸರು, ಸಾತ್ವಿಕರು ಎಲ್ಲರೊ ಳಗಿದ್ದು ಸುಖ, ದುಃಖಗಳನ್ನು ಕೊಟ್ಟರು ಭಗವಂತನಿಗೆ ಯಾವುದೇ ಲೇಪ ವಿಲ್ಲ, ಲೋಪವಿಲ್ಲ ಆದ್ದರಿಂದ ಹರಿಯು ಸ್ವತಂತ್ರ ಕರ್ತವ್ಯವನ್ನು ಹೊಂದಿ ರುವನು.

ಧರಣಿ ನಾರಾಯಣನು ಉದಕದಿ ತುರ್ಯ ನಾಮಕ
ಅಗ್ನಿಯೊಳು ಸಂಕರುಷಣ ಅಹ್ವಯ ವಾಯುಗಪ್ರದ್ಯುಮ್ನ ನಿರುದ್ಧ
ಇರುತಿಹನು ಆಕಾಶದೊಳು ಮೂರೆರೆಡು ರೂಪವ ಧರಿಸಿ
ಭೂತಗೆ ಕರೆಸುವನು ತನ್ನಾಮ ರೂಪದಿ ಪ್ರಜರ ಸಂತೈಪ॥

ಭೂಮಿಯಲ್ಲಿ ನಾರಾಯಣ ರೂಪ, ನೀರಿನಲ್ಲಿ ವಾಸುದೇವ, ಅಗ್ನಿ ಯಲ್ಲಿ ಸಂಕರ್ಷಣ ರೂಪ, ವಾಯುವಿನಲ್ಲಿ ಪ್ರದ್ಯುಮ್ನ ರೂಪ, ಆಕಾಶದಲ್ಲಿ ಅನಿರುದ್ಧನಾಗಿ ಇರುವನು. ಹೀಗೆ ವಿವಿಧ ರೂಪಗಳಲ್ಲಿದ್ದು ಸಂಸಾರದಲ್ಲಿ ಕಾರ್ಯ ಕಾರಣನಾಗಿ, ಕರ್ಮಸುಕರ್ಮಗಳನ್ನು ಮಾಡಿಸುತ್ತಾ ನೋವು ನಲಿವು ಕೊಡುವನು.ಪಂಚರೂಪಗಳಿಂದ ಮತ್ತು ಕೇಶವಾದಿ ರೂಪಗಳಿಂದ ಅಣು ತೃಣಾದಿಗಳಲ್ಲಿ ಪಂಚಭೂತ, ಪಂಚತನ್ಮಾತ್ರ ಹೀಗೆ ಸರ್ವತ್ರ ವ್ಯಾಪಿ ಸರ್ವೋತ್ತಮನಾದ ಭಗವಂತನು ವ್ಯಾಪಿಸಿರುವನು.

ದೇವತೆಗಳು, ಋಷಿಗಳು, ಗಂಧರ್ವರು, ಪಿತೃಗಳು, ರಾಜರು, ಮಾನವರು ಪ್ರಾಣಿಗಳಲ್ಲಿ ಪಕ್ಷಿಗಳಲ್ಲಿ ಸಕಲ ಜೀವರಿಗೆ ನಾರಾಯಣನು ಅವರಲ್ಲಿದ್ದು ಅವರಿಗೆ ಅವರ ತಕ್ಕಂತೆ ರಸ ನೀಡುವನು.

ಹರಿಕಥಾಮೃತ ಸಾರವಿದು ಸಂತರು ಸದಾ ಚಿತ್ತೈಸುವುದು
ನಿಷ್ಠುರಿಗಳಿಗೆ ಪಿಶುನರಿಗಯೋಗ್ಯರಿಗಿದನು ಪೇಳದಲೇ
ನಿರುತ ಸದ್ಭಕ್ತಿಯಲಿ ಭಗವಚ್ಚರಿತೆಗಳ ಕೊಂಡಾಡಿ ಹಿಗ್ಗುವ
ಪರಮ ಭಗವತ್ ದಾಸರಿಗೆ ತಿಳಿಸುವುದು ಈ ರಹಸ್ಯ॥

ಈ ಶ್ರೇಷ್ಠವಾದ ಹರಿಕಥಾಮೃತಸಾರವನ್ನು ಸುಜನರು ಯಾವಾ ಗಲೂ ಪಠಣ ಮತ್ತು ಶ್ರವಣ ಮಾಡಬೇಕು. ಚಾಡಿ ಹೇಳುವವರಿಗೆ, ಅಯೋಗ್ಯರಿಗೆ ಹೇಳಬಾರದು. ಸಾಧುಜನರಿಗೆ ಹಾಗೂ ಭಗವದ್ ದಾಸ ರಿಗೆ ಇದನ್ನು ಹೇಳಬೇಕು.

ಸತ್ಯ ಸಂಕಲ್ಪನು ಸದಾ ಏನು ಇತ್ತದೆ ಪುರುಷಾರ್ಥ
ವೆಯೋದರಿದು ಅತ್ಯಧಿಕ ಸಂತೋಷದಿಂ ನೆನೆವುತ್ತ
ಭುಂಜಿಪುದು ನಿತ್ಯ ಸುಖ ಸಂಪೂರ್ಣ ಪರಮ ಸುಹೃತಮ ॥
ಜಗನ್ನಾಥ ವಿಠಲ ಬತ್ತಿಸಿ ಭವಾಂಬುಧಿಯ ಚಿತ್ಸುಖ ವ್ಯಕ್ತಿ ಕೊಡುತಿಪ್ಪ॥

ಒಟ್ಟಾರೆ ನಾಮಸ್ಮರಣೆ ಸಂಧಿಯಲ್ಲಿ ನಾ ಅಹಂ ಕರ್ತಃ ಎಂದು ತಿಳಿದು ಸತ್ಯ ಸಂಕಲ್ಪನಾದ ಸರ್ವತ್ರನಾದ ಸರ್ವೋತ್ತಮನಾದ ಸರ್ವ ಸ್ವತಂತ್ರನಾದ ಶ್ರೀಹರಿಯನ್ನು ನೆನೆದರೆ ಈ ಸಂಸಾರ ಸಾಗರವನ್ನು ಸುಖದಿಂದ ದಾಟಿಸುವನು.

## ರಾಮುಲವಾರಿ ಮೇಡ, ತಿರುಮಲೆ

ಕಲಿಯುಗದ ಪ್ರತ್ಯಕ್ಷದೈವನಾದ ಶ್ರೀವೆಂಕಟೇಶ್ವರ ಸ್ವಾಮಿಯು ನೆಲೆಸಿರುವ ಆನಂದ ನಿಲಯದಲ್ಲಿ ಘಂಟಾ ಮಂಟಪ, ಸ್ನಪನ ಮಂಟಪದ ನಂತರ ಇರುವುದೇ ಶ್ರೀರಾಮನಸನ್ನಿಧಿ ಸೀತಾರಾಮ ಲಕ್ಷ್ಮಣರ ಉತ್ಸವ ಮೂರ್ತಿಗಳನ್ನು ಇಲ್ಲಿ ಮಂಟಪದಲ್ಲಿ ಇಟ್ಟಿರುವುದರಿಂದ ಇದನ್ನು ಶ್ರೀರಾಮರ ಮಂಟಪವೆಂದು ಹೆಸರು ಬಂದಿದೆ. ಸೀತಾದೇವಿಯನ್ನು ಹುಡುಕುತ್ತಾ ರಾಮಲಕ್ಷ್ಮಣರು ವೆಂಕಟಾದ್ರಿಯನ್ನು ಸಂದರ್ಶಿಸಿದ ನೆನಪಿನಲ್ಲಿ ಅವರ ಉತ್ಸವ ಮೂರ್ತಿಗಳನ್ನು ಇಲ್ಲಿ ನೆಲೆಗೊಳಿಸಿದರೆಂದು ಹೇಳುತ್ತಾರೆ.

ಪ್ರಸ್ತುತ ಈ ಮೂವರ ಮೂರ್ತಿಗಳು ಗರ್ಭಗೃಹ ದಲ್ಲಿ ದರ್ಶನ ನೀಡುತ್ತಿದೆ. ಜಗಲ ಇಕ್ಕೆಲಗಳಲ್ಲಿ ಶ್ರೀ ರಾಮನ ಪರಿವಾರದ ಅಂಗದ, ಹನುಮಂತ, ಸುಗ್ರೀವ ಹಾಗೂ ಶ್ರೀವೆಂಕಟೇಶ್ವರ ಸ್ವಾಮಿಯ ಪರಿವಾರ ದೇವತೆಗಳಾದ ವಿಷ್ವಕ್ಸೇನ, ಅನಂತ ಹಾಗೂ ಗರುಡರ ಉತ್ಸವ ಮೂರ್ತಿಗಳಿವೆ. ತ್ರೇತಾಯುಗದ ಶ್ರೀರಾಮನೇ ಕಲಿಯುಗ ಶ್ರೀನಿವಾಸನು. ಶ್ರೀರಾಮ ನವಮಿಯ ಪರ್ವ ದಿನದಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡು ತ್ತಾರೆ. ಪ್ರತಿ ತಿಂಗಳಲ್ಲಿ ಬರುವ ಪುನರ್ವಸು ನಕ್ಷತ್ರದ ದಿನದಂದು ಶ್ರೀರಾಮಚಂದ್ರ ದೇವರು ಸಹಸ್ರದೀಪಾ ಲಂಕರಣ ಸೇವೆಯಲ್ಲಿ ಪಾಲ್ಗೊಳ್ಳುವರು. ವರ್ಷ ಕ್ಕೊಮ್ಮೆ ತೆಪ್ಪೋತ್ಸವವು ನಡೆಯುತ್ತದೆ.




**ಡಾ॥ ಗುರುರಾಜ ಪೋಶೆಟ್ಟಿಹಳ್ಳಿ**
**97393 69621**

ನೂತನ ಆನಂದ, ಯೌವನೋತ್ಸಾಹಗಳನ್ನು ಬೆಳೆಸುವ ವಸಂತನ ಆಗಮನವಾಗುವುದು ಯುಗಾದಿಯಿಂದಲೇ, ಸುರಲೋಕದ ಸಂಪದವನ್ನಿಲ್ಲಿ ಸೂರೆ ಮಾಡಲು ಉದಯಿಸಿದೆ ಪರಾಭವ ಸಂವತ್ಸರ, ಯಜುರ್ವೇದದಲ್ಲಿ ನಮಗೆ ಸ್ಫುಟವಾದ ಮೊದಲ ದಾಖಲೆ ದೊರೆಯುವುದು. ಕೃತ್ತಿಕಾ ನಕ್ಷತ್ರಗಳ ಪುಂಜದಲ್ಲಿ ವಸಂತ ವಿಷುವದ್ಬಿಂದುವಿದ್ದಾಗ ಸೂರ್ಯನ ಕಾಂತಿವೃತ್ತವು ಪ್ರವೇಶಿಸಿದ ಹೊತ್ತು, ಹಗಲಿರುಳು ಸಮನಾಗಿ ಹೊಸ ವರ್ಷ ತೊಡಗುತ್ತದೆ. ಅಲ್ಲಿಂದ ಮುಂದೆ ಹಗಲುಗಳು ದೀರ್ಘವಾಗುತ್ತ ಹೋಗುವುದು ಎಂದಿದೆ. ಇದು ನಮ್ಮ ಪೂರ್ವಜರ ಖಗೋಲ ಶಾಸ್ತ್ರದ ತಿಳುವಳಿಕೆಗೆ, ಆಕಾಶ ಪರಿಶೀಲನೆಗೆ ಶ್ರೇಷ್ಠವಾದ ಸಾಕ್ಷಿ.

ಸೃಷ್ಟಿ ರಚನೆಗೆ ಮುನ್ನ ಓಂಕಾರ ನಾದವೇ ತುಂಬಿತ್ತು. ಓಂಕಾರವೇ ಬ್ರಹ್ಮಾಂಡ ಎಂದಾಗಿತ್ತು, ಓಂಕಾರದಿಂದಲೇ ಆದಿಶಕ್ತಿಯ ಆವಿರ್ಭಾವವಾಯಿತು. ಆದಿಶಕ್ತಿಯಾಗಿ ಅವತರಿಸಿದ ಸತ್ವ-ರಜೋ-ತಮೋ ಗುಣಗಳು ಅವೇ ಬ್ರಹ್ಮ-ವಿಷ್ಣು-ಮಹೇಶ್ವರರು ಅಂದರೆ ಸೃಷ್ಟಿ-ಸ್ಥಿತಿ-ಲಯ ತತ್ವ. ಇದರಿಂದಾಗಿ ಮೋಹ ಮಾಯೆಯ ಬಲೆ ಆವರಿಸಿತು. ಯಾರು ಶ್ರೇಷ್ಠರೆಂಬ ಪ್ರಶ್ನೆ ಎದ್ದಿತು. ನಿಮ್ಮ ನಿಮ್ಮ ಕಾರ್ಯದಲ್ಲಿ ನೀವೇ ಶ್ರೇಷ್ಠರು. ಇದಕ್ಕೆ ಸೂರ್ಯನೇ ಸಾಕ್ಷಿ ಎಂದಾಯಿತು.

ಆಗ ಜಗನ್ಮಾತೆಯಿಂದಲೇ ಜೀವನ ಶ್ರದ್ಧೆಯ ಸ್ಥಾಪನೆಯಾಯಿತು. ಆಗ ಸೂರ್ಯನೇ ಸಕಲ ಜೀವಾತ್ಮಗಳ ಯುಗ ಪುರುಷನಾದ, ಯುಗಾದಿಯೇ ಅವನ ಹುಟ್ಟುಹಬ್ಬ, ಅದೇ ಪರ್ವ ದಿನವಾಗಿ, ಎಲ್ಲೆಲ್ಲೂ ಹೊಸ ಚಿಗುರು, ಹೊಸ ಹೂವು, ಹೊಸ ಫಲ ನೀಲಾಕಾಶ, ಪ್ರಕೃತಿಯಲ್ಲಿ ನವ ಚೈತನ್ಯ ಹೊಸ ವರ್ಷದ ಸಂಭ್ರಮ.

ಹಿಂದೆ ಕಾಮನ ಹುಣ್ಣಿಮೆ, ಮುಂದೆ ರಾಮನವಮಿಗಳ ಮಧ್ಯೆ ಬರುವ ಯುಗಾದಿ ನಮ್ಮನ್ನು ಕಾಮನಿಂದ ರಾಮನತ್ತ ಕಹಿಯಿಂದ ಸಿಹಿಯತ್ತ ಬೆಳಕಿನತ್ತ ಒಯ್ದು ಆಯುರಾರೋಗ್ಯ ಭಾಗ್ಯವನ್ನು ಹಾರೈಸುವ ಹಬ್ಬವಾಗಿದೆ.

ಯುಗಾದಿ ದಿವಸ ಯಾವ ವಾರ ಇರುತ್ತದೇ ಅದರ ಗ್ರಹವನ್ನೇ ಇಡೀ ವರ್ಷದ ಅಧಿಪತಿ ಎಂದು ಕರೆಯುತ್ತಾರೆ. ಉದಾಹರಣೆಗೆ ಈ ದಿವಸ (ಯುಗಾದಿ) ಗುರುವಾರವಾದರೆ ಇಡಿ ಸಂವತ್ಸರಕ್ಕೆ ಗುರುವೇ (ಬೃಹಸ್ಪತಿ) ಅಧಿಪತಿಯಾಗುತ್ತಾನೆ.

### ಪಂಚಾಂಗ ಶ್ರವಣ

ಪಂಚಾಂಗ ಶ್ರವಣ ಯುಗಾದಿಯ ಮತ್ತೊಂದು ಹೆಚ್ಚಿನ ವಿಶೇಷ. ಪಂಚಾಂಗವೆಂದರೆ ಅರ್ಥವಾಗದ ಹಲವು ಶ್ಲೋಕಗಳಿಂದ ಕೂಡಿದ ಕಗ್ಗಂಟು ಎಂಬುದು ಅನೇಕರ ಭಾವನೆ. ಆದರೆ ಪಂಚಾಂಗ ಎಂಬುದು ಜನಜೀವನದ ನಿತ್ಯ ನಡವಳಿಕೆಗಳನ್ನು ವೈಜ್ಞಾನಿಕ ಆಧಾರಗಳ ಮೇಲೆ ವಿಶ್ಲೇಷಿಸುವ ಅತ್ಯದ್ಭುತ ಶಾಸ್ತ್ರ.ನಮ್ಮ ಪೂರ್ವಸೂರಿಗಳು ತಿಥಿ+ವಾರ+ನಕ್ಷತ್ರ+ಯೋಗ+ಕರಣ= ಪಂಚಾಂಗಗಳೆಂದು ಕರೆದು ಫಲಶ್ರುತಿಯ ಶ್ಲೋಕ ಮಂಡಿಸಿದ್ದಾರೆ. ಅಂದರೆ ತಿಥಿಯಿಂದ ಐಶ್ವರ್ಯ ಪ್ರಾಪ್ತಿ, ವಾರದಿಂದ ಆಯುಷ್ಯ ವೃದ್ಧಿ, ನಕ್ಷತ್ರದಿಂದ ಪಾಪ ಪರಿಹಾರ, ಯೋಗದಿಂದ ರೋಗ ನಿವಾರಣೆ, ಕರಣದಿಂದ ಕಾರ್ಯಸಿದ್ಧಿ, ತಿಥಿಗಳೆಂದರೆ ಪ್ರತಿಪದಾದಿ 30, ವಾರಗಳು ಆದಿತ್ಯಾದಿ 7,ನಕ್ಷತ್ರಗಳು ಅಶ್ವಿನ್ಯಾದಿ 27, ಯೋಗಗಳು ವಿಷ್ಕಂಬಾದಿ 27,ಕರಣಗಳು ಭವಾದಿ 11, ಇವು ಸಂಪ್ರದಾಯ ಶರಣ್ಯತೆಯ ಚಿಹ್ನೆಗಳೆಂದು ಉಪೇಕ್ಷಿಸಬಾರದು. ಏಕೆಂದರೆ ಮಹಾಭಾರತ ಯುದ್ಧವೇ ಮೊದಲಾದ ಗತಕಾಲದ ಘಟನೆಗಳ ಇತಿಹಾಸ-ಸಂಶೋಧನೆ ಗಳಿಗೆ ಇವನ್ನು ಆಧಾರ ಮಾಡಿ ಬರುವ ಬೃಹದ್ ಗ್ರಂಥಗಳುಂಟು ಅಂದರೆ ಯುಗಾದಿಯು ಸಹ ಕಾಲ ಪುರುಷನ ವ್ಯಾಪ್ತಿಯಲ್ಲಿರುವ ಒಂದು ಹಬ್ಬ!

"ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ" ಎಂಬ ಕವಿವಾಣಿಯಂತೆ ಮಾರ್ಚ್ 19 ರಂದು ಯುಗಾದಿ ಹಬ್ಬ, ಅಂದು ನಾವು ಸಂವ

ತ್ಸರ ಚಕ್ರವು ಹಿಂದೆಷ್ಟೋ ಕಳೆದು ಹೋಗಿವೆ. ಕಳೆದದ್ದೆಲ್ಲಾ ಹಳತು. ಬರುವುದೆಲ್ಲಾ ಹೊಸತು. ಅರವತ್ತು ಸಂವತ್ಸರಕ್ಕೆ ಒಂದು ಸಂವತ್ಸರ ಚಕ್ರ ಮುಕ್ತಾಯವಾಗುತ್ತದೆ.


ಪ್ರಭವನಾಮ ಸಂವತ್ಸರ ಮೊದಲನೆಯದು. ಅಕ್ಷಯ ನಾಮ ಸಂವತ್ಸರ ಕೊನೆಯದು ಸಾಮಾನ್ಯವಾಗಿ ಅರವತ್ತು ವರ್ಷಗಳಿಗೆ ಒಂದು ತಲೆಮಾರು ಕಳೆದು ಹೋಗುತ್ತದೆ. ಅರವತ್ತು ವರ್ಷ ತುಂಬಿದಾಗ ವ್ಯಕ್ತಿಯ ಜೀವಿತದಲ್ಲಿ ಒಂದು ಕಾಲಾವಧಿ ಸಂಪೂರ್ಣವಾಯಿತೆಂದು ಪರಿಕಲ್ಪನೆ ಮಾಡಿ ಕೊಂಡು "ಷಷ್ಠ್ಯಬ್ದಿಶಾಂತಿ"ಯನ್ನು ಮಾಡಿಕೊಂಡು ಸಂಭ್ರಮ ದಿಂದ ಆಚರಿಸಲಾಗುವುದು. ಅಲ್ಲಿಗೆ ವ್ಯಕ್ತಿಯ ಬದುಕಿನ ಸಂವತ್ಸರ ಚಕ್ರ ಮುಗಿಯಿತು. ಮತ್ತೆ ಅದೇ ಸಂವತ್ಸರಗಳ ಪುನರಾವೃತ್ತಿ. ಮರಳಿ ಹೊಸ ಸಂವತ್ಸರವನ್ನು ಕಾಣು ವಂತಿಲ್ಲ.

ಇಲ್ಲಿ ಒಂದು ಪ್ರಶ್ನೆ. ಇದು ಯುಗದ ಆದಿಯೆ ಅಥವಾ ಸಂವತ್ಸರ ಚಕ್ರದ ಆದಿಯೋ? ವರ್ಷ ಕಳೆದರೆ ಯುಗಾಂತರ ವಾಗುತ್ತದೆಯೇ? ಇಲ್ಲ. ಇದು ಸಂವತ್ಸರ ಚಕ್ರದ ಒಂದು ಸಂವತ್ಸರದ ಆದಿಯೇ ವಿನಹ ಯುಗದ ಆದಿಯಲ್ಲ. ಯುಗದ ಆದಿಯಾಗಿ ವರ್ಷಗಳಾಗಿವೆ. ಹಾಗಾದ ಯುಗಾದಿ ಎನ್ನುವುದರ ಅರ್ಥವೇನು?

**ಆಯನಗಳ ಜೋಡಿ**

ಯುಗ ಎಂಬುದು ಸಂಸ್ಕೃತ ಪದ. ಇದಕ್ಕಿರುವ ಅನೇಕ ಅರ್ಥಗಳಲ್ಲಿ ಜೋಡಿ ಜೊತೆ ಎಂಬುದೂ ಒಂದು. ಯಾವ ಜೊತೆ? ಉತ್ತರಾಯಣ ಮತ್ತು ದಕ್ಷಿಣಾಯನಗಳೆಂಬ ಎರಡು ಆಯನಗಳೆಂಬ ಜೋಡಿ. ಹೀಗೆ ಈ ಆಯನಗಳ ಜೋಡಿಯೇ ಯುಗವಾಗಿ ಒಂದು ಜೋಡಿ ಕಳೆದು ಹೊಸ ಜೋಡಿ ಪ್ರಾರಂಭವಾಗುವುದರಿಂದ ಇದು ಯುಗಾದಿ.

ಯುಗಕ್ಕಿರುವ ಮತ್ತೊಂದು ಅರ್ಥ ದ್ವಂದ್ವ. ಅಂದಿ ನಿಂದ ಸುಖ-ದುಃಖಗಳೆಂಬ ದ್ವಂದ್ವ ಪ್ರಾರಂಭವಾಗುತ್ತದೆ. ಹಾಗಾದರೆ ಹಿಂದಿನ ವರ್ಷ ಈ ದ್ವಂದ್ವವಿರಲಿಲ್ಲವೇ? ಇತ್ತು ಆದರೆ ಗ್ರಹಗತಿಯಿಂದಾಗಿ ಅದರಲ್ಲಿ ಸ್ವಲ್ಪ ವ್ಯತ್ಯಾಸವಾಗಿ ರಲೂಬಹುದು. ಅಂತಹ ಸುಖ ದುಃಖಗಳು ಆರಂಭವಾಗುವ ವರ್ಷದ ಮೊದಲ ದಿನವೇ ಯುಗಾದಿ.



ಯುಗಾದಿ ಆಡುಮಾತಿನಲ್ಲಿ ಉಗಾದಿ ಆಗಿದೆ. ಚೈತ್ರ ಶುದ್ಧ ಪಾಡ್ಯದಂದೆ ಏಕೆ ಈ ಹಬ್ಬವನ್ನು ಆಚರಿಸಬೇಕು? ಕಾರಣ ವಿದೆ. ಜಗತ್ತು ಸೃಷ್ಟಿಯಾದದ್ದು ಚೈತ್ರ ಶುದ್ಧ ಪಾಡ್ಯದಂದೇ ಎಂದು ಬ್ರಹ್ಮಾಂಡಪುರಾಣದಲ್ಲಿ ವ್ಯಕ್ತವಾಗಿದೆ. ಬ್ರಹ್ಮನು ಚೈತ್ರ ಮಾಸದ ಶುಕ್ಲ ಪಕ್ಷದ ಪ್ರಥಮ ದಿನದಂದು ಸೂರ್ಯೋದಯ ವೇಳೆಯಲ್ಲಿ ಗ್ರಹ, ಋತು, ತಿಂಗಳು, ಅಧಿಪತಿಗಳನ್ನೊಳ ಗೊಂಡಂತೆ ಸಮಸ್ತ ಲೋಕವನ್ನು ಸೃಷ್ಟಿಸಿದನು. ಕಾಲದ ಗಣನೆಯನ್ನೂ ಸಹ ಅಂದಿನಿಂದಲೇ ಆರಂಭಿಸಲಾಯಿತು. ಈ ಕಾರಣದಿಂದಾಗಿ ಚೈತ್ರ ಶುದ್ಧ ಪಾಡ್ಯವೇ ವರ್ಷದ ಮೊದಲ ದಿನವೆಂದು ಪರಿಗಣನೆಯಾಯಿತು.

ಈ ಮೊದಲ ತಿಂಗಳಿಗೆ ಚೈತ್ರ ಎಂದು ಹೆಸರು ಬರಲು ಕಾರಣವಿದೆ. ಪೂರ್ಣಿಮೆಯ ದಿನ ಚಂದ್ರನು ಯಾವ ನಕ್ಷತ್ರ ದೊಂದಿಗೆ ಇರುತ್ತಾನೋ ಅದನ್ನು ಅನುಸರಿಸಿ ಆ ತಿಂಗಳನ್ನು ಹೆಸರಿಸುತ್ತಾರೆ. ಚಿತ್ತಾ ನಕ್ಷತ್ರದಿಂದ ಚೈತ್ರ ಮಾಸ, ವಿಶಾಖ ನಕ್ಷತ್ರದಿಂದ ವೈಶಾಖ ಮಾಸ, ಜ್ಯೇಷ್ಠಾ ನಕ್ಷತ್ರದಿಂದ ಜ್ಯೇಷ್ಠ ಮಾಸ ಇತ್ಯಾದಿ.

ಯುಗಾದಿ ಹೊಸತಿನ ಸಂಕೇತ. ವಸಂತ ಕಾಲ ವೆಂದರೆ ಸಮೃದ್ಧಿಯ ಕನಸು ಸೊಗಸಿನ ಬದುಕು. ಅದರ ನೆನಪೇ ಮಧುರ. ಮಾಮರ ಚಿಗುರಿ, ಕೋಗಿಲೆಗಳು ಹಾಡಿ, ಹೊಂಗೆ ಹೂಗೊಂಚಲು ತೂಗಿ, ಭೃಂಗಾವಳಿ ಗುಂಯ್‌ಗುಟ್ಟಿ ಪ್ರಕೃತಿಗೆ ಪ್ರಕೃತಿಯೇ ಪಲ್ಲವಿಸಿದಾಗಲೇ ವಸಂತ. ಅದರ ಆದಿಯೇ ಯುಗಾದಿ. ಚಾಂದ್ರಮಾನ ಗಣನೆಗೆ ನವನವೀನ ನಾಂದಿ! ಕಾಲ ಅನಾದಿ, ಅನಂತ, ಚೆಲುವು ಶ್ರೀಮಂತ. ಅಂಥ



ಬೆಡಗನ್ನು ವಸುಧೆಗೆ ತರುವವನೇ ಶ್ರೀವಸಂತ. ಋತುರಾಜ, ವರ್ಣತೇಜ!

ಸುಮ್ಮನೆ ಬಂದಾನೆ ವಸಂತರಾಜ? ಅವನಿಯಲ್ಲಿ ಎದ್ದು ಕಾಣುವ ಸಡಗರ ಸಂಭ್ರಮ. ಇದು ಪ್ರಕೃತಿಯ ಪಾಲಿಗೆ ಪರ್ವದಿನ. ಪುಳಕದ ಕ್ಷಣ ! ಚಿತ್ತ ಸೆಳೆವ ಚೆಲುವಿನ ಚಿತ್ತಾರವನ್ನು ಬಣ್ಣಿಸದ ಕವಿಯುಂಟೆ ಜಗದಲಿ! ಆಗ ಅವನಿಗೆ ಅವನ ಲೇಖನಿಗೆ ಗೀತ ಸಿರಿ ಸಂಭ್ರಮ ! ರಸಿಕನಿಗಾದರೋ ಏನು ಹೇಳಬೇಕು ಏನು ಬಿಡಬೇಕು ಎಂಬುದೇ ತೋಚದೇ ಬರೀ ವಿಭ್ರಮ !

ವಸಂತದಲ್ಲಿ ಅಮೋದವಿದೆ, ಪ್ರಮೋದವಿದೆ. ನಿಸರ್ಗದ ನೈಜ ಸ್ಪಂದನದಲ್ಲಿದೆ ವಸಂತನ ಪದಾರ್ಪಣ. ಕವಿಗಳ ಉನ್ಮಾದಲ್ಲಿದೆ ವಸಂತನ ಗುಣಗಾನ! ಸಹೃದಯನ ಹೃದಯವಂತಿಕೆಯಲ್ಲಿದೆ ಅಭಿರುಚಿಯ ನಿಜ ಅನುರಣನ! ನಿರಕ್ಷರಕುಕ್ಷಿಗಳು ಅನ್ನಿಸಿಕೊಂಡ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂದು ಕವಿಗಳಿಂದ ಹೊಗಳಿಸಿಕೊಂಡ ನಮ್ಮ ನಾಡಿನ ನೆಲ್ಮೆಯ ಜಾನಪದೀಯರು ಯುಗಾದಿಯನ್ನು ಬಣ್ಣಿಸಿದ ರೀತಿಯೇ ಬಲು ಸೊಗಸು.

ಬನಬನದಾಗಲ್ಲಾ ಹೂತೇರು ಹರಿದವ್ರೋ ದಿನ ಬಿರಿದಾವ್ರೋ<br>
ಗೊಂಡೆ ಗೊಂಡೆ ಟೊಂಗೆಯಾಗೆ ಶಾನೆ ಶಾನೆ ಗೊನೆ<br>
ಗೊನೆಯೆಲ್ಲಾ ತೂಗ್ಯಾವ್ರೋ ಮಾವಿನ ತೋಪಿ ನಾಗೆ!

ಯುಗಾದಿಯ ಹಿಂದೆಮುಂದೆ ಅವನಿತಾಯ ಚೆಲುವಿಗೆ ಮೋಹದ ಬಣ್ಣಗಾರಿಕೆಯನ್ನು ತುಂಬುವಲ್ಲಿ ಮಾಮರ ಎಲ್ಲಕ್ಕಿಂತ ಮುಂದು. ಎಲ್ಲಿ ಮಾಮರ ಅಲ್ಲಿ ಸೌಂದರ್ಯ ಹೊರ ನೋಟಕ್ಕೂ ಒಳನೋಟಕ್ಕೂ ಸೈ.

ವಸಂತದಲ್ಲಿ ಸಮೃದ್ಧವಾಗಿ ಮೂಡುವ ಚಿಗುರಿಗೆ ಅದ್ವಿತೀಯ ಚೆಲುವಿದೆ ಬಿಟ್ಟ ಹೂವೆಲ್ಲಾ ಕಾಯಿ ಹಣ್ಣಾಗದೆ ಇದ್ದರೂ ಸಹ ನಿಸರ್ಗ ಸಹಜವಾದ ಹೂ ಹಣ್ಣಿನಲ್ಲಿ ಸಿಂಗಾರದ ನಿಲುವಿದೆ. ಮನುಜರ ಬಲವಿದೆ ಪ್ರಕೃತಿಯ ಸಿರಿಯ ನಿಜ ಗೆಲುವಿದೆ.

ಮಾವಿನ ಗಿಡಮರದ ಹಸುರೆಲ್ಲಾ ಮಂಗಳವನ್ನೇ ಸೂಚಿಸುತ್ತದೆ. ನಮ್ಮ ಜನ ಆದ್ದರಿಂದಲೇ ಮನೆಯ ಮುಂಬಾಗಿಲಿಗೆ ಮಾವಿನ ತೋರಣ ಕಟ್ಟುವ ಪದ್ಧತಿಯನ್ನು ಅನುಚಾನವಾಗಿ ಪಾಲಿಸಿಕೊಂಡು ಬಂದಿದ್ದಾರೆ.

ವಸಂತದಲ್ಲಿ ಕೊರಡೂ ಕೊನರೀತು; ಕೊಂಬೆ ರಂಬೆ ಗೊಂಚಲು ಗೊಂಚಲು ಹೂವಿನಿಂದ ತೂಗಿ ತೊನೆದೀತು ಎಷ್ಟು ಬಗೆಯ ಹೂವು, ಎಷ್ಟು ಬಗೆಯ ಹಣ್ಣು ತಳಿರಿನ ಹೊಳೆಯಲ್ಲೂ ಬಗೆ ಬಗೆ ತರೆಹವಾರಿ ತೀವ್ರತೆಯ ಹಸಿಹಸುರು! ಎಳೆ ಹಸುರು, ಚಿಗುರು ಹಸುರು, ಗಿಣಿ ಹಸುರು, ದಟ್ಟ ಹಸುರು - ಹೀಗೆ ವನ ತುಂಬ ಹಸುರೇ ಉಸಿರು.

**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು.**

**ಜೊತೆಗೆ "ಓಂ ನಮೋ ವೇಂಕಟೇಶಾಯ" ಎಂದು ನಾಮ ಸ್ಮರಣೆಯನ್ನು ಧ್ಯಾನಿಸಬೇಕು.**

**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು.**

**ಬೇರೆಯವರನ್ನು ಸಂಬೋಧನೆ ಮಾಡುವಾಗ "ಗೋವಿಂದಾ" ಎಂದು ಸಂಬೋಧನೆ ಮಾಡೋಣ.**

**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿಯೇ ಇರಬೇಕು.**


ಶ್ರೀನಿವಾಸ ಮಂಗಾಪುರಂ,
ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ
ಪುಷ್ಪಯಾಗ ಮಹೋತ್ಸವ (15-03-2026)



# ಶ್ರೀಕೂರೇಶ ಪ್ರಣೀತ "ಶ್ರೀಸ್ತವ"

**ತೆಲುಗು ಮೂಲ : ಡಾ॥ ಈ. ಎ. ಶಿಂಗರಾಚಾರ್ಯರು**
**ಅನುವಾದ : ಎಸ್. ವಾದಿರಾಜ**

**ಅವತಾರ :**

**ಕೂರೇಶರು ಶ್ರೀಮದ್ರಾನುಜಾಚಾರ್ಯರ ಅಂತರಂಗಿಕ ಶಿಷ್ಯರಾಗಿದ್ದರು. ವಿಶಿಷ್ಟಾದ್ವೈತವನ್ನು ಪ್ರಚಾರ ಮಾಡಿ ಆಚಾರ್ಯ ಪರಂಪರೆಯಲ್ಲಿ ಸೇರಿದವರು. ಇವರು 'ಪಂಚಸ್ತವಿ' ಎಂಬ ಹೆಸರಿನಲ್ಲಿ ಐದು ಸ್ತೋತ್ರಗಳ ಸಂಪುಟವನ್ನು ರಚಿಸಿದರು. ಇದರಲ್ಲಿ 'ಶ್ರೀಸ್ತವ' ವೂ ಒಂದು ವಜ್ರದಂತಿದೆ. ಲಕ್ಷ್ಮೀಸ್ವರೂಪಿಣಿ, ಶ್ರೀರಂಗದಲ್ಲಿ ನೆಲೆಸಿರುವ 'ಶ್ರೀರಂಗನಾಯಕಿ'ಯ ವೈಭವವನ್ನು ಈ ಸ್ತವದಲ್ಲಿ ವಿವರಿಸಲಾಗಿದೆ. ಶ್ರೀಸ್ತವ - ವೇದೋಕ್ತ 'ಶ್ರೀ ಸೂಕ್ತ' ವಿಷ್ಣು ಪುರಾಣದಲ್ಲಿನ ಇಂದ್ರಕೃತ 'ಶ್ರೀಸ್ತುತಿ' ಯಾಮುನಾಚಾರ್ಯರ ಚತುಃಶ್ಲೋಕಿಯಲ್ಲಿನ ವಿಷಯಗಳನ್ನು ಸುಂದರವಾಗಿ ವರ್ಣಿಸಲಾಗಿದೆ. ಶ್ರೀಲಕ್ಷ್ಮೀಜಯಂತಿಯ ಸಂದರ್ಭದಲ್ಲಿ ಸಪ್ತಗಿರಿ ಮಾಸಪತ್ರಿಕೆಯು ಓದುಗರಿಗಾಗಿ ಈ ಸ್ತೋತ್ರವನ್ನು ಕಾಣಿಕೆಯಾಗಿ ನೀಡುತ್ತಿದೆ.**

**ಕೂರೇಶರನ್ನು ಸ್ತುತಿಸುವ ಶ್ಲೋಕ (ತನಿಯಾನ್)**

ಶ್ರೀವತ್ಸಚಿಹ್ನಮಿಶ್ರೇಭ್ಯೋ ನಮ ಉಕ್ತಿ ಮಧೀಮಹ
ಯದುಕ್ತಯ ಸ್ತ್ರಯೀಕಂಠೇ ಯಾಂತಿ ಮಂಗಳಸೂತ್ರತಾಮ್॥

ಯಾರ ಸೂಕ್ತಿಗಳ ವೇದಮಾತೆಯ ಕಂಠದಲ್ಲಿ ಮಂಗಳ ಸೂತ್ರದಂತೆ ಹೊಳೆಯುತ್ತಿವೆಯೋ, ಅಂತಹಾ ಶ್ರೀವತ್ಸ ಚಿಹ್ನೆಯಂತಹವರಿಗೆ ಮನಸಾ, ವಾಚಾ, ಕರ್ಮಣಾ ನಮಸ್ಕರಿಸುತ್ತಿದ್ದೇನೆ.

ಸ್ವಸ್ತಿ ಶ್ರೀ ರ್ದಿಶತಾ ದಶೇಷಜಗತಾಂ ಸರ್ಗೋಪಸರ್ಗಸ್ಥಿತೀಃ
ಸ್ವರ್ಗಂ ದುರ್ಗತಿ ಮಾಪವರ್ಗಿಕಪದಂ ಸರ್ವಂ ಚ ಕುರ್ವನ್ ಹರಿಃ
ಯಸ್ಯಾ ವೀಕ್ಷ್ಯ ಮುಖಂ ತದಿಂಗಿತಪರಾಧೀನೋ ವಿಧತ್ತೇಽಖಿಲಮ್
ಕ್ರಿಡೇಯಂ ಖಲು ನಾನ್ಯಥಾಽಸ್ಯ ರಸದಾ ಸ್ಯಾದೈಕರಸ್ಯಾತ್ತಯಾ॥1॥

ಲೋಕಗಳ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವಂತಹಾ ಶ್ರೀಹರಿಯು ತನ್ನ ಭಕ್ತರಿಗೆ ಸ್ವರ್ಗ, ನರಕಗಳನ್ನು ಮೋಕ್ಷಗಳೆಲ್ಲವನ್ನೂ ಶ್ರೀಲಕ್ಷ್ಮಿದೇವಿಯನ್ನು ನೋಡಿಯೇ ಅನುಗ್ರಹಿಸುತ್ತಾನೆ. ಆಕೆಯ ಮನೋರಥದಂತೆಯೇ ಎಲ್ಲಾ ಕಾರ್ಯಗಳನ್ನೂ ನೆರವೇರಿಸುತ್ತಾನೆ. ಅಂತಹಾ ಭಗವಂತನೊಂದಿಗೆ ಆ ಲಕ್ಷ್ಮೀದೇವಿಯು ಏಕಾಭಿಪ್ರಾಯವನ್ನು ಹೊಂದಿರುವುದರಿಂದ, ಈ ಸೃಷ್ಟಿಯೆಲ್ಲವೂ ಅವರಿಬ್ಬರಿಗೆ ಆನಂದವನ್ನು ಉಂಟು ಮಾಡುವಂತಹಾ ಆಟವಾಗಿದೆ. ಅಂತಹಾ ಶ್ರೀದೇವಿಯು ನಮಗೆ ಶ್ರೇಯಸ್ಸನ್ನುಂಟುಮಾಡಲಿ.

ಹೇ ಶ್ರೀದೇವಿ! ಸಮಸ್ತಲೋಕಜನನಿ ! ತ್ವಾ ಸ್ತೋತು ಮೀಹಾಮಹೇ
ಯುಕ್ತಾಂ ಭಾವಯ ಭಾರತೀಂ ಪ್ರಗುಣಯ ಪ್ರೇಮ ಪ್ರಧಾನಾಂ ಧಿಯಮ್।
ಭಕ್ತಿ ಬಂಧಯ ನಂದಯಾಶ್ರಿತ ಮಿಮಂ ದಾನಂ ಜನಂ ತಾವಕಂ
ಲಕ್ಷ್ಯಂ ಲಕ್ಷ್ಮೀ! ಕಟಾಕ್ಷವೀಚಿವಿಸೃತೇ ಸ್ತೇ ಸ್ಯಾಮ ಚಾಮೀವಯಮ್॥2॥

ಹೇ ಲಕ್ಷ್ಮೀದೇವಿ! ಲೋಕಗಳೆಲ್ಲಕ್ಕೂ ಜನನಿಯಾದ ನಿನ್ನನ್ನು ನಾವು ಸ್ತುತಿಸುವುದಕ್ಕೆ ಬೇಕಾದ ವಾಕ್ಕನ್ನು ಅನುಗ್ರಹಿಸು. ಭಕ್ತಿ ಪ್ರಧಾನವಾದ ಜ್ಞಾನವನ್ನು ನಮಗೆ ಅನುಗ್ರಹಿಸಿ, ನಮ್ಮನ್ನು ನಿನ್ನ ದಾಸನನ್ನಾಗಿ ಮಾಡಿಕೊಂಡು ಸಂತೋಷವನ್ನುಂಟುಮಾಡು. ಅಮ್ಮಾ! ನಿನ್ನ ಕರುಣಾ ಕಟಾಕ್ಷಗಳೆಂಬ ಅಲೆಗಳ ವ್ಯಾಪ್ತಿಗೆ ನಿನ್ನ ದಾಸರಾದ ನಾವೇ ಲಕ್ಷ್ಯವಾಗಲೀ ತಾಯಿ!

ಸ್ತೋತ್ರಂ ನಾಮ ಕಿ ಮಾಮನಂತಿ ಕವಯೋ ಯದ್ಯನ್ಯದೀಯಾನ್ ಗುಣಾನ್
ಅನ್ಯತ್ರ ತ್ವಸತೋಽಧಿರೋಪ್ಯ ಫಣಿತಿಃ ಸಾ ತರ್ಹಿ ವಂಧ್ಯಾ ತ್ವಯಿ।
ಸಮ್ಯಕ್ಸತ್ಯಗುಣಾಭಿವರ್ಣನ ಮಥೋ ಬ್ರೂಯುಃ ಕಥಂ ತಾದೃಶೀ
ವಾಗ್ವಾಚಸ್ಪತಿನಾಽಪಿ ಶಕ್ಯರಚನಾ ತ್ವತ್ಸದ್ಗುಣಾರ್ಣೋನಿಧೌ ॥3॥

ಅಮ್ಮಾ! ಕವಿಗಳು "ಸ್ತೋತ್ರವೆಂದು ಯಾವುದಕ್ಕೆ ಹೇಳುತ್ತಾರೆ." ಅಂದರೆ ಒಂದು ವ್ಯಕ್ತಿಯಲ್ಲಿನ ಗುಣಗಳನ್ನು ಮತ್ತೊಬ್ಬರಿಗೆ ಇರುವಂತೆ ವರ್ಣಿಸುವುದನ್ನು ಸ್ತೋತ್ರವೆಂದುಕೊಂಡರೆ, ಅಂತಹಾ ಸ್ತೋತ್ರವನ್ನು ನಿನ್ನ ವಿಷಯದಲ್ಲಿ ನಾವು ಮಾಡಲಾರೆವು. ಏಕೆಂದರೆ, ಅತ್ಯಂತ ಅದ್ಭುತವಾದ ವೈಭವವನ್ನು ಹೊಂದಿರುವ ನಿನ್ನ ಗುಣಗಳನ್ನು ಬೃಹಸ್ಪತಿಯೂ ವರ್ಣಿಸಲು ಸಾಧ್ಯವಾಗಿದೆ. ಆದ್ದರಿಂದ ನಿನ್ನ ಕೃಪೆಯಿಂದಲೇ ನಿನ್ನನ್ನು ಸ್ತುತಿಸುವುದು ಸಾಧ್ಯ!

ಯೋ ವಾಚಾಂ ಮನಸಾಂ ಚ ದುರ್ಗ್ರಹತಯಾ ಖ್ಯಾತಾ ಗುಣಾ ಸ್ತಾವಕಾಃ
ತಾನೇವ ಪ್ರತಿ ಸಾಂಬುಜಿಹ್ವಾ ಮುದಿತಾ ಹ್ಯೆ ಮಾಮಿಕಾ ಭಾರತೀ।
ಹಾಸ್ಯಂ ತತ್ತು ನ ಮನ್ಮಹೇ ನ ಹಿ ಚಕೋರ್ಯೈಕಾಽಖಿಲಾಂ ಚಂದ್ರಿಕಾಂ
ನಾಲಂ ಪಾತು ಮಿತಿ ಪ್ರಗೃಹ್ಯ ರಸನಾ ಮಾಸೀತ ಸತ್ಯಾಂ ತೃಷಿ ॥4॥

ಓಲಕ್ಷ್ಮೀ ದೇವಿ! ನಿನ್ನಲ್ಲಿನ ಗುಣಗಳು ವರ್ಣಿಸಲಾಗದಷ್ಟು ರಮಣೀಯವಾದುದು, ಆ ಗುಣಗಳನ್ನು ವರ್ಣಿಸುವುದಕ್ಕೆ ನನಗೆ ಬಹಳ ಆನಂದ!ಹಾಗೆ ಭಾವಿಸುವುದು ಹಾಸ್ಯಾಸ್ಪದವೆಂದು ನಾನು ಭಾವಿಸುವುದಿಲ್ಲ. ಹೇಗೆಂದರೆ ಹೆಣ್ಣು ಚಕೋರ ಪಕ್ಷಿ ಬೆಳದಿಂಗಳೆಲ್ಲವನ್ನೂ ತಾನು ಕುಡಿಯಲಾರೆನೆಂದು ನಾಲಿಗೆಯನ್ನು ಒಳಗೆ ಮುದುರಿಕೊಳ್ಳದೇ,ಎಷ್ಟು ಸಾಧ್ಯವಾದರೆ ಅಷ್ಟು ಗ್ರಹಿಸಿದಂತೆ, ನಾನೂ ನನ್ನ ಯಥಾಶಕ್ತಿ ನಿನ್ನ ಗುಣಗಾನ ಮಾಡಿ ಆನಂದಿಸುತ್ತಿದ್ದೇನೆ.

ಕ್ಷೋದೀಯಾ ನಪಿ ದುಷ್ಟಬುದ್ಧಿ ರಪಿ ನಿಸ್ನೇಹೋಲಿಪ್ಯನೀಹೋಲಿಪಿತೇ
ಕೀರ್ತಿಂದೇವಿ! ಲಿಹ ನ್ನಹಂ ನ ಚ ಭೀಭೇಮ್ಯಜ್ಜೋ ನ ಜಿಹ್ರೇಮಿ ಚ ।
ದುಷ್ಯೇ ತ್ಸಾ ತು ನ ತಾವತಾ ನ ಹಿ ಶುನಾ ಲೀಢಾಲಿಪಿ ಭಾಗೀರಥೀ
ದುಷ್ಯೇತ್ ಶ್ವಾಲಿಪಿ ನ ಲಜ್ಜತೇ ನ ಚ ಬಿಭೇತ್ಯಾರ್ತಿ ಸ್ತು ಶಾಮ್ಯೇ ಚ್ಛುನಃ॥5॥

ಹೇ ದೇವೀ! ನಿನ್ನ ಬಗೆಗೆ ಏನೂ ತಿಳಿಯದ ನಾನು ಭಯವಿಲ್ಲದೇ ಸಂಕೋಚವಿಲ್ಲದೇ ನಿನ್ನ ಕೀರ್ತಿಯನ್ನು ಸ್ತುತಿಸಿ ಆನಂದಿಸಬೇಕೆಂದು ಕೊಳ್ಳುತ್ತಿದ್ದೇನೆ. ಆದ್ದರಿಂದ ನಿನ್ನ ಕೀರ್ತಿಯು ಸ್ವಲ್ಪವೂ ಕಡಿಮೆಯಾಗು ವುದಿಲ್ಲ. ಹೇಗೆಂದರೆ ಪವಿತ್ರವಾದ ಗಂಗೆಯಲ್ಲಿ ಶುನಕವು ಮಿಂದರೂ, ತನ್ನ ದಾಹವನ್ನು ಕಳೆದುಕೊಂಡರೂ ಗಂಗೆಯು ಅಪವಿತ್ರಳಾಗುವುದಿಲ್ಲ. ಹಾಗೇ ಶುನಕದ ದಾಹವು ತೀರದೇ ಇರುವುದಿಲ್ಲ ಅಲ್ಲವೇ?

ಐಶ್ವರ್ಯಮಹಾದೇವ ವಾಲಿಲ್ಪ ಮಥವಾ ದೃಶ್ಯೇತ ಪುಂಸಾಂ ಹಿ
ಯತ್ ತಲ್ಲಕ್ಷ್ಯಾಃ ಸಮುದೀಕ್ಷಣಾ ತ್ತವ ಯತ ಸ್ಸಾರ್ವತ್ರಿಕಂ ವರ್ತತೇ।
ತೇನೈತೇನ ನ ವಿಸ್ಮಯೇಮಹಿ, ಜಗನ್ನಾಥೋಲಿಪಿ ನಾರಾಯಣೋ ಧನ್ಯಂ
ಮನ್ಯತ ಈಕ್ಷಣಾ ತ್ತವ ಯತಃ ಸ್ವಾತ್ಮಾನ ಮಾತ್ಮೇಶ್ವರಃ॥ 6॥

ಅಮ್ಮಾ ! ಮಾನವರಿಗೆ ಅಷ್ಟೋ ಇಷ್ಟೋ ಬರುವ ಐಶ್ವರ್ಯವು ನಿನ್ನಿಂದಲೇ ಆಗಿದೆ. ಇದರಲ್ಲಿ ಸಂದೇಹವಿಲ್ಲ. ಏಕೆಂದರೆ ಸಮಸ್ತ ಲೋಕ ವನ್ನೂ ನಿಯಂತ್ರಿಸುವ ಪ್ರಭುವಾದ ಶ್ರೀಮನ್ನಾರಾಯಣನೂ ನಿನ್ನ ಕಟಾಕ್ಷದಿಂದಲೇ ಕೃತಾರ್ಥನಾಗುತ್ತೇನೆಂದು ಭಾವಿಸುತ್ತಿದ್ದಾನಲ್ಲವೇ?

ಐಶ್ವರ್ಯಂ ಯದಶೇಷಪುಂಸಿ ಯದಿದಂ ಸೌಂದರ್ಯ ಲಾವಣ್ಯಯೋಃ
ರೂಪಂ ಯಚ್ಚ ಹಿ ಮಂಗಳಂ ಕಿ ಮಪಿ ಯಲ್ಲೋಕೇ ಸ ದಿತ್ಯುಚ್ಯುತೇ।
ತತ್ಸರ್ವಂ ತ್ವದಧೀನ ಮೇವ ಯದತಃ ಶ್ರೀಸತ್ಯಭೇದೇನ ವಾ,
ಯದ್ವಾ ಶ್ರೀಮದಿತೀದೃಶೇನ ವಚಸಾ ದೇವಿ! ಪ್ರಥಾ ಮಶ್ನುತೇ ॥7॥

ಓ ಲಕ್ಷ್ಮೀದೇವಿ! ಜೀವರೆಲ್ಲರಿಗೂ ದೊರೆಯುವ ಸಂಪತ್ತು, ಸೌಂದರ್ಯ, ಲಾವಣ್ಯ ಪವಿತ್ರತೆ ಇವೆಲ್ಲವೂ ನಿನ್ನಂದಲೇ ಉಂಟಾಗಿದೆ. ಆದ್ದರಿಂದ ಅವುಗಳನ್ನು ಹೆಸರಿಸುವಾಗ ನಿನ್ನ ಹೆಸರಿನಲ್ಲಿನ "ಶ್ರೀ" ಅಥವಾ ಶ್ರೀಮತ್ ಎಂಬ ಪದವನ್ನು ಸೇರಿಸಿ ವ್ಯವಹರಿಸುತ್ತಾರೆ.

ದೇವೀ! ತ್ವನ್ಮಹಿಮಾವಧಿ ರ್ನ ಹರಿಣಾ ನಾಲಿ ಪಿತ್ವ್ ಅಯಾ ಜ್ಞಾಯತೇ
ಯದ್ಯಪ್ಯೇವ, ಮಥಾಲಿಪಿ ನೈವ ಯುವಯೋ ಸ್ಸರ್ವಜ್ಞತಾ ಹೀಯತೇ।
ಯನ್ನಾಸ್ತ್ಯೇವ ತದಜ್ಞತಾ ಮನುಗುಣಾಂ ಸರ್ವಜ್ಞತಾಯಾ ವಿದುರ್ವ್ಯೋಮಾಂ
ವ್ಯೋಮಾಂ ಭೋಜ ಮಿದಂತಯಾ ಕಿಲ ವಿದನ್ ಭ್ರಾಂತೋಲಿಯ ಮಿತ್ಯುಚ್ಯತೇಃ॥8॥

ಓ ದೇವಿ! ನಿನ್ನ ವೈಭವವನ್ನು ವರ್ಣಿಸುವುದಕ್ಕೆ ನಿನ್ನಿಂದಾಗಲೀ, ನಿನ್ನ ಪತಿಯಾದ ನಾರಾಯಣನಿಂದಲೂ ಸಾಧ್ಯವಿಲ್ಲ. ಆದರೂ ನಿಮ್ಮ ಸರ್ವಜ್ಞತೆಗೆ ಯಾವುದೇ ಲೋಪವಿಲ್ಲ. ಹೇಗೆಂದರೆ, ಪ್ರಪಂಚದಲ್ಲಿನ ಪದಾರ್ಥಗಳಲ್ಲಿ ನಿನ್ನ ವೈಭವವೂ ಒಂದಲ್ಲವೆ? ಯಾರಿಗೂ ತಿಳಿಯದಾ ದರೂ ಅದು ತಿಳಿಯದಂತೆ ಇರುವುದು ನಿನ್ನ ಸರ್ವಜ್ಞತೆಯ ಉತ್ಕೃಷ್ಟತೆ ಯಲ್ಲವೇ?

ಲೋಕೇ ವನಸ್ಪತಿಬೃಹಸ್ಪತಿತಾರತಮ್ಯಂ
ಯಸ್ಯಾಃ ಪ್ರಸಾದಪರಿಣಾಮ ಮುದಾಹರಂತಿ।
ಸಾ ಭಾರತೀ ಭಗವತೀ ತು ಯದೀಯದಾಸೀ,
ತಾಂ ದೇವದೇವಮಹಿಷೀಂ ಶ್ರಿಯ ಮಾಶ್ರಯಾಮಃ॥

ಅಮ್ಮಾ! ಲೋಕದಲ್ಲಿ ಒಬ್ಬ ಜೀವನು ಜಡನಾಗಿ, ವಿದ್ವಾಂಸನಾಗಿ ಹುಟ್ಟುವುದು ಸರಸ್ವತೀದೇವಿಯ ಅನುಗ್ರಹದಿಂದ ಉಂಟಾಗುತ್ತದೆ ಆದರೆ ಆಕೆಯೂ ನಿನ್ನ ಆಜ್ಞಾನುಸಾರವಾಗಿ ನಡೆದುಕೊಳ್ಳುವಳಲ್ಲವೇ! ಅಂತಹಾ ದೇವದೇವನ ದೇವಿಯಾದ ನಿನ್ನನ್ನು ಆಶ್ರಯಿಸುತ್ತಿದ್ದೇವೆ.

ಯಸ್ಯಾಃ ಕಟಾಕ್ಷಮೃದುವೀಕ್ಷಣದೀಕ್ಷಣೇನ
ಸದ್ಯಃ ಸಮುಲ್ಲಸಿತಪಲ್ಲವ ಮುಲ್ಲಲಾಸ!
ವಿಶ್ವಂ ವಿಪರ್ಯಯಸಮುತ್ಥವಿಪರ್ಯಯಂ ಪ್ರಾಕ್
ತಾಂ ದೇವದೇವಮಹೀಷೀಂ ಶ್ರಿಯ ಮಾಶ್ರಯಾಮಃ॥10॥

ಹಿಂದೆ ಪ್ರಳಯದ ಸಮಯದಲ್ಲಿ,ಲಕ್ಷ್ಮೀದೇವಿಯ ಕಟಾಕ್ಷವನ್ನು ಹೊಂದಲಾಗದೆ ಜಗತ್ತೆಲ್ಲಾ ಬಾಡಿಹೋದುವು. ಅದನ್ನು ಪುನಃ ಅನು ಗ್ರಹಿಸಬೇಕೆಂದು ಆಕೆ ಸಂಕಲ್ಪಸಿದ ನಂತರ ಪುನಃಚಿಗುರಿತು. ಅಂತಹಾ ದೇವದೇವನ ದೇವಿಯಾದ ಆ ಲಕ್ಷ್ಮೀ ದೇವಿಯನ್ನು ಆಶ್ರಯಿಸುತ್ತಿದ್ದೇನೆ.

ಯಸ್ಯಾಃ ಕಟಾಕ್ಷವೀಕ್ಷಾ ಕ್ಷಣಲಕ್ಷ್ಯಂ ಲಕ್ಷಿತಾ ಮಹೇಶಾಃ ಸ್ಯುಃ
ಶ್ರೀರಂಗರಾಜಮಹಿಷೀ ಸಾ ಮಾ ಮಪಿ ವೀಕ್ಷತಾಂ ಲಕ್ಷ್ಮೀಃ ॥11॥

ಯಾವ ಲಕ್ಷ್ಮಿದೇವಿಯ ಕಟಾಕ್ಷ ವೀಕ್ಷಣೆಯನ್ನು ಪಡೆದವರು ಅದ್ಭುತವಾದ ಭಗವತ್ ಕೈಂಕರ್ಯ ಎನ್ನುವ ಸಂಪತ್ತನ್ನು ಹೊಂದಿದವರಾಗಿ, ಧನ್ಯರಾಗುತ್ತಿದ್ದಾರೋ ಅಂತಹಾ ವೈಭವವನ್ನು ಹೊಂದಿದ ಶ್ರೀರಂಗನಾಯಕಿಯ ರೂಪದಲ್ಲಿನ ಲಕ್ಷ್ಮೀದೇವಿಯು ನನ್ನನ್ನು ಅನುಗ್ರಹಿಸಬೇಕೆಂದು ಈ ಶ್ಲೋಕವು ಎಲ್ಲಾ ಸಂಪತ್ತಿಗೂ ಮೂಲ ಶ್ರೀ ಲಕ್ಷ್ಮೀದೇವಿಯೇ ಎಂದು ತಿಳಿಸುತ್ತಿದೆ.

ಈ 'ಶ್ರೀಸ್ತವ' ಸ್ತೋತ್ರ ವನ್ನು ಪ್ರತಿದಿನವೂ ಪಠಿಸುವುದರಿಂದ ಸಕಲ ಸಂಪತ್ತು, ಶ್ರೇಯಸ್ಸು ಶಾಂತಿ ಸುಖಗಳು ದೊರೆಯುತ್ತದೆ ಇದರಲ್ಲಿ ಸಂದೇಹವಿಲ್ಲ. ಭಕ್ತರೆಲ್ಲರೂ ಈ ಸ್ತವವನ್ನು ಸ್ತುತಿಸಿ ಧನ್ಯರಾಗಿ!

ಸರ್ವೇ
ಜನಾಃ
ಸುಖಿನೋ
ಭವಂತು







ತಿ.ತಿ.ದೇ., ನೂತನ ಕಾರ್ಯನಿರ್ವಹಣಾಧಿಕಾರಿಯಾಗಿ ಶ್ರೀ ಮುದ್ದಾಡ ರವಿಚಂದ್ರ, ಐ.ಎ.ಎಸ್., ರವರು ಪ್ರಮಾಣ ಸ್ವೀಕಾರ ಮಾಡುತ್ತಿರುವ ದೃಶ್ಯ. ಇವರೊಂದಿಗೆ ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್.ವೆಂಕಯ್ಯಚೌದರಿ, ಐ.ಆರ್.ಎಸ್., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ಡಾ॥ ಶರತ್, ಐ.ಎ.ಎಸ್., ಮತ್ತು ಮುಖ್ಯ ಭದ್ರತಾಧಿಕಾರಿ ಶ್ರೀ ಮುರಳಿ ಕೃಷ್ಣ, ಐ.ಪಿ.ಎಸ್., ಪಾಲ್ಗೊಂಡರು.

ಶ್ರೀ ಮುದ್ದಾಡ ರವಿಚಂದ್ರ 1996 ರ ಬ್ಯಾಚ್‌ನ ಹಿರಿಯ ಭಾರತೀಯ ಆಡಳಿತ ಸೇವೆ (ಐ.ಎ.ಎಸ್.,) ಅಧಿಕಾರಿಯಾಗಿದ್ದು ಆಂಧ್ರಪ್ರದೇಶಕ್ಕೆ ಸೇರಿದವರು. ಅವರು 1995 ರಲ್ಲಿ 24 ನೇ ವಯಸ್ಸಿನಲ್ಲಿ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬಿ.ಟೆಕ್ (ಮೆಕ್ಯಾನಿಕಲ್ ಇಂಜಿನಿಯರಿಂಗ್) ಪದವಿ ಪಡೆದು ಅವರು ಆಂಧ್ರ ಪ್ರದೇಶದಲ್ಲಿ ಅನೇಕ ಪ್ರಮುಖ ಜವಾಬ್ದಾರಿಗಳನ್ನು ಹುದ್ದೆಗಳನ್ನು ಅಲಂಕರಿಸಿದ್ದಾರೆ. ಹಣಕಾಸು, ಸಮಾಜ ಕಲ್ಯಾಣ, ಆರೋಗ್ಯ ಮತ್ತು ಮುಖ್ಯಮಂತ್ರಿ ಕಛೇರಿಯಲ್ಲಿ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಅವರು ಆಂಧ್ರಪ್ರದೇಶದ ಮುಖ್ಯ ಮಂತ್ರಿಗಳ ಪ್ರತ್ಯೇಕ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಕೆಲಸದ ಅನುಭವಗಳು

ಸಹಾಯಕ ಕಲೆಕ್ಟರ್, ಆಸಿಫಾಬಾದ್, ಅದಿಲಾಬಾದ್ ಜಿಲ್ಲೆ, ಯೋಜನಾ ನಿರ್ದೇಶಕರು DPAP ಚಿತ್ತೂರು, ಸಂಯುಕ್ತ ಕಲೆಕ್ಟರ್,ರಂಗಾರೆಡ್ಡಿ (ಆರ್.ಆರ್) ಹೈದರಾಬಾದ್, ಕಲೆಕ್ಟರ್, ನೆಲ್ಲೂರು ಕಲೆಕ್ಟರ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್, ಚಿತ್ತೂರು, ಉಪಾಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, APHM & HIDC ಹೈದರಾಬಾದ್, ಕಲೆಕ್ಟರ್ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟ್, ಪೂರ್ವ (East) ಗೋದಾವರಿ, ಕಾರ್ಯದರ್ಶಿ, ಆಂಧ್ರಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿ, ವ್ಯವಸ್ಥಾಪಕ ನಿರ್ದೇಶಕರು, APHM & HIDC ಸರ್ಕಾರದ ಕಾರ್ಯದರ್ಶಿ, ಹಣಕಾಸು (ವೆಚ್ಚ), ಸರ್ಕಾರದ ಕಾರ್ಯದರ್ಶಿ ಸಮಾಜ ಕಲ್ಯಾಣ ಇಲಾಖೆ, ಸರ್ಕಾರದ ಕಾರ್ಯದರ್ಶಿ, ಬುಡಕಟ್ಟು ಕಲ್ಯಾಣ ಇಲಾಖೆ, ಸರ್ಕಾರದ ಕಾರ್ಯದರ್ಶಿ (ಕೋವಿಡ್ -19 ನಿರ್ವಹಣೆ ಮತ್ತು ಲಸಿಕೆ) ಆರೋಗ್ಯ, ವೈದ್ಯಕೀಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಕೋವಿಡ್ -19 ನಿರ್ವಹಣೆ ಮತ್ತು ಲಸಿಕೆ) ಆರೋಗ್ಯ, ವೈದ್ಯಕೀಯ ಮತ್ತು ಕುಟುಂಬ ಶಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳೆಯರು, ಮಕ್ಕಳು, ಅಂಗವಿಕಲುರು ಮತ್ತು ಹಿರಿಯ ನಾಗರೀಕರ ಇಲಾಖೆ.

ಹಲವು ಸರ್ಕಾರಿ ಇಲಾಖೆಗಳಲ್ಲಿ ವಿವಿಧ ಸ್ಥಾನಮಾನಗಳಲ್ಲಿ ಕಾರ್ಯನಿರ್ವಹಿಸಿ ಅಪಾರವಾದ ಅನುಭವವನ್ನು ಗಳಿಸಿಕೊಂಡು ಪ್ರಜಾಸ್ನೇಹಿಯಾಗಿ ಪ್ರತಿಯೊಬ್ಬರು ಕಾರ್ಯನಿರ್ವಹಿಸುವ ಭಾವವನ್ನು ಮೂಡಿಸಿ ಮೇಲಾಧಿಕಾರಿಗಳ ಬಳಿ ಪ್ರಶಂಸೆಗಳನ್ನು ಪಡೆದರು. ಇವರು ಕಲಿಯುಗ ಪ್ರತ್ಯಕ್ಷ ದೈವವಾದ ಶ್ರೀ ವೆಂಕಟೇಶ್ವರ ಸ್ವಾಮಿಯವರ ಸೇವೆಗಾಗಿ ತಿ.ತಿ.ದೇ ಕಾರ್ಯನಿರ್ವಹಣಾಧಿಕಾರಿಗಳಾಗಿ 06-02-2026 ರಂದು ಪ್ರಮಾಣ ಸ್ವೀಕಾರ ಮಾಡಿದರು. ನಂತರ ತಿ.ತಿ.ದೇ., ಆಡಳಿತ ಮಂಡಳಿಯ ಎಕ್ಸ್ ಅಫಿಷಿಯೋ ಸದಸ್ಯರಾಗಿಯೂ ಕೂಡ ಪ್ರಮಾಣ ಸ್ವೀಕಾರ ಮಾಡಿದರು. ಸಪ್ತಗಿರಿ ಮಾಸ ಪತ್ರಿಕೆಯ ಗೌರವ ಸಂಪಾದಕರಾಗಿಯೂ ಕೂಡ ಕಾರ್ಯವನ್ನು ನಿರ್ವಹಿಸುತ್ತಾರೆ. ಶ್ರೀಯುತರಿಗೆ ಸಪ್ತಗಿರಿ ಮಾಸ ಪತ್ರಿಕೆಯ ವತಿಯಿಂದ ಅಭಿನಂದನೆಗಳನ್ನು ಸಲ್ಲಿಸುತ್ತದೆ.



25-01-2026 ರಂದು ತಿ.ತಿ.ದೇ., ನೂತನ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಯಾಗಿ (ಶಿಕ್ಷಣ ಮತ್ತು ವೈದ್ಯಕೀಯ) ಡಾ॥ ಎ.ಶರತ್, ಐ.ಎ.ಎಸ್.,(ನಿವೃತ್ತಿ) ರವರು ಪ್ರಮಾಣ ಸ್ವೀಕಾರ ಮಾಡಿದರು. ನಂತರ ಕುಟುಂಬ ಸದಸ್ಯರೊಂದಿಗೆ ದರ್ಶನ ಪಡೆದು ತೀರ್ಥ ಪ್ರಸಾದಗಳನ್ನು ಸ್ವೀಕರಿಸಿದರು.



# ರಾಮನ ದರುಶನ ಭಾಗ್ಯದಿಂದ ಪುನೀತಳಾದ ಶಬರಿ

– ಹನುಮಂತ ಮ. ದೇಶಕುಲಕರ್ಣಿ
94803 64915

ಶಬರಿಯ ನಿಜವಾದ ಹೆಸರು ಶ್ರಮನ. ಆಕೆಯು ತುಂಬಾ ಕೆಳಜಾತಿಯ ಕುಟುಂಬ ಮತ್ತು ಶಬರಿ ಎಂದು ಕರೆಯುವ ಬುಡ ಕಟ್ಟು ಜನಾಂಗಕ್ಕೆ ಸೇರಿರುವಾಕೆ. ಶಬರಿ ಎನ್ನುವುದು ಆಕೆ ಜನ್ಮ ಪಡೆದಂತಹ ಬುಡಕಟ್ಟು ಜನಾಂಗದ್ದು. ಇದರಿಂದಲೇ ಆಕೆ ತುಂಬಾ ಜನಪ್ರಿಯಳಾದಳು. ಶ್ರಮನ ಬಾಲ್ಯದಿಂದಲೇ ರಾಮ ದೇವರ ಪೂಜೆ ಮಾಡುವುದು ಮತ್ತು ಭಜನೆ ಹಾಡುವುದರಲ್ಲೇ ಹೆಚ್ಚು ವ್ಯಸ್ತವಾಗಿದ್ದಳು.

ಶಬರಿ ರಾಮನಾಮ ಜಪ ಮಾಡುತ್ತಾ ಮತ್ತು ರಾಮ ದೇವರ ಗುಣಗಾನ ಮಾಡುತ್ತಾ ಸಮಯ ಕಳೆಯುತ್ತಿದ್ದಳು. ಶ್ರಮನ ಹದಿಹರೆಯಕ್ಕೆ ಬರುತ್ತಾ ಇರುವಂತೆ ಆಕೆಗೆ ಮದುವೆ ಮಾಡಿಕೊಡಲಾಯಿತು. ಆದರೆ ಆಕೆಯ ಪತಿಯಲ್ಲಿ ರಾಕ್ಷಸರ ಸ್ವಭಾವವಿತ್ತು. ತುಂಬಾ ವಿನಯಶೀಲ ಸ್ವಭಾವದ ಮಹಿಳೆಯಾಗಿದ್ದಳು. ಆದರೆ ಆಕೆಯ ಪತಿ ಮಾತ್ರ ಇದಕ್ಕೆ ತದ್ವಿರುದ್ಧವಾಗಿದ್ದ. ಆತನಲ್ಲಿ ಎಲ್ಲಾ ರೀತಿಯ ಕೆಟ್ಟ ಅಭ್ಯಾಸಗಳು ಮತ್ತು ಅನಾರೋಗ್ಯಕರ ಸಾಮಾಜಿಕ ಚಟುವಟಿಕೆಗಳು ಇದ್ದವು. ಆತ ಜನರಿಗೆ ತುಂಬಾ ಹಿಂಸೆ ನೀಡುತ್ತಿದ್ದ ಕಾರಣದಿಂದಾಗಿ ಜನರು ಶ್ರಮನಳನ್ನು ದೂರ ಮಾಡಿದ್ದರು. ಇದರಿಂದಾಗಿ ಆಕೆಯ ಜೀವನ ಕೂಡ ತುಂಬಾ ಸಮಸ್ಯೆಯಲ್ಲಿ ಸಿಲುಕಿಕೊಂಡಿತು. ಪತಿಯ ದುಷ್ಟ ಬುದ್ಧಿಯಿಂದ ಬೇಸತ್ತು ಹೋದ ಶ್ರಮನ ಆತನಿಂದ ದೂರವಾಗಿ ಭೌತಿಕ ಜಗತ್ತನ್ನು ಬಿಟ್ಟು ಬಿಡಲು ತೀರ್ಮಾನಿಸಿದಳು. ತನ್ನಂತೆ ರಾಮದೇವರ ಭಕ್ತರು ಇರುವಂತಹ ಆಶ್ರಮವನ್ನು ಹುಡುಕಲು ಶುರು ಮಾಡಿದಳು.

ಹುಡುಕುತ್ತ ಮಾತಂಗ ಪರ್ವತದಲ್ಲಿರುವ ಮಾತಂಗ ಋಷಿ ಆಶ್ರಮಕ್ಕೆ ತಲುಪಿದಳು. ಆ ಕಾಲದಲ್ಲಿ ಋಷಿ ಮಾತಂಗ ಅವರು ತುಂಬಾ ಹೆಸರು ವಾಸಿಯಾಗಿದ್ದರು.ಆಶ್ರಮವನ್ನು ನೋಡಿದ ಶ್ರಮನ ಮುಂದೆ ಹೋಗಲು ನಿರ್ಧರಿಸಿದಳು. ಆದರೆ ಆಕೆಗೆ ಇಲ್ಲಿ ಕೂಡ ಅಡೆತಡೆಗಳು ಬರುತ್ತದೆ ಎಂದು ಆಕೆ ನಿರೀಕ್ಷೆ ಮಾಡಿರಲಿಲ್ಲ.ದೇವರನ್ನು ತಲುಪುವ ಮೊದಲು ಭಕ್ತರು ಹಲವಾರು ಅಡೆ ತಡೆಗಳನ್ನು ಎದುರಿಸಬೇಕಾಗುತ್ತದೆ ಎನ್ನುವಂತಹ ಮಾತು ಕೂಡ ಇದೆ. ಇದರಂತೆ ಶ್ರಮನೆಗೆ ಕೂಡ ಹಲವಾರು ಅಡೆತಡೆಗಳು ಬಂದವು. ಆಶ್ರಮದ ಒಳಗೆ ಹೋಗಲು ಅಲ್ಲಿರುವವರು ಆಕೆಗೆ ಅವಕಾಶ ನೀಡಲಿಲ್ಲ. ಆಕೆ ಕೀಳುಜಾತಿಯವಳು ಎಂದು ಅಲ್ಲಿದ್ದವರು ಹೀಯಾಳಿಸಿದರು. ಇದರಿಂದ ಆಕೆಗೆ ತುಂಬಾ ನೋವಾಯಿತು ಮತ್ತು ಆಕೆ ಆಶ್ರಮದ ಹೊರಗಡೆ ಕುಳಿತು ಬಿಟ್ಟಳು.

ಅದಾಗ್ಯೂ ಇಲ್ಲಿ ನಡೆದಿರುವಂತಹ ಘಟನೆ ಮತ್ತು ಶ್ರಮನ ಆಶ್ರಮದ ಹೊರಗಡೆ ಕುಳಿತಿರುವುದು ಮಾತಂಗಮುನಿಗಳಿಗೆ ತಿಳಿಯಿತು. ಅವರು ಆಕೆಯಲ್ಲಿಗೆ ಬಂದು ಆಶ್ರಮಕ್ಕೆ ಬಂದಿರುವ ಉದ್ದೇಶ ಏನು ಎಂದು ಕೇಳಿದರು. ರಾಮ ದೇವರ ಬಗ್ಗೆ ತನಗೆ ಇರುವಂತಹ ಪ್ರೀತಿ ಮತ್ತು ತನ್ನ ಮುಂದಿನ ಜೀವನವನ್ನು ರಾಮ ದೇವರಿಗಾಗಿ ಮುಡಿಪಾಗಿಡಲು ಬಯಸಿದ್ದೇನೆ ಎಂದು ಶ್ರಮನಳು ಮುನಿಗಳಿಗೆ ತಿಳಿಸುವಳು. ಬಾಲ್ಯದಿಂದಲೇ ರಾಮ ದೇವರ ಬಗ್ಗೆ ತುಂಬಾ ಪ್ರೀತಿ ಹಾಗೂ ಭಕ್ತಿಯನ್ನು ಇಟ್ಟುಕೊಂಡಿರುವಂತಹ ಶ್ರಮನ ಬಗ್ಗೆ ತಿಳಿದುಕೊಂಡ ಮಾತಂಗ ಮುನಿಗಳು ಆಕೆಯನ್ನು ತನ್ನ ಆಶ್ರಮದಲ್ಲಿ ಸೇರಿಸಿಕೊಳ್ಳಲು ಒಪ್ಪಿಕೊಂಡರು ಮತ್ತು ತನ್ನ ಶಿಷ್ಯೆಯಾಗಿ ಸ್ವೀಕರಿಸಿದರು.ಆಶ್ರಮದಲ್ಲಿದ್ದ ಶ್ರಮನ ದಿನಂ ಪ್ರತಿ ಹೋಗಿ ಹಣ್ಣುಗಳನ್ನು ತಂದು ಅದನ್ನು ಶ್ರೀರಾಮ ದೇವರಿಗಾಗಿ

ಶೇಖರಿಸುತ್ತಾ ಇದ್ದಳು. ಶ್ರೀರಾಮ ದೇವರನ್ನು ಭೇಟಿಯಾಗುವುದು ಆಕೆ ಆಶ್ರಮದಲ್ಲಿ ಉಳಿಯಲು ಇದ್ದ ಬಹು ದೊಡ್ಡ ಕಾರಣವಾಗಿದೆ. ಮಾತಂಗ ಮುನಿಗಳು ಹೇಳುತ್ತಿದ್ದಂತಹ ಮಾತುಗಳು ಆಕೆಯ ಧೈರ್ಯವನ್ನು ಮತ್ತಷ್ಟು ಹೆಚ್ಚಿಸುತ್ತಿತ್ತು. ನೀವು ಒಂದು ದಿನ ಖಂಡಿತವಾಗಿಯೂ ರಾಮ ದೇವರನ್ನು ಭೇಟಿಯಾಗುತ್ತಿ ಎಂದು ಮುನಿಗಳು ಹೇಳುತ್ತಲಿದ್ದರು.

ಮುನಿಗಳು ಹೇಳಿದಂತೆ ಒಂದು ದಿನ ಇದು ನಡೆದೇ ಹೋಯಿತು. ವನವಾಸದಲ್ಲಿದ್ದ ವೇಳೆ ಲಕ್ಷ್ಮಣ ಮತ್ತು ರಾಮದೇವರು ಚಿತ್ರಕೂಟ ಬೆಟ್ಟದಲ್ಲಿ ವಿಶ್ರಾಂತಿ ಪಡೆಯಲು ತೆರಳಿದರು. ಅದೇ ಬೆಟ್ಟದಲ್ಲಿ ಶಬರಿ ಕೂಡ ನೆಲೆಸಿದ್ದಳು. ತನ್ನ ಕಣ್ಣೆದುರಿನಲ್ಲಿ ರಾಮ ದೇವರನ್ನು ನೋಡಿದ ಆಕೆಗೆ ಮಾತುಗಳೇ ಹೊರಗೆ ಬರಲಿಲ್ಲ. ಕೆನ್ನೆಗಳ ಮೇಲೆ ಆನಂದಭಾಷ್ಪವು ಹರಿದುಬಂತು. ಆಕೆ ಜೀವನದಲ್ಲಿ ತಾನು ಇಟ್ಟುಕೊಂಡಿದ್ದ ಗುರಿಯನ್ನು ಈಡೇರಿಸಿಕೊಂಡಳು. ಈ ಗುರಿಯು ಅಷ್ಟು ಸುಲಭವಾಗಿ ಇರಲಿಲ್ಲ. ಶ್ರೀರಾಮ ದೇವರಿಗೆ ಹಣ್ಣಗಳು ಹುಳಿಯಾಗಿ ಇರಬಾರದು ಎಂಬ ಕಾರಣಕ್ಕಾಗಿ ಶಬರಿ ಅದನ್ನು ತಿಂದು ನೋಡಿ ಬಳಿಕ ನೀಡುತ್ತಲಿದ್ದಳು. ಆಕೆ ಸಿಹಿಯಾಗಿರುವುದನ್ನು ಮಾತ್ರ ನೀಡುತ್ತಲಿದ್ದಳು ಮತ್ತು ಹುಳಿಯಾಗಿರುವುದನ್ನು ಬಿಡುತ್ತಿದ್ದಳು. ದೇವರಿಗೆ ನಾವು ಮಾಡಿದಂತಹ ಮೊದಲ ಆಹಾರವನ್ನು ಅರ್ಪಿಸಬೇಕು. ಇಲ್ಲವಾದಲ್ಲಿ ದೇವರು ತುಂಬಾ ಕೋಪಗೊಳ್ಳುವರು ಎಂದು ನಾವು ನಂಬಿಕೊಂಡು ಬಂದಿದ್ದೇವೆ. ಆದರೆ ಶಬರಿ ನೀಡಿರುವಂತಹ ಅರ್ಧ ತಿಂದಿರುವ ನೇರಳೆ ಹಣ್ಣುಗಳು ಕೂಡ ರಾಮದೇವರ ಮನ ಗೆಲ್ಲಲ್ಲು ನೆರವಾಯಿತು. ತುಂಬಾ ಮುಗ್ಧೆಯಾಗಿದ್ದ ಶ್ರಮನಳನ್ನು ಇಂದು ಕೂಡ ಜನರು ರಾಮನ ಪರಮಭಕ್ತೆ ಎಂದು ನೆನಪಿಸಿಕೊಳ್ಳುವರು. ಪ್ರತೀ ವರ್ಷವು ಆಕೆಯ ಜನ್ಮ ದಿನವನ್ನು ಫಾಲ್ಗುಣಿ ಮಾಸದಲ್ಲಿ ಬರುವಂತಹ ಕೃಷ್ಣಪಕ್ಷದ ಸಪ್ತಮಿ ತಿಥಿಯಂದು ಶಬರಿ ಜಯಂತಿ ಆಚರಿಸಲಾಗುತ್ತದೆ.



# ಶ್ರೀ ಕೋದಂಡರಾಮ ದೇವಾಲಯ, ತಿರುಪತಿ

ಶ್ರೀ ವೆಂಕಟೇಶ್ವರನು ನೆಲೆಸಿರುವ ತಿರುಮಲೆಯ ಪಾದಗಳ ಸನಿಹದಲ್ಲಿರುವ ತಿರುಪತಿ ಪಟ್ಟಣದಲ್ಲಿದೆ ಈ ದೇಗುಲ. ತನ್ನನ್ನು ದರ್ಶಿಸಿದ ಭಕ್ತರ ಕೋರಿಕೆಗಳನ್ನು ಈಡೇರಿಸುವನೀತನೆಂದು ಪ್ರಸಿದ್ಧಿ ಪಡೆದಿರುವನು. ಲಂಕೆಯ ಮೇಲೆ ದಂಡೆತ್ತಿ ರಾವಣನನ್ನು ಸಂಹರಿಸಿ ಸೀತಾದೇವಿಯನ್ನು ಕರೆದುಕೊಂಡು ಅಯೋಧ್ಯೆಗೆ ಹೊರಟಾಗ ಶ್ರೀರಾಮನೊಂದಿಗೆ ಲಕ್ಷ್ಮಣ, ಹನುಮಂತ, ಸುಗ್ರೀವ,ಜಾಂಬವಂತ,ಅಂಗದ ಮೊದಲಾದವರು ಹೊರಟರು. ಮಾರ್ಗಮಧ್ಯದಲ್ಲಿ ತಿರುಪತಿಯಲ್ಲಿ ಕೆಲ ಸಮಯ ವಿಶ್ರಮಿಸಿದರೆಂದು ಪ್ರತೀತಿಯಿದೆ. ಈ ಸಂದರ್ಭದಲ್ಲಿ ಜಾಂಬವಂತನು ಈ ದೇವಾಲಯ ನಿರ್ಮಿಸಿದ. ತಿರುಪತಿ ನಗರದ ಅಗ್ರ ಭಾಗದಲ್ಲಿ ವಿಶಾಲವಾದ ಸ್ಥಳದಲ್ಲಿ ಈ ದೇವಾಲಯ ನಿರ್ಮಾಣವಾಗಿದೆ.

ಗರ್ಭಗುಡಿಯಲ್ಲಿ ಕೋದಂಡ ಬಾಣಗಳಿಂದ ಕೂಡಿದ ಶ್ರೀರಾಮಚಂದ್ರನ ಮೂರ್ತಿ ಇದ್ದು ಬಲಭಾಗದಲ್ಲಿ ಸೀತಾದೇವಿಯ ವಿಗ್ರಹ ಹಾಗೂ ಲಕ್ಷ್ಮಣಸ್ವಾಮಿಯ ವಿಗ್ರಹವಿದೆ.ಇಲ್ಲಿ ಹನುಮಂತನ ಮೂರ್ತಿ ಇಲ್ಲದಿರುವುದು ವಿಶೇಷವೆನಿಸಿದೆ. ಜಾಂಬವಂತನು ಪ್ರತಿಷ್ಠಾಪಿಸಿರುವುದರಿಂದ ಇಲ್ಲಿ ಆಂಜನೇಯನ ವಿಗ್ರಹವಿಲ್ಲ. ಆದರೆ ದೇವಾಲಯದ ಹೊರ ಭಾಗದಲ್ಲಿ ಹನುಮಂತನ ಮೂರ್ತಿ ಇದೆ. ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣಗಳಿಂದ ಸುಮಾರು 2 ಕಿ.ಮೀ.ದೂರದಲ್ಲಿದೆ.ಈ ದೇವಾಲಯ ತಿರುಪತಿಯಲ್ಲಿ ನೆಲೆಗೊಂಡಿರುವ ಶ್ರೀ ಕೋದಂಡರಾಮಸ್ವಾಮಿಯನ್ನು ದರ್ಶಿಸಿದರೆ ಕೋರಿಕೆಗಳು ಈಡೇರುತ್ತದೆ.

# ಅಮೂಲ್ಯ ಆಸ್ತಿ - ಸಂಕೀರ್ತನ ಭಂಡಾರ

**- ಎಸ್. ವೆಂಕಟೇಶಮೂರ್ತಿ**



ಅನ್ನಮಾಚಾರ್ಯರಂಥ ಮಹಾಭಕ್ತ ಕವಿಯನ್ನು, ಪದಕವಿತಾಪಿತಾಮಹನನ್ನು ಕುರಿತು 1949 ರ ವರೆಗೆ ಆಧುನಿಕರಿಗೆ ಹೆಚ್ಚೇನು ತಿಳಿದಿರಲಿಲ್ಲವೆಂದರೆ ಎಂಥ ದುರಂತ! ಅನ್ನಮಾಚಾರ್ಯರ ಮೊಮ್ಮಗ ತಾಳ್ಳಪಾಕ ಚಿನ್ನಯ್ಯ ಅಥವಾ ಚಿನ್ನ ತಿರುವೇಂಗಡನಾಥನು " ಶ್ರೀ ಅನ್ನಮಾಚಾರ್ಯ ಚರಿತಮು" ಎಂಬ ತನ್ನ ತಾತನ ಜೀವನ ಚರಿತ್ರೆಯನ್ನು ರಚಿಸಿದುದ್ದು ತಾಳ್ಳಪಾಕ ಸೂರ್ಯನಾರಾಯಣಯ್ಯ ಎಂಬ ತಾಳ್ಳಪಾಕ ವಂಶಸ್ಥರ ಬಳಿ ತಾಳೆಗರಿ ಗ್ರಂಥ ರೂಪದಲ್ಲೇ ಇತ್ತು. ಅವರೇ ಅದನ್ನು ಅದು ನಾಶವಾಗುವ ಮುನ್ನ ಕಾಗದದ ಮೇಲೆ ಬರೆದು ಪ್ರತಿ ಮಾಡಿದರು. ಇದು ಜರುಗಿದ್ದು 1940 ರಲ್ಲಿ. ಅವರು ಈ ಪ್ರತಿಯನ್ನು ಒಂದು ಗ್ರಂಥಾಲಯಕ್ಕೆ ನೀಡಿದರು. ಆದರೆ ಅಸಂಖ್ಯ ತಪ್ಪುಗಳಿಂದ ಕೂಡಿದ್ದು ಈ ಪುಸ್ತಕವನ್ನು ಬಹು ಶ್ರಮವಹಿಸಿ ತಿದ್ದಿ ಪಡಿ ಒಂದು ರೂಪಕ್ಕೆ ತಂದವರು ಸಾಧುಸುಬ್ರಹ್ಮಣ್ಯ ಶಾಸ್ತ್ರಿಗಳು. ವೇಟೂರಿ ಪ್ರಭಾಕರ ಶಾಸ್ತ್ರಿ ಮತ್ತು ರಾಳ್ಲಪಳ್ಳಿ ಅನಂತಕೃಷ್ಣಶರ್ಮ ಎಂಬ ಮಹಾನ್ ತೆಲುಗು ವಿದ್ವಾಂಸರ ಮೂಲಕ ಪರಿ ಶೋಧನೆಗಳು ಬೆಳಕಿಗೆ ಬಂದವು.ಇದು 1949 ರಲ್ಲಿ ಮುದ್ರಣವಾಯಿತು. ಸುಮಾರು 50 ಸಂಪುಟಗಳ ಈ ಪುಸ್ತಕದಲ್ಲಿ ಅನ್ನಮಾಚಾರ್ಯರ



ಜೀವನ ಚರಿತ್ರೆಯನ್ನು ದ್ವಿಪದಿಯಲ್ಲಿ ಹೇಳಲಾಗಿದೆ. ಅನ್ನಮಾಚಾರ್ಯರು 32,000 ಕೀರ್ತನೆಗಳ ಜೊತೆಗೆ 12 ಶತಕಗಳನ್ನು ದ್ವಿಪದಿಯಲ್ಲಿ ರಾಮಾಯಣವನ್ನು, ಶೃಂಗಾರ ಮಂಜರಿ, ಸಂಕೀರ್ತನ ಲಕ್ಷಣಮು, ವೆಂಕಟಾಚಲ ಮಹಾತ್ಮ್ಯಮು ಮುಂತಾದವನ್ನು ರಚಿಸಿದ್ದರೆನ್ನಲಾಗಿದೆ. ಅವರು ತೆಲುಗು ಪಾಂಡಿತ್ಯ ಉಳ್ಳವರಾಗಿದ್ದರು.

ಇವರ ವಾಙ್ಮಯವನ್ನು ಆಧ್ಯಾತ್ಮ ಸಂಕೀರ್ತನೆಗಳು, ಶೃಂಗಾರ ಕೀರ್ತನೆಗಳು, ಶೃಂಗಾರ ಮಂಜರಿ ಮತ್ತು ವೆಂಕಟಾಚಲಮಹಾತ್ಮೆ ಎಂದು ನಾಲ್ಕು ಭಾಗಗಳಾಗಿ ವಿದ್ವಾಂಸರು ವಿಂಗಡಿಸಿದ್ದಾರೆ. ಇವರ ಕೀರ್ತನೆಗಳು ಹಸ್ತ ಪ್ರತಿಗಳಲ್ಲಿರುವುದಕ್ಕಿಂತ ತಾಮ್ರ ಪತ್ರಗಳ ರೂಪದಲ್ಲಿ ಲಭ್ಯವಾಗಿವೆ. ತಾಮ್ರದ ತಗಡಿನ ಮೇಲೆ ಕೀರ್ತನೆಗಳನ್ನು ಕೆತ್ತಿಸಿ ಶಾಸನಗಳಂತೆ ದಾಖಲಿಸುವ ವಿಧಾನ ಕೂಡ ವಿನೂತನವಾದದ್ದು. ತಿರುಪತಿ ವೆಂಕಟೇಶ್ವರ ದೇವಾಲಯದಲ್ಲಿ ದೇವರ ವಿಷಯಕವಾದ ಉತ್ಸವ ಪದ್ಧತಿಯನ್ನು ಆಚರಣೆಗೆ ತಂದ ಕೀರ್ತಿಯು ಇವರ ಕುಟುಂಬಕ್ಕೆ ಸಲ್ಲುತ್ತದೆ. ಪ್ರಸ್ತುತ ತಿರುಮಲೆ ತಿರುಪತಿ ದೇವಸ್ಥಾನದವರು ಅನ್ನಮಯ್ಯ ಪ್ರಾಜೆಕ್ಟ್ ಮೂಲಕ ಇವರ ಕೀರ್ತನೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವ ಯೋಜನೆಗಳನ್ನು ಹಮ್ಮಿಕೊಂಡಿರುತ್ತಾರೆ.


## ಅನ್ನಮಾಚಾರ್ಯ ಮತ್ತು ಶೃಂಗಾರ

ಭಾರತೀಯ ಸಾಹಿತ್ಯದಲ್ಲಿ ಧಾರ್ಮಿಕ ಶೃಂಗಾರ ಭಾವವು ಭಾಗವತ ಪುರಾಣದಷ್ಟೇ ಪ್ರಾಚೀನವಾದದ್ದು. ಅನ್ನಮಾಚಾರ್ಯರು **"ವೆಂಕಟೇಶ್ವರ ಶತಕಮು"** ಎಂಬ ಕೃತಿಯಲ್ಲಿ ಶ್ರೀವೆಂಕಟೇಶ್ವರ ಮತ್ತು ಅಲಮೇಲು ಮಂಗಮ್ಮನವರ ನಡುವಿನ ಪ್ರೇಮ ಪ್ರಸಂಗಗಳನ್ನು ಬಣ್ಣಿಸಿದ್ದಾರೆ. **"ಶೃಂಗಾರ ಸಂಕೀರ್ತನ"** ಎಂಬ ಕೃತಿಯಲ್ಲಿ ವೆಂಕಟೇಶ್ವರನನ್ನು ನಾಯಕನಾಗಿಯೂ ಕವಿಯು ತನ್ನನ್ನೇ ನಾಯಕಿಯನ್ನಾಗಿಯೂ ಕಲ್ಪಿಸಿಕೊಂಡು ಇಬ್ಬರ ನಡುವಿನ ಪ್ರೇಮ ವ್ಯವಹಾರವನ್ನು ನೆವ ಮಾಡಿಕೊಂಡು ತನ್ನಲ್ಲಿ ದೇವರ ಅನುಗ್ರಹ ಆಗಬೇಕೆಂದು ಹಲುಬುತ್ತಾರೆ. **"ಶೃಂಗಾರ ಮಂಜರಿ"** ಯಲ್ಲಿ ವೇಂಗಡದೊಡೆಯನ ಕರುಣಾ ಕಟಾಕ್ಷ ತನ್ನ ಮೇಲೆ ಬಿದ್ದು ತಾನು ಧನ್ಯನಾದನೆಂದು ಆನಂದಪಟ್ಟಿದ್ದಾರೆ.

ಅನ್ನಮಾಚಾರ್ಯರು **'ದ್ರಾವಿಡಾಗಮ ಸಾರ್ವಭೌಮ'** ಎಂಬ ಅಭಿಮಾನಕ್ಕೆ ಭಾಜನರಾಗಿದ್ದರು. ಇದ್ಯಾವುದರ ಗೊಡವೆಗೆ ಹೋಗದೆ ಸದಾ ವೆಂಕಟೇಶನ ಧ್ಯಾನದಲ್ಲಿ ನಿರತರಾಗಿ ಅದಕ್ಕಿಂತಲೂ ಮಿಗಿಲಾಗಿ ಸಮಕಾಲಿನ ಸಂದರ್ಭದಲ್ಲಿ ಜನಸಾಮಾನ್ಯರಾದಂತೆ ಸಂಗೀತ ಕ್ಷೇತ್ರದ ಅನನ್ಯ ಕೊಡುಗೆಯಿಂದಾಗಿ ಇಂದಿಗೂ ಜನಪ್ರಿಯರಾಗಿದ್ದಾರೆ ಅವರ ಕೃತಿಗಳನ್ನು ಹಾಡುವುದು ಮತ್ತು ಭಜನಾ ಕ್ರಮವನ್ನು ಅನುಸರಿಸುವುದರಿಂದ ಅವರಿಗೆ ಹೆಚ್ಚಿನ ಗೌರವ ಸಲ್ಲಿಸಿದಂತಾಗುತ್ತದೆ.

# ಶ್ರೀರಾಮ ನವಮಿ

ಶ್ರೀಮತಿ ಕೆ.ವಿ. ಪದ್ಮಾವತಿ
97437 22327



## ಶುದ್ಧ ಬ್ರಹ್ಮ ಪರಾತ್ಪರ ರಾಮ

ವಾಲ್ಮೀಕಿ ಮಹರ್ಷಿಯು ರಾಮಾಯಣ ಕಾವ್ಯವನ್ನು ರಚಿಸುವುದಕ್ಕೂ ಮುನ್ನವೇ ರಾಮಕಥೆ ಅನೇಕ ಸೂತರು ಹಾಗೂ ಋಷಿ ಪರಂಪರೆಗಳ ಮೂಲಕ ಜನಮಾನಸದಲ್ಲಿ ಪ್ರಚಲಿತವಾಗಿತ್ತು. ವಾಲ್ಮೀಕಿಯ ಶ್ರೀರಾಮನು ವೈದಿಕ ಉಪದಿಷ್ಟನಾದ ವಿಷ್ಣುವಿನ ಅವತಾರ. ಅಧರ್ಮನಾಶ ಮತ್ತು ಧರ್ಮ ಪ್ರತಿಷ್ಠೆಯೇ ಶ್ರೀರಾಮಾವತಾರದ ಪ್ರಧಾನ ಉದ್ದೇಶ.

## ಅವತಾರ ತತ್ತ್ವ ಮತ್ತು ವ್ಯೂಹಸಿದ್ಧಾಂತ

ಪೌರಾಣಿಕ ಯುಗದಲ್ಲಿ ಭಗವಂತನು ಅವತಾರವಾಗಿ ಆವಿರ್ಭವಿಸುವ ಕಥಾತ್ಮಕ ಪರಂಪರೆ ಸ್ಪಷ್ಟವಾಗಿ ರೂಪುಗೊಂಡಿತು. ಇದೇ ಸಂದರ್ಭದಲ್ಲಿ ವೈಷ್ಣವ ಪಾಂಚರಾತ್ರ ಪದ್ಧತಿ ಕ್ರೂಢೀಕೃತವಾಗಿ,ಅವತಾರೋಪಾಸನೆಯ ತತ್ತ್ವವನ್ನು ದೃಢಪಡಿಸಿತು. ಪಾಂಚರಾತ್ರದ ಅಹಿರ್ಬುಧ್ನ್ಯ ಸಂಹಿತೆಯಲ್ಲಿ ಭಗವಂತನು ತನ್ನ ಮಾಯಾರೂಪದಲ್ಲಿ ಜಗತ್ತಿನಲ್ಲಿ ಪ್ರಕಟವಾಗಿ, ಧರ್ಮಸ್ಥಾಪನೆಯ ನಿಮಿತ್ತ ತನ್ನ ಪಾರ್ಶ್ವದೇವತೆಗಳ ಹಾಗೂ ಅಸ್ತ್ರ-ಶಸ್ತ್ರಗಳೊಂದಿಗೆ ಆವಿರ್ಭವಿಸುವುದನ್ನು ವ್ಯೂಹಾವತಾರವೆಂದು ವಿವರಿಸಲಾಗಿದೆ.


ರಾಮೋತ್ತರತಾಪನೀಯ ಉಪನಿಷತ್ತಿನಲ್ಲಿ ರಾಮ ವ್ಯೂಹದ ವಿಶಿಷ್ಟ ಪ್ರತಿಪಾದನೆ ಕಂಡು ಬರುತ್ತದೆ. ಇಲ್ಲಿ ಪ್ರಣವ (ಓಂಕಾರ) ಸಿದ್ಧಾಂತವನ್ನು ಆಧಾರವನ್ನಾಗಿ ಮಾಡಿಕೊಂಡು ಶ್ರೀರಾಮನ ಪರಬ್ರಹ್ಮತ್ವವನ್ನು ಸಶಕ್ತವಾಗಿ ನಿರೂಪಿಸಲಾಗಿದೆ.

## ಪ್ರಣವ ಮತ್ತು ಚತುರ್ವ್ಯೂಹ

ಸುಮಿತ್ರಾನಂದನನಾದ ಲಕ್ಷ್ಮಣನು ಪ್ರಣವದ 'ಅ' ಕಾರದಿಂದ ಉತ್ಪನ್ನನಾದವನು ಇವನು ಜಾಗ್ರತಾವಸ್ಥೆಯ ಅಭಿಮಾನಿಯಾದ ವಿಶ್ವವೆಂದು ಪ್ರಸಿದ್ಧ ಚತುರ್ವ್ಯೂಹದಲ್ಲಿ ಲಕ್ಷ್ಮಣನು ಸಂಕರ್ಷಣರೂಪ.

ಉಕಾರದಿಂದ ಉತ್ಪನ್ನನಾದ ಶತ್ರುಘ್ನನು ಸ್ವಪ್ನಾವಸ್ಥೆಯ ಅಭಿಮಾನಿದೇವತೆ ತೈಜಸಸ್ವರೂಪ. ಚತುರ್ವ್ಯೂಹದಲ್ಲಿ ಅವನು ಪ್ರದ್ಯುಮ್ನ. ಮಕಾರದಿಂದ ಭರತನ ಸಂಬಂಧ ಪ್ರಾದುರ್ಭಾವ. ಸುಷುಪ್ತಾವಸ್ಥೆಯ ಅಭಿಮಾನಿಯಾದ ಪ್ರಾಜ್ಞ ಸ್ವರೂಪದಲ್ಲಿ ಅವನು ಅನಿರುದ್ಧ.

ಪ್ರಣವದ ಚತುರ್ಥಾಂಶವಾದ ಅರ್ಧಮಾತ್ರಾರೂಪವಾಗಿ ಸ್ವತಃ ಭಗವಾನ್‌ರಾಮನೇ ಅವತರಿಸಿದ್ದಾನೆ. ಅವನೇ ಪುರುಷೋತ್ತಮ. ಅವನ ಏಕೈಕ ಸ್ವರೂಪ ಬ್ರಹ್ಮಾನಂದ. ಚತುರ್ವ್ಯೂಹದಲ್ಲಿ ಅವನು ವಾಸುದೇವನೆಂದು ಪರಿಗಣಿತ.



## ಸೀತಾತತ್ತ್ವ - ನಾದಬಿಂದು ಮತ್ತು ಮೂಲಪ್ರಕೃತಿ

ಶ್ರೀರಾಮನ ಸಾನ್ನಿಧ್ಯ ಮಾತ್ರದಿಂದಲೇ ಸೃಷ್ಟಿ-ಸ್ಥಿತಿ-ಲಯಗಳನ್ನು ನಿರ್ವಹಿಸುವ ಜಗಧಾರಿಣಿ ಸೀತಾದೇವಿ ನಾದ ಬಿಂದು ಸ್ವರೂಪಿಣಿ, ಅವಳೇ ಮೂಲಪ್ರಕೃತಿ. ಪ್ರಣವದಿಂದ ಭಿನ್ನವಾಗಿರುವ ಕಾರಣದಿಂದ ಬ್ರಹ್ಮಾದಿಗಳು ಸೀತೆಯನ್ನು ಪ್ರಕೃತಿತತ್ತ್ವವೆಂದು ವಿವರಿಸಿದ್ದಾರೆ.

## ರಾಮನಾಮ ಮಹಿಮೆ

ಶ್ರೀರಾಮೋತ್ತರತಾಪಿನಿಯಲ್ಲಿ ಓಂಕಾರದ ಮೂರುವರೆ ಮಾತ್ರಗಳ ತತ್ತ್ವವನ್ನು ವಿವರಿಸಲಾಗಿದೆ.

**ಅಕಾರ - ವೈಶ್ವಾನರಾಂಶ ಲಕ್ಷ್ಮಣ;**

ಉಕಾರ-ತೈಜಸ, ಹಿರಣ್ಯ ಗರ್ಭಾಂಶ ಶತ್ರುಘ್ನ;

ಮಕಾರ - ಪ್ರಾಜ್ಞ ಈಶ್ವರಾಂಶ ಭರತ;

ಅರ್ಧಮಾತ್ರೆ - ಕೇವಲ ಬ್ರಹ್ಮಾನಂದ

ವಿಗ್ರಹನಾದ ಶ್ರೀರಾಮ ನಾಮ ಮತ್ತು ರೂಪಗಳ ವಿಚಾರದಲ್ಲಿ ರೂಪ ಕಣ್ಣಿಗೆ ಗೋಚರವಾದರೂ ಮನಸ್ಸನ್ನೂ ತರ್ಕಕ್ಕೆ ನಿಲ್ಲಿಸುತ್ತದೆ. ನಾಮ ಮಾತ್ರ ನೇರವಾಗಿ ಅಂತರಂಗ ಪ್ರವೇಶಿಸುತ್ತದೆ. ಅದಕ್ಕೆ ಜಾತಿ-ಧರ್ಮ ಭಾಷೆಯ ಭೇದವಿಲ್ಲ.

ನಾಮ ಮಾನವ ಕೃತವಲ್ಲ ಅನುಭವಸಿದ್ಧ ಆದ್ದರಿಂದ ರಾಮನಾಮ ಜಪಕ್ಕೆ ನಿರ್ದಿಷ್ಟ ನಿಯಮಗಳಿಲ್ಲ. ಅದು ಕಂಠದಲ್ಲಿ ಅಲ್ಲ, ಮನಸ್ಸಿನಲ್ಲಿ ನೆಲಸಬೇಕು, ದೇಹದ ಪ್ರತಿ ಕಣದಲ್ಲೂ ಸ್ಪಂದಿಸಬೇಕು.

ಗೋಂದವಲಿ ಸದ್ಗುರು ಬ್ರಹ್ಮಚೈತನ್ಯ ಮಹಾರಾಜರು ಹೇಳುವಂತೆ “ರಾಮ ಎಂಬುದು ಆಂತರ್ಯದ ತೇಜಸ್ಸು.”

## ಕಾಶೀ - ಭ್ರೂಮಧ್ಯ ಉಪಾಸನೆ

ಶ್ರೀರಾಮೋತ್ತರತಾಪಿನಿಯ ಪ್ರಕಾರ, ದೇಹದಲ್ಲಿರುವ ಭ್ರೂಮಧ್ಯವೇ ಕಾಶೀ ಕ್ಷೇತ್ರ, ಇದನ್ನೇ ಅವಿಮುಕ್ತ ಕ್ಷೇತ್ರವೆಂದು ಕರೆಯುತ್ತಾರೆ. ಇಡಾ(ಭಾಗೀರಥಿ)ಪಿಂಗಳ (ಯಮುನೆ), ಸುಷುಮ್ನಾ (ಸರಸ್ವತಿ) ನಾಡಿಗಳ ಸಂಗಮವಾಗಿರುವುದರಿಂದ ಇದನ್ನು ತ್ರಿವೇಣಿ ಸಂಗಮ ಎಂದೂ ಹೇಳುತ್ತಾರೆ.

ಇಲ್ಲಿ ಉಪಾಸನೆ ಮಾಡಿದರೆ ಆತ್ಮಜ್ಞಾನದಿಂದ ಉಪಾಸಕನು ಪರಬ್ರಹ್ಮನೊಂದಿಗೆ ಐಕ್ಯಗೊಳ್ಳುವನೆಂದು ಉಪನಿಷತ್ತು ಭರವಸೆ ನೀಡುತ್ತದೆ. ಕುಂಡಲಿನಿಯು ಅಧೋ ಮುಖವಾಗಿ ಇರುವುದರಿಂದ ಈ ಪರಮ ಪ್ರಕಾಶ ಗೋಚರವಾಗುವುದಿಲ್ಲ. ಆದರೆ ಶ್ರೀರಾಮ ಮಂತ್ರಸ್ಮರಣೆ ಮತ್ತು ಧ್ಯಾನದಿಂದ ಕುಂಡಲಿನಿಯ ಉತ್ಥಾನ ಸ್ವಯಂಭೂತವಾಗುತ್ತದೆ ಎಂದು ಉಪನಿಷತ್ತು ಹೇಳುತ್ತದೆ.


## ಶ್ರೀರಾಮಾವತಾರ - ಆದರ್ಶಮಾನವತ್ವ

ಚೈತ್ರಮಾಸದ ಶುಕ್ಲಪಕ್ಷ ನವಮಿಯಂದು ಪುನರ್ವಸು ನಕ್ಷತ್ರದಲ್ಲಿ ಶ್ರೀರಾಮನ ಅವತಾರ **‘ರಾ’** ಎಂದರೆ ಪ್ರಕಾಶ **‘ಮ’** ಎಂದರೆ ಆತ್ಮ ನಮ್ಮೊಳಗಿನ ಜ್ಯೋತಿಯೇ ರಾಮ. ಶ್ರೀರಾಮನು ಪಿತೃಭಕ್ತಿ, ಏಕಪತ್ನೀವ್ರತ, ಪ್ರಜಾಪ್ರೀತಿ, ನ್ಯಾಯನಿಷ್ಠೆ, ಕರುಣೆ ತ್ಯಾಗ-ಎಲ್ಲಾ ಮಾನವ ಮೌಲ್ಯಗಳ ಪರಮಾವಧಿ. ಅವನು ಧರ್ಮವನ್ನು ಉಪದೇಶಿಸಲಿಲ್ಲ. ತನ್ನ ಬದುಕಿನ ಮೂಲಕ ನಡೆದು ತೋರಿಸಿದ.

ಮಾನವನಾಗಿ ಅವತರಿಸಿ ಮಾನವತ್ವವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿ ದೈವತ್ವಕ್ಕೆ ಏರಿದ ಮಹಾನುಭಾವನೇ ಶ್ರೀರಾಮಚಂದ್ರ ಇದುವೇ ರಾಮಾವತಾರದ ಶಾಶ್ವತ ರಹಸ್ಯ- ಅನುಕರಣೀಯ ಆದರ್ಶ.

# ಭಕ್ತಿಯಿಂದ ಬೌದ್ಧಿಕತೆಗೆ ವ್ಯಾಸರಾಜರ ಪರಂಪರೆಯನ್ನು ಮರು ಓದುವ ಅಗತ್ಯ

– ಕೃತಿ ಪರಿಚಯ : ಪ್ರಣವ




## ಗ್ರಂಥಾವಲೋಕನ

ಕೃತಿ : ಶ್ರೀ ವ್ಯಾಸರಾಜರ ಜೀವನ ಮತ್ತು ಕನ್ನಡ ಕೃತಿಗಳ ಅಧ್ಯಯನ

ಲೇಖಕರು : ಡಾ.ಕೆ. ರತ್ನ

ಪ್ರಕಾಶಕರು : ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ, ಶ್ರೀಪಾದರಾಜ ಮಠ, ಚಾಮರಾಜಪೇಟೆ, ಬೆಂಗಳೂರು

ಪುಟ : 506

ಬೆಲೆ : ರೂ 260/-

ವಿವರಗಳಿಗೆ : 9945336592

ಹರಿದಾಸ ಪರಂಪರೆಯನ್ನು ನಾವು ಇನ್ನೂ ಭಕ್ತಿಯ ಸಾಂಪ್ರದಾಯಿಕ ವಲಯದಲ್ಲೇ ಬಂಧಿಸಿಕೊಂಡಿದ್ದೇವೆ. ಆದರೆ ವಿಜಯನಗರ ಯುಗದ ಮಹಾನ್ ಆಚಾರ್ಯರಾದ ಶ್ರೀವ್ಯಾಸರಾಜರು ಕೇವಲ ಭಕ್ತಕವಿಯಲ್ಲ ಅವರು ದ್ವೈತ ವೇದಾಂತದ ಬಲಿಷ್ಠ ಬೌದ್ಧಿಕ ಧ್ವನಿಯಾಗಿದ್ದರು. ಅವರ ಬದುಕು ಮತ್ತು ಬರಹಗಳು ಧರ್ಮ, ತತ್ತ್ವ ಮತ್ತು ಸಮಾಜವನ್ನು ಒಟ್ಟುಗೂಡಿಸಿದ ಚಿಂತನೆಯ ಜೀವಂತ ದಾಖಲೆಗಳಾಗಿವೆ. ಈ ಹಿನ್ನೆಲೆಯಲ್ಲೇ ಶ್ರೀ ವ್ಯಾಸರಾಜರ ಜೀವನ ಮತ್ತು ಕನ್ನಡ ಕೃತಿಗಳ ಅಧ್ಯಯನ ಎಂಬ ಗ್ರಂಥವು ಇಂದಿನ ಅಕಾಡೆಮಿಕ್ ಮತ್ತು ಸಾರ್ವಜನಿಕ ಚರ್ಚೆಗೆ ಮಹತ್ವದ ಕೊಡುಗೆಯಾಗಿ ಕಾಣಿಸುತ್ತದೆ. ವ್ಯಾಸರಾಜರ ಕನ್ನಡ ಕೀರ್ತನೆಗಳನ್ನು ಭಾವನಾತ್ಮಕ ಭಕ್ತಿಗೀತೆಗಳಷ್ಟೇ ಎಂದು ಕಾಣುವ ಪ್ರವೃತ್ತಿ ಇಂದಿಗೂ ಬಲವಾಗಿದೆ. ಆದರೆ ಈ ಕೃತಿಗಳು ದ್ವೈತ ದರ್ಶನದ ಗಂಭೀರ ತಾತ್ತ್ವಿಕತೆಯನ್ನು ಜನಭಾಷೆಯಲ್ಲಿ ಸಾರಿದ ಅಪರೂಪದ ಸಾಹಿತ್ಯ ರೂಪಗಳಾಗಿದೆ. ದ್ವೈತ ತತ್ತ್ವದ ಸಂಕೀರ್ಣ ವಿಚಾರಗಳನ್ನು ಸರಳ ಭಾಷೆಯಲ್ಲಿ ಮಂಡಿಸುವ ಈ ಸಾಧನೆಗೆ ಇನ್ನೂ ಸೂಕ್ತ ವಿಮರ್ಶಾತ್ಮಕ ಸ್ಥಾನ ದೊರಕಿಲ್ಲ. ಈ ಕೊರತೆಯನ್ನು ಪ್ರಶ್ನಿಸುವುದು ಇಂದಿನ ಸಾಹಿತ್ಯಕ ಹೊಣೆಗಾರಿಕೆಯೇ ಆಗಬೇಕು.

ಇಂತಹ ಸಂದರ್ಭದಲ್ಲಿ ವ್ಯಾಸರಾಜರ ಜೀವನ ಮತ್ತು ಕನ್ನಡ ಕೃತಿಗಳನ್ನು ಸಂಶೋಧನಾತ್ಮಕವಾಗಿ ಅಧ್ಯಯನ ಮಾಡುವ ಪ್ರಯತ್ನಗಳು ಕೇವಲ ಭೂತಕಾಲದ ಸ್ಮರಣೆಗಳಲ್ಲ ಅವು ನಮ್ಮ ಸಾಂಸ್ಕೃತಿಕ ಬೌದ್ಧಿಕ ಪರಂಪರೆಯನ್ನು ಮರು ಸ್ಥಾಪಿಸುವ ಚಿಂತನೆಯ ಭಾಗಗಳಾಗಿವೆ. ಹರಿದಾಸ ಸಾಹಿತ್ಯವನ್ನು ಭಕ್ತಿಯ ಮಡಿಲಿನಿಂದ ಹೊರತೆಗೆದು ತತ್ತ್ವ ಮತ್ತು ಇತಿಹಾಸದ ವಿಶಾಲ ನೆಲೆಯಲ್ಲಿ ಓದಬೇಕಾದ ಅಗತ್ಯವನ್ನು ಇಂತಹ ಕೃತಿಗಳು ತೀವ್ರವಾಗಿ ನೆನಪಿಸುತ್ತವೆ.

## ಏಪ್ರಿಲ್ ತಿಂಗಳಲ್ಲಿ ಬರುವ ಹಬ್ಬ ಹರಿ ದಿನಗಳು

02 ವಾಯಲ್ಪಾಡು ಶ್ರೀ ಪಟ್ಟಾಭಿರಾಮ ಸ್ವಾಮಿಯವರ ಪುಷ್ಪಯಾಗ
0 4 ಒಂಟಿಮಿಟ್ಟ ಶ್ರೀಕೋದಂಡರಾಮ ಸ್ವಾಮಿಯರ ಪುಷ್ಪಯಾಗ
08-10 ರ ವರೆಗೆ ಕಾರ್ವೇಟಿನಗರಂ ಶ್ರೀ ವೇಣುಗೋಪಾಲ ಸ್ವಾಮಿಯವರ ವಸಂತೋತ್ಸವಗಳು
14 ತಮಿಳು ಹೊಸವರ್ಷಾರಂಭ, ಡಾ|| ಅಂಬೆಡ್ಕರ್ ಜಯಂತಿ
20 ಪರಶುರಾಮ ಜಯಂತಿ, ಅಕ್ಷಯ ತೃತೀಯ
21 ಶ್ರೀ ಶಂಕರ ಜಯಂತಿ
22 ಶ್ರೀ ರಾಮಾನುಜ ಜಯಂತಿ
23 ಶ್ರೀ ರಾಮಜಯಂತಿ, ತಿರುಪತಿ ಶ್ರೀಕೋದಂಡರಾಮಸ್ವಾಮಿಯವರ ಪುಷ್ಪಯಾಗ
25-27 ರ ವರೆಗೆ ತಿರುಮಲೆ ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯಮಹೋತ್ಸವ
28 ರಿಂದ ಮೇ 1 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ವಸಂತೋತ್ಸವಗಳು
30 ನೃಸಿಂಹ ಜಯಂತಿ, ಮಾತೃಶ್ರೀ ತರಿಗೊಂಡ ವೆಂಗಮಾಂಬ ಜಯಂತಿ

# ಶ್ರುತಿಗಳ ಮಂಗಳ ಸಂದೇಶ

- ಕಲ್ಯಾಣಿ ಮೂರ್ತಿರಾಮನಾಥಪುರ

**ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್‌।**
**ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್‌ಧನಮ್‌॥**

ಅಖಿಲ ಬ್ರಹ್ಮಾಂಡದಲ್ಲಿ ಇರುವ ಜಡ ಚೇತನ ಸ್ವರೂಪ ಜಗತ್ತು ಸಮಸ್ತವಾಗಿಯೂ ಭಗವಂತನಿಂದ ವ್ಯಾಪ್ತವಾಗಿರುವುದು. ಆ ಭಗವಂತನನ್ನು ಜತೆಯಲ್ಲಿಟ್ಟುಕೊಂಡು ತ್ಯಾಗ ಪೂರ್ವಕವಾಗಿ(ಇದನ್ನು)ಅನುಭವಿಸುತ್ತಿರು. ಇದರಲ್ಲಿ ಆಸಕ್ತನಾಗಬೇಡ. ಕಾರಣ ಸಂಪತ್ತು ಭೋಗ್ಯ ಪದಾರ್ಥ ಯಾರದೆಂದರೆ ಯಾರದೂ ಅಲ್ಲ.

**(ಈಶಾವಾಸ್ಯೋಪನಿಷತ್)**

**ಕುರ್ವನ್ನೇದೇಹ ಕರ್ಮಾಣಿ ಜಿಜೀವಿಷೇಚ್ಛತ್‌ ಸಮಾಃ।**
**ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮಲಿಪ್ಯತೇ ನರೇ॥**

ಶಾಸ್ತ್ರನಿಯತವಾದ ಕರ್ಮಗಳನ್ನು (ದೈವ ಪೂಜಾರ್ಥ) ಮಾಡುತ್ತಲೇ ಈ ಜಗತ್ತಿನಲ್ಲಿ ಶತಮಾನಗಳವರೆಗೆ ಬದುಕಲು ಬಯಸಬೇಕು. ಈ ರೀತಿಯಲ್ಲಿ ಮಾಡಲ್ಪಟ್ಟ ಕರ್ಮಗಳು (ತ್ಯಾಗ ಭಾವದಿಂದ ಭಗವಂತನಿಗಾಗಿ) ನಿನ್ನಂತಹ ಮನುಷ್ಯರಲ್ಲಿ ಲಿಪ್ತವಾಗುವುದಿಲ್ಲ. ಇದಕ್ಕಿಂತ (ಭಿನ್ನ) ಬೇರೆ ಯಾವುದೇ ರೀತಿಯ ಮಾರ್ಗವಿಲ್ಲ.(ಮನುಷ್ಯಕರ್ಮದಿಂದ ಮುಕ್ತನಾಗಲು).

**- (ಈಶಾವಾಸ್ಯೋಪನಿಷತ್)**

**ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾವೇ**
**ದೀನ್ಮಹತೀ ವಿನಷ್ಟಿಃ॥**
**ಭೂತೇಷು ಭೂತೇಷು ವಿಚಿತ್ಯ ಧೀರಾಃ ಪ್ರೇತ್ಯಾ**
**ಸ್ಮಾಲ್ಲೋಕಾದಮೃತಾ ಭವಂತಿ॥**

ಒಂದು ವೇಳೆ ಈ ಮನುಷ್ಯ ಶರೀರದಲ್ಲಿಯೇ (ಪರ ಬ್ರಹ್ಮನನ್ನು) ತಿಳಿದಿದ್ದಾದರೆ ಬಹಳ ಒಳ್ಳೆಯದೇ. ಈ ಶರೀರ ಇರುವಾಗಲೇ (ಅದನ್ನು)ತಿಳಿಯದಿದ್ದರೆ ಮಹಾನ್ ವಿನಾಶವೇ. ಇದನ್ನು ಚಿಂತಿಸಿಯೇ ಬುದ್ಧಿವಂತರಾದವರು ಜೀವಿ ಜೀವಿಗಳಲ್ಲಿ ಪ್ರಾಣಿಮಾತ್ರಗಳಲ್ಲಿ ಪರಬ್ರಹ್ಮ ಪುರುಷೋತ್ತಮನನ್ನು)ಅರಿತು ಈ ಲೋಕದಿಂದ ಪಯಣಿಸಿ ಅಮರತ್ವ (ದೈವ ಪ್ರಾಪ್ತಿ)ವನ್ನು ಹೊಂದುತ್ತಾರೆ.

**- ಕೇನೋಪನಿಷತ್**

**ಓಂ ಸಹನಾವವತು। ಸಹ ನೌಭುನಕ್ತು।**
**ಸಹ ವೀರ್ಯಂ ಕರವಾವಹೈ।**
**ತೇಜಸ್ವಿ ನಾವಧೀತಮಸ್ತು। ಮಾ ವಿದ್ವಿಷಾವಹೈ।**



ಪೂರ್ಣಬ್ರಹ್ಮ ಪರಮಾತ್ಮನ್! (ನೀನು) ನಮ್ಮಿಬ್ಬರನ್ನು (ಗುರು-ಶಿಷ್ಯ) ಜತೆ-ಜತೆಗೇ ರಕ್ಷಿಸು, ನಮ್ಮಿಬ್ಬರನ್ನು ಒಟ್ಟಿಗೇ ಕಾಪಾಡು. ಜತೆಯಲ್ಲಿಯೇ ಶಕ್ತಿಕೊಡು, ನಾವು ಅಭ್ಯಸಿಸಿರುವ ವಿದ್ಯೆ ಕಾಂತಿಯುಕ್ತವಾಗಲಿ ಅಲ್ಲದೆ ನಾವಿಬ್ಬರೂ ಪರಸ್ಪರ ದೂಷಿಸದಂತೆ ಕಾಪಾಡು.

**- ಕಠೋಪನಿಷತ್**

**ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಸ್ತೌ ಸಂಪರೀತ್ಯ**
**ವಿವಿನಕ್ತಿಧೀರಃ।**
**ಶ್ರೇಯೋಹಿ ಧೀರೋಽಭಿ ಪ್ರೇಯಸೋ ವೃಣೀತೇ**
**ಪ್ರೇಯೋಮಂದೋ ಯೋಗಕ್ಷೇಮಾದ್ ವೃಣೀತೇ॥**

ಶ್ರೇಯ ಮತ್ತು ಪ್ರೇಯ-ಇವೆರಡೂ ಮನುಷ್ಯನಿಗೆ ಎದುರಾಗುತ್ತಿದೆ. ಬುದ್ಧಿವಂತನಾದವನು ಅವೆರಡರ ಸ್ವರೂಪದ ಬಗ್ಗೆ ಚೆನ್ನಾಗಿ ತಿಳಿದು ಅವುಗಳನ್ನು ಸ್ವಲ್ಪ ಸ್ವಲ್ಪವೇ ಅರಿಯು

ತ್ತಾನೆ. ಅತ್ಯುತ್ತಮ (ಶ್ರೇಷ್ಠ) ಬುದ್ಧಿಯುಳ್ಳವನು. ಪರಮ ಕಲ್ಯಾಣದ ಸಾಧನೆಯನ್ನೇ ಭೋಗಸಾಧನೆಯ ಹೊರತಾಗಿ ಶ್ರೇಷ್ಠವೆಂದು ತಿಳಿದು ಗ್ರಹಿಸುತ್ತಾನೆ. ಆದರೆ ಮಂದ ಬುದ್ಧಿಯವನು ಲೌಕಿಕ ಯೋಗಕ್ಷೇಮದ ಬಯಕೆಯಿಂದ ಭೋಗದ ಸಾಧನ ಸ್ವರೂಪ ಪ್ರೇಯವನ್ನು ಹೊಂದುತ್ತಾನೆ.

**- ಕಠೋಪನಿಷತ್**

**ಜಿಹ್ವಾಯಾ ಅಗ್ರೇ ಮಧು ಮೆ ಜಿಹ್ವಾಮೂಲೇ ಮಧೂಲಕಮ್।**
**ಮ ಮೋದಹ ಕ್ರತಾವಸೋ ಮಮ ಚಿತ್ತಮುಪಾಯಸಿ ॥**

ನನ್ನ ನಾಲಿಗೆಯ ತುದಿಯಲ್ಲಿ ಮಾಧುರ್ಯವಿರಲಿ. ನನ್ನ ನಾಲಿಗೆಯ ಬುಡದಲ್ಲಿ ಮಧುರತೆ ಇರಲಿ. ನನ್ನ ಕೆಲಸಗಳಲ್ಲಿ ಮಾಧುರ್ಯಾ ನೆಲಸಲಿ. ಎಲ್ಲೈ ಮಾಧುರ್ಯವೇ! ನನ್ನ ಹೃದಯವನ್ನು ತಲಪು.

**- ಅಥರ್ವವೇದ**

ಅನುವ್ರತಃ ಪಿತುಃ ಪುತ್ರೋ ಮಾತ್ರಾ ಭವತು ಸಂಮನಾಃ।
ಜಾಯಾ ಪತ್ಯೇ ಮಧುಮತೀಂ ವಾಚಂ ವದತು ಶಂತಿವಾಮ್॥

ಪುತ್ರನಾದವನು ತಂದೆಯ ವ್ರತವನ್ನು ಪಾಲಿಸುವಂತವನಾಗಲಿ,ಹಾಗೆಯೇ ತಾಯಿಯ ಆಜ್ಞೆ ನಡೆಸುವಂತವನಾಗಲಿ. ಪತ್ನಿಯಾದವಳು ತನ್ನ ಪತಿಯೊಂದಿಗೆ ಶಾಂತಿಯಿಂದ ಕೂಡಿದ ಒಳ್ಳೆಯ (ಮಧುರ) ಮಾತನಾಡುವವಳಾಗಲಿ.

**- ಅಥರ್ವವೇದ**

**ಮಾಭ್ರಾತಾಭಾತರಂ ದ್ವಿಕ್ಷನ್ಮಾ ಸ್ವಸಾರಮುತ ಸ್ವಸಾ**
**ಸಮ್ಯಂಜಃ ಸವ್ರತಾ ಭೂತ್ವಾ ವಾಚಂ ವದತ ಭದ್ರಯಾ॥**

ಸಹೋದರರು ತಮ್ಮ ತಮ್ಮಲ್ಲಿ ದ್ವೇಷಿಸಬಾರದು. ಸಹೋದರಿಯರ ನಡುವೆ ಅಸೂಯೆ ಉಂಟಾಗಬಾರದು. ನೀವೆಲ್ಲರೂ ಏಕಾಭಿಪ್ರಾಮ ಮತ್ತು ಸಮಾನ ವ್ರತಾಚಾರಿಗಳಾಗಿ ಮೃದುವಾದ (ಹಿತವಾದ) ಮಾತುಗಳನ್ನು ಆಡುವಂತಾಗಲಿ.

**- ಅಥರ್ವವೇದ**

**ಸಮಾನೀವ ಆಕೂತಿಃ ಸಮಾನಾ ಹೃದಯಾನಿ ವಃ।**
**ಸಮಾನವಸ್ತುತ ವೋ ಮನೋ ಯಥಾವಃ ಸುಸಹಾಸತಿ॥**

ನಿಮ್ಮೆಲ್ಲರ ಸಂಕಲ್ಪಗಳು ಒಂದೇ ರೀತಿಯಲ್ಲಿರಲಿ. ನಿಮ್ಮ ಹೃದಯಗಳು ಒಂದೇ ತೆರನಲ್ಲಿರಲಿ. ಮನಸ್ಸು ಒಂದೇ ಸ್ಥಿತಿಯಲ್ಲಿರಲಿ. ಇದರಿಂದ ನಿಮ್ಮ ಕೆಲಸಗಳು ಸಂಪೂರ್ಣವಾಗಿ ಸಂಘಟಿತವಾಗಿರುತ್ತವೆ.

**- ಋಗ್ವೇದ**

**ದೃತೇ ದೃಹ ಮಾ ಮಿತ್ರಸ್ಯಮಾ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷಂತಾಮ್**
**ಮಿತ್ರಸ್ಯಾಹಂ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷೇ**
**ಮಿತ್ರಸ್ಯ ಚಕ್ಷುಷಾ ಸಮೀಕ್ಷಾಮಹೇ॥**

ನನ್ನ ದೃಷ್ಟಿಯನ್ನು ದೃಢಗೊಳಿಸಿ,ಎಲ್ಲ ಜೀವಿಗಳು ನನ್ನನ್ನು ಮಿತ್ರನ ದೃಷ್ಟಿಯಿಂದ ನೋಡಲಿ. ನಾನೂ ಸಹ ಎಲ್ಲ ಜೀವಿಗಳನ್ನು ಮಿತ್ರತ್ವ ದೃಷ್ಟಿಯಿಂದಲೇ ನೋಡುವಂತಾಗಲಿ. ನಾವು ಪರಸ್ಪರ ಒಬ್ಬರು ಮತ್ತೊಬ್ಬರನ್ನು ಮಿತ್ರದೃಷ್ಟಿಯಿಂದ ನೋಡುವಂತಾಗಲಿ

**- ಯಜುರ್ವೇದ**

## ಶ್ರೀಪಟ್ಟಾಭಿರಾಮ ಆಲಯ, ವಾಲ್ಮೀಕಿಪುರಂ

ಬಹಳ ಹಿಂದೆ ಒಮ್ಮೆ ಜಾಂಬವಂತನು ಅಯೋಧ್ಯೆಯಲ್ಲಿ ಶ್ರೀರಾಮನನ್ನು ದರ್ಶಿಸಿ ಹಿಂತಿರುಗುವಾಗ ಮಾರ್ಗ ಮಧ್ಯ ಈ ಪ್ರದೇಶಕ್ಕೆ ಬರುವಾಗ ಒಂದು ಹುತ್ತದಿಂದ ಬೆಳಕು ಬರುತ್ತಿರುವುದನ್ನು ಗಮನಿಸಿದ ಹುತ್ತದಲ್ಲಿದ್ದ ಶ್ರೀರಾಮ ಚಂದ್ರನ ಮೂರ್ತಿಯನ್ನು ಹೊರ ತೆಗೆದು ಆಲಯವನ್ನು ನಿಲ್ಲಿಸಿ ಪ್ರತಿಷ್ಠಾಪಿಸಿದನಂತೆ.

ವಾಲ್ಮೀಕಿಪುರದ ಅಗ್ರಭಾಗದಲ್ಲಿ ವಿಶಾಲವಾದ ಪ್ರಾಂಗಣದಲ್ಲಿನ ದೇವಾಲಯದ ಗರ್ಭಗೃಹದಲ್ಲಿ ಶ್ರೀ ರಾಮನು ಸೀತಾದೇವಿ ಹಾಗೂ ತನ್ನ ಸಹೋದರರೊಂದಿಗೆ ಕಾಣಸಿಗುತ್ತಾನೆ. ಬಲಹಸ್ತದಲ್ಲಿ ಗ್ರಾಸಮುದ್ರೆ, ಎಡಗೈಯಲ್ಲಿ ವರದಹಸ್ತ ಕೂಡಿರುವ ಶ್ರೀರಾಮನ ಬಲ ಭಾಗದಲ್ಲಿ ಸೀತಾ ದೇವಿಯಿರುವಳು. ಆಕೆಯ ಬಲಕ್ಕೆ ಚಾಮರ ಧಾರಿ ಭರತನು, ಎಡಕ್ಕೆ ಧನುರ್ಧಾರಿಯಾದ ಲಕ್ಷ್ಮಣನ ಮೂರ್ತಿಗಳಿವೆ. ಆಂಜನೇಯನ ವಿಗ್ರಹ ಪ್ರದಕ್ಷಿಣ ಮಂಟಪ ದಲ್ಲಿರುವುದು ಇಲ್ಲಿನ ವಿಶೇಷವಾಗಿದೆ.

ತಿರುಪತಿಯಿಂದ 100 ಕಿ.ಮೀ. ಮದನಪಲ್ಲಿಯಿಂದ 20 ಕಿ.ಮೀ. ದೂರದಲ್ಲಿ ವಾಲ್ಮೀಕಿಪುರವಿದೆ. ಪದಕವಿತಾ ಪಿತಾಮಹ ಅನ್ನಮಾಚಾರ್ಯನು ಸ್ತುತಿಸಿರುವ ವಾಲ್ಮೀಕಿ ಪುರಂನ ಶ್ರೀಪಟ್ಟಾಭಿರಾಮ ಸ್ವಾಮಿಯನ್ನು ದರ್ಶಿಸುವುದರಿಂದ ಕೋರಿದ ಕೋರಿಕೆಗಳೆಲ್ಲ ನೆರವೇರುತ್ತವೆ.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸ್ವಾಮಿಯವರ ಆರ್ಜಿತ ಸೇವೆಗಳು - ತಿರುಮಲೆ

## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ಸೇವೆ ಸಮಯ | ಟಿಕೆಟ್ಟು ಬೆಲೆ | ಪ್ರವೇಶ |
|---|---|---|---|---|
| | **ನಿತ್ಯ ಸೇವೆ** | | | |
| 1. | ಸುಪ್ರಭಾತ | ಬೆ. 3.00 ಗಂ॥ | 120.00 | 01 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಬೆ. 3.30 ಗಂ॥ | 220.00 | 01 |
| 3. | ಅರ್ಚನೆ (ಮಂಗಳ, ಬುಧ, ಗುರು) | ಬೆ. 4.30 ಗಂ॥ | 220.00 | 01 |
| | **ನಿತ್ಯ ಉತ್ಸವಗಳು** | | | |
| 4. | ಕಲ್ಯಾಣೋತ್ಸವ | ಮ. 12.00 ಗಂ॥ | 1,000.00 | 02 |
| 5. | ಊಂಜಲ್ ಸೇವೆ | ಮ. 2.00 ಗಂ॥ | 500.00 | 01 |
| 6. | ಆರ್ಜಿತ ಬ್ರಹ್ಮೋತ್ಸವ | ಮ. 3.00 ಗಂ॥ | 500.00 | 01 |
| 7. | ಸಹಸ್ರದೀಪಾಲಂಕರಣ ಸೇವೆ | ಸಾ. 5.00 ಗಂ॥ | 500.00 | 01 |
| | **ವಾರದ ಸೇವೆಗಳು** | | | |
| 8. | ಅಷ್ಟದಳ ಪಾದಪದ್ಮಾರಾಧನೆ ಸೇವೆ (ಮಂಗಳವಾರ) | ಬೆ. 9.30 ಗಂ॥ | 1,250.00 | 01 |
| 9. | ತಿರುಪ್ಪಾವಡ ಸೇವೆ (ಗುರುವಾರ) | ಬೆ. 7.00 ಗಂ॥ | 850.00 | 01 |
| 10. | ಅಭಿಷೇಕ ಸೇವೆ (ಶುಕ್ರವಾರ) | ಬೆ. 4.30 ಗಂ॥ | 750.00 | 01 |
| | **ವಾರ್ಷಿಕ ಸೇವೆಗಳು** | | | |
| 11. | ತೆಪ್ಪೋತ್ಸವ (ಫೆಬ್ರವರಿ/ ಮಾರ್ಚ್) | ರಾ. 7.00 ಗಂ॥ | 500.00 | 01 |
| 12. | ವಸಂತೋತ್ಸವ ( ಮಾರ್ಚ್/ ಏಪ್ರಿಲ್) | ಮ. 2.00 ಗಂ॥ | 300.00 | 01 |
| 13. | ಜ್ಯೇಷ್ಠಾಭಿಷೇಕ (ಅಭಿದೇಯಕ ಅಭಿಷೇಕ) (ಜೂನ್) | ಬೆ. 9.00 ಗಂ॥ | 400.00 | 01 |
| 14. | ಪವಿತ್ರೋತ್ಸವಗಳು (ಆಗಸ್ಟ್) | ಬೆ. 9.00 ಗಂ॥ | 2,500.00 | 01 |
| 15. | ಪುಷ್ಪಯಾಗ (ನವೆಂಬರ್) | ಬೆ. 9.00 ಗಂ॥ | 700.00 | 01 |


Toll free : 155257

whatsapp feedback : 9399399399

e-mail :helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಟಿಕ್ಕೆಟ್‌ಗಳನ್ನು ಆನ್‌ಲೈನ್ ನಲ್ಲಿ ಮಾತ್ರವೇ ಬುಕ್ ಮಾಡಿಕೊಳ್ಳಬೇಕು.ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : ttdevasthanams.ap.gov.in ನು ಸಂಪ್ರದಿಸಬೇಕು.

**ಗಮನಿಸಿ :** ಸೇವೆಗಳು ಮತ್ತು ಬೆಲೆಗಳು ಯಾವುದೇ ಸಂದರ್ಭದಲ್ಲಿಯಾದರೂ ಬದಲಾವಣೆಗಳು ಆಗುವ ಸಾಧ್ಯತೆ ಇದೆ.



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಇಂತಹ ಹಿರಿಮೆಯನ್ನುಳ್ಳ ತಿರುವಾಯ್ಮೊಳಿಯು 1102 ಪಾಶುರಗಳಿಂದ ಯುಕ್ತವಾದ ದಿವ್ಯ ಪ್ರಬಂಧ, ಇದೊಂದು ಸಾಹಿತ್ಯ ರತ್ನ. ಇದರಲ್ಲಿ ಒಟ್ಟು ತಿರುವೇಂಗಡವನ್ನು ಕುರಿತು ಹಾಡಲ್ಪಟ್ಟ ಪಾಶುರಗಳು 46. ಇವುಗಳಲ್ಲೂ ಬಿಡಿ ಬಿಡಿಯಾಗಿ ಅಲ್ಲಿ ಇಲ್ಲಿ ಬಂದಿರುವ ಪಾಶುರಗಳು 13 ಮತ್ತು ಅನುಸ್ಯೂತವಾಗಿ ಬಂದಿರುವುದು ಮೂರು ದಶಕಗಳಲ್ಲಿ ಎಂದರೆ ಮೂರು ಹತ್ತು ಹತ್ತು ಪಾಶುರಗಳು ಮತ್ತು ಈ ಹತ್ತು ಪಾಶುರಗಳ ಮಂಗಳಶ್ಲೋಕಗಳಾದ ಮೂರು ಪಾಶುರಗಳಲ್ಲಿ ಈ ದಶಕಗಳಲ್ಲಿ ಕೇವಲ ಒಂದು ದಶಕದಲ್ಲಿ ಬರುವ 'ಆಪ್ಪನ್' ಎನ್ನುವ ಪದ ಪ್ರಯೋಗದಿಂದ ಆ ದಶಕದ ಪಾಶುರಗಳು ವೇಂಗಡವನ್ನು ಕುರಿತವು ಎಂದು ವಿಚಾರ ಮಾಡುವವರಿದ್ದಾರೆ. ಇದನ್ನು ಈ ಹಿಂದೆಯೇ ವಿಶದೀಕರಿಸಲಾಗಿದೆ.

ನಮ್ಮಾಳ್ವಾರ್ ಅವರ ಶೈಲಿಯೇ ಈ ಮೇಲೆ ನಾವು ಕಂಡುಕೊಂಡ ಇತರ ಆಳ್ವಾರ್‌ಗಳ ಶೈಲಿಗಿಂತ ಭಿನ್ನವಾದದ್ದು. ಇದರಲ್ಲಿ ಭಕ್ತಿ ಭಾವ ತುಂಬಿದೆ. ಅಲ್ಲಿ ಕಂಡ ಪ್ರಕೃತಿ ವರ್ಣನೆ ಇಲ್ಲಿ ಸಿಕ್ಕುವುದಿಲ್ಲ. ಇದು ಭಕ್ತಿ ಸಾಹಿತ್ಯ, ಪಾರಮಾರ್ಥಿ ಘಟ್ಟದಲ್ಲಿ ಪರಮಾತ್ಮ ಚಿಂತನೆ ಎನ್ನಬಹುದು. ಈ ಪಾಶುರಗಳ ಭಾವವನ್ನು ಆಸ್ವಾದಿಸೋಣ. ಮೊದಲು ಬಿಡಿ ಪದ್ಯಗಳಲ್ಲಿ ಬರುವ ವೇಂಗಡ ವಿಷಯಗಳ ಸೊಗಸನ್ನು ಅನುಭವಿಸಿ ನಂತರ ದಶಕಗಳ ಕಡೆಗೆ ಗಮನ ಹರಿಸೋಣ.

ಈ ಹದಿಮೂರು ಬಿಡಿ ಪದ್ಯಗಳಲ್ಲಿ ವೇಂಗಡವೆಂದು 5 ಪಾಶುರಗಳಲ್ಲೂ ತಿರುವೇಂಗಡವೆಂದು 2 ಪಾಶುರಗಳಲ್ಲೂ ತಣ್ ತಿರುವೇಂಗಡಂ ಎಂಬುದಾಗಿ 1 ರಲ್ಲೂ ಗಿರಿಯನ್ನು ಸಂಬೋಧಿಸಿದ್ದಾರೆ. ಮಿಕ್ಕ 5 ಪಾಶುರಗಳಲ್ಲಿ ವಡತಿರುವೇಂಗಡತ್ತಂದ್ಯೆ, ವೇಂಗಡತ್ತಣ್ಣಲೇ, ವೇಂಗಡವಾಣನ್ ಎಂಬುದಾಗಿ ಬೆಟ್ಟದ ಮೇಲಿನ ದೇವರನ್ನು ಕರೆದಿದ್ದಾರೆ. ಒಂದು ಪಾಶುರದಲ್ಲಿ ಮಲೈಮೇಲ್‌ನಿನ್ರಾನ್ ಎಂದು ದೇವರಿಗೆ ಹೇಳಿದ್ದಾರೆ.

ಭೂಲೋಕದವರಿಗೂ, ದೇವತೆಗಳಿಗೂ ನೇತ್ರಪ್ರಾಯನು. ಶೀತಳವಾದ ವೇಂಗಡವನ್ನೇ ವಾಸವಾಗಿ ಉಳ್ಳವನು,ಈ ನಿತ್ಯಸೂರಿಗಳಿಂದ ಸಂಸೇವ್ಯನಾದ ಪರಮಾತ್ಮನು. ನನ್ನ ಸ್ವಾಮಿಯೇ, ಶೀತಳವಾದ ತಿರುವೇಂಗಡದಲ್ಲಿ ನಿಂತಿರುವವನೇ, ಲಂಕೆಯನ್ನು ನಾಶಮಾಡಿದವನೇ, ಸಾಲ

ವೃಕ್ಷಗಳು ಏಳನ್ನೂ ಬುಡದಿಂದಲೇ ಉರುಳುವಂತೆ ಒಂದೇ ಬಾಣದಿಂದ ಭೇದಿಸಿದ ಘನ ಧನುರ್ಬಾಣಗಳನ್ನು ಹೊಂದಿದಂತಹವನೆ. ಹೂಗೊಂಚಲುಗಳಿಂದ ಅಲಂಕಾರಗೊಂಡ ದಿವ್ಯ ತುಳಸೀ ಮಾಲಾಧರನಾದ ಅಮೃತಸ್ವರೂಪನೇ, ನಿನ್ನನ್ನು ನನ್ನೊಳಗೆ ಸೇರಿಸಿರುವ ನಿತ್ಯ ಯೌವನಶಾಲಿಯೇ, ನಿತ್ಯಸೂರಿಗಳಿಗಧಿಪತಿಯೆ, ಇನ್ನು ನೀನು ನನ್ನನ್ನು ಅಗಲಿ ಬೇರೆಲ್ಲಿಗೆ ಹೋಗುವೆ? ಮೂರು ಕಾಲಗಳಲ್ಲೂ ತಾಯಿ, ತಂದೆ, ಆತ್ಮ ಎಲ್ಲವೂ ನೀನೇ ಆಗಿರುವ ವಿಸ್ತಾರವೂ, ಅನಾದಿಯೂ ಆದ ಕೀರ್ತಿಯನ್ನುಳ್ಳ ಮೂಜಗಕ್ಕೂ ಒಡೆಯನೆ, ಶ್ರೇಷ್ಠನೆ, ಶೀತಳವಾದ ವೇಂಗಡವನ್ನು ವಾಸಸ್ಥಾನವನ್ನಾಗಿ ಹೊಂದಿರುವವನೇ, ನರುಗುಂಪಿನ ದಿವ್ಯ ತುಳಸೀಮಾಲಾಧರನೇ ನಿನ್ನನ್ನು ನಾನು ಆಶ್ರಯಿಸಿರುವೆನು. ಇನ್ನು ನಾನು ಬಿಡುತ್ತೇನೆಯೇ? ಪದ್ಮನಾಭನು ಇತರರ ಉಚ್ಛ್ರಾಯವು ನಶಿಸುವಂತೆ ಮೇಲಕ್ಕೆ ಪ್ರವರ್ಧಮಾನವಾದಂತಹ ಶಕ್ತಿಯುಳ್ಳವನು. ನನ್ನಲ್ಲಿ ಅತಿ ಪ್ರೀತಿ ಉಳ್ಳ ಸ್ವಾಮಿಯು ನನ್ನನ್ನು ತನ್ನ ದಾಸನನ್ನಾಗಿ ಮಾಡಿಕೊಂಡು ನನಗೆ ತನ್ನನ್ನೇ ತಂದು ಕೊಟ್ಟಂತಹ ಕಲ್ಪವೃಕ್ಷವು. ನನ್ನ ಪಾಲಿಗೆ ಅಮೃತವು. ನೀಲ ಮುಗಿಲಿನಂತಿರುವ ದಿವ್ಯವಾದ ವೇಂಗಡವನ್ನು ವಾಸಸ್ಥಾನವನ್ನಾಗಿ ಉಳ್ಳವನು. ನಿತ್ಯ ಸೂರಿಗಳ ನಿರ್ವಾಹಕನು. ಇಂತಹ ದಾಮೋದರನು ನನಗೆ ತಂದೆಯಾದ ಸ್ವಾಮಿಯು ಮೇಲಿನಿಂದ ಉರುಳುತ್ತಿರುವ ಜಲಧಾರೆಯಿಂದ ಕೂಡಿದ, ಮನೋಹರವಾದ ತಂಪಾದ ಉತ್ತರ ವೇಂಗಡದಲ್ಲಿರುವ ನನ್ನ ಸ್ವಾಮಿಯ ನಾಮಗಳನ್ನು ವಿಶೇಷವಾಗಿ ಹೇಳುತ್ತ, ಆ ಉನ್ಮಾದವನ್ನು ಕಂಡು ಬೇರೆಯವರು ಇವನು ಹುಚ್ಚನೆಂದು ನಿರ್ದೇಶ ಮಾಡುವಂತೆ ಅನೇಕ ಗ್ರಾಮ,ನಗರಗಳನ್ನು ಪ್ರವೇಶಿಸುತ್ತಾ ಮನುಷ್ಯ ಸಂಚಾರವಿಲ್ಲದ ಜಾಗಗಳಲ್ಲಿ ಮನುಷ್ಯರು ನಗುವಂತೆ ಪರವಶನಾಗಿ ವರ್ತಿಸುವಂತಹ. ಪರಮಾತ್ಮನಲ್ಲಿ ಉತ್ಕಟ ಪ್ರೇಮವುಂಟಾಗಿರಲು ಸಂಭ್ರಮದಿಂದ ನರ್ತಿಸುವರು. ಇಂತಹ ಭಾವುಕರನ್ನು ನಿತ್ಯಸೂರಿಗಳು ಸಂಭಾವಿಸುವರು ಈ ಹಿತೋಕ್ತಿಯನ್ನು ಹೇಳಿದರೆ ವಿರುದ್ಧದಂತೆ ನಿಮಗೆ ಕಂಡು ಬರುತ್ತದೆಯೇನೋ, ಆದರೂ ನಾನು ಹೇಳಿಬಿಡುತ್ತೇನೆ.

ನನ್ನ ಮನಸ್ಸಿಗೆ ಬಂದಿದೆ, ಕೇಳುವುದಾದರೆ ಕೇಳಿ, ಭ್ರಮರಗಳು ಮಧುಪಾನದಿಂದ ಮತ್ತವಾಗಿ ಗಾನ ಮಾಡುತ್ತಿರಲು, ಅದರ ಝೇಂಕಾರದಲ್ಲೇ ತುಂಬಿಹೋಗಿರುವ ತಿರುವೇಂಗಡದಲ್ಲಿರುವ ನನಗೆ ಆನೆಯಂತೆ ಪ್ರಿಯನಾದ ಸ್ತೋತ್ರ ಪಾತ್ರನಾದ ಸ್ವಾಮಿಯು ತಾನು ಪ್ರಾಶಸ್ತ್ಯವನ್ನು ಹೊಂದಿರುವ ಮತ್ತು ಅಧಿಕಾರವನ್ನು ಹೊಂದಿರುವ ನನ್ನ ನಾಲಿಗೆಯಲ್ಲಿ ಉದ್ಭವಿಸುವ ಆತನನ್ನು ಕುರಿತ ಕವಿತ್ವವನ್ನು ನಾನು ಮತ್ತೊಬ್ಬರಿಗೆ ಹೇಗೆ ತಾನೇ ಕೊಡಬಲ್ಲೆನು, ಕೊಡಲಾರೆನು ವರ್ಷವು ಅವಿಚ್ಛಿನ್ನವಾಗಿ ಬಿದ್ದು ತಂಪುಗೊಂಡ ರಮಣೀಯ ಪರ್ವತ ವೇಂಗಡದಲ್ಲಿ ಸರ್ವರಿಂದಲೂ ಸಂಸೇವ್ಯನಾಗಿ ನೆಲಸಿರುವ ಸ್ವಾಮಿಯನ್ನು ಕುರಿತು ಜಲ ಸಮೃದ್ಧಿಯಿಂದಲೂ ನಿಬಿಡವಾದ ಉದ್ಯಾನಗಳಿಂದಲೂ ರಂಜಿಸುವ ಕುರುಗೂರಿನ 'ಕಾರಿ' ಎನ್ನುವವರ ಪುತ್ರರಾದ ಶಡಗೋಪರು ಹೇಳಿದ ಸಾವಿರ ಸಂಖ್ಯೆಯ ಪ್ರಬಂಧದಲ್ಲಿನ ಈ ದಶಕದ ಮೂಲಕವಾಗಿ, ಮಧು ಪ್ರವಾಹವು ಅವಿಚ್ಛಿನ್ನವಾಗಿ ಪ್ರವಹಿಸುತ್ತಿರುವ ಕಮಲ ಪುಷ್ಪದಲ್ಲಿ ನೆಲಸಿರುವ ಲೋಕಮಾತೆ ಲಕ್ಷ್ಮೀದೇವಿಯು, ಸಕಲ ಪಾಪಗಳನ್ನೂ ತನ್ನ ಕಟಾಕ್ಷವೀಕ್ಷಣ ಮಾತ್ರದಿಂದಲೇ ನಾಶಪಡಿಸಿ ನಮ್ಮನ್ನು ರಕ್ಷಿಸುವಂತಾಗಲಿ ವೃಕ್ಷಷಂಡಗಳಿಂದ ಕಂಗೊಳಿಸುವ ಆರಾಮಗಳ ವೇಂಗಡಕ್ಕೆ ಸ್ವಾಮಿ ಯಾದವನನ್ನು, ಕೋಟೆ ಕೂತ್ತಳಗಳಿಂದ ಆವರಿಸಿದ ತೆನ್‌ಕುರುಗೂರ್ ನಿವಾಸಿ ಶಡಗೋಪರು ಸ್ತುತಿಸಿದ ರಮಣೀಯವಾದ ಛಂದೋಬಂಧಗಳಿಂದ ಮೆರೆಯುವ ಸಹಸ್ರ ಪದ್ಯಗಳಲ್ಲಿ ಈ ಹತ್ತನ್ನು ಬಲ್ಲವರು, ದಿವ್ಯ ಶೀಲ ವೃತ್ತಾದಿ ರಮ್ಯತೆಯುಳ್ಳ ಬಾನವರ (ದೇವತೆಗಳ) ಭೋಗವನ್ನು ಅನುಭವಿಸುವವರಾಗುತ್ತಾರೆ.

ಪರಮ ಪದದಲ್ಲಿದ್ದೀಯೆ, ಬೆಟ್ಟದ ಮೇಲೆ ನೆಲಸಿರುವೆ, ಸಮುದ್ರದಲ್ಲಿ ಶಯನಿಸಿದ್ದೀಯೆ, ಪ್ರಪಂಚದ ವಸ್ತುಗಳಲೆಲ್ಲಾ ಅಂತರ್ಯಾಮಿಯಾಗಿ ಅಡಗಿಕೊಂಡಿದ್ದೀಯೆ, ಹೀಗೆ ಅಸಂಖ್ಯವಾಗಿ ಇರತಕ್ಕ ಸ್ವಭಾವವುಳ್ಳ ಬಹಿರಂಗಗಳಲ್ಲಿ ನೆಲಸಿರುವ ನೀನು ನನ್ನ ಪ್ರಾಣಾಶ್ರಯವಾದ ಮನಸ್ಸಿನ ಒಳಗೂ ಸಂಚಾರ ಮಾಡುತ್ತಾ ನಿನ್ನ ರೂಪವನ್ನು ಮಾತ್ರ ವ್ಯಕ್ತಗೊಳಿಸದೇ ಅವ್ಯಕ್ತನಾಗಿಯೇ ಉಳಿದಿರುವೆ. ರೇಖೆಗಳಿಂದ ಕಂಗೊಳಿಸುವ ಕೈಬಳೆಗಳನ್ನುಳ್ಳ ನನ್ನ ಸಖಿಯರೇ! ನಮ್ಮ ಶತ್ರುಪ್ರಾಯರಾದ ಜನರ ಮುಂದೆ ಲಜ್ಜೆಯಿಂದ ನಿಮಗೆ ನಾನು ಹೇಳತಕ್ಕ ಮಾತು ಒಂದನ್ನು ಹೇಗೆ ವ್ಯಕ್ತಪಡಿಸಲಿ? ಅದಕ್ಕಾಗಿ ಹಿಂದು ಮುಂದು ನೋಡುತ್ತಿದ್ದೇನೆ. ಅದಕ್ಕೆ ತಕ್ಕ ರೀತಿಯ ಅಭಿವ್ಯಕ್ತತೆಯು ಸಿಕ್ಕದೇ ಹೋಗಲು ನನಗೆ ತಿಳಿದಂತೆ ವ್ಯಕ್ತಪಡಿಸಿಬಿಡುತ್ತೇನೆ. ಹೇಗಾದರೂ ತಿಳಿದುಕೊಳ್ಳಿರಿ.

**- ಮುಂದುವರೆಯುತ್ತದೆ.**

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

" ಆರಭ್ಯ ಶೈಶವ ಮನಾರತಮಚ್ಯುತಾಂಘ್ರಿ
ಭಕ್ತ್ಯಾ ನಿರಸ್ತ ವಿಷಯಾಂತರ ಭಾವಬಂಧೇ"

(ಬಾಲ್ಯದಿಂದ ಮೊದಲುಗೊಂಡು ಆ ಅಚ್ಯುತನ ಅನವರತ ಚರಣ ಭಕ್ತಿಯಿಂದ ವಿಷಯಾಂತರ ಸುಖಗಳ ಮೇಲೆ ಯಾವುದೇ ಹೃದಯಾಸಕ್ತಿಯನ್ನಿಡದೇ...)

ಎಂದು ಅವರ ಪ್ರಾಯಂ ತೊಡಂಗಿ ಎನ್ನುಮಾದ ಲಿತ್ತೆಂಳುಂಥವೆನ್ ತಡ ಮುಳೈಕಳ್ (ತಾರುಣ್ಯವನ್ನು ಹೊಂದಿ ಸದಾಕಾಲ ಆಶೆಯಿಂದ ಬೆಳೆಯುತ್ತಿರುವ ನನ್ನ ವಿಶಾಲ ವಕ್ಷೋಜೆ) ಎಂದು ಹೇಳಿರಲು ಭಾಷ್ಯಕಾರರು ವಿನಂತಿಸಿ ಶ್ರೀಗೋದಾದೇವಿ ದಿವ್ಯಾವತಾರ ಕಾಲವಾದ ಮಿಥುನ ಶ್ರೀ ಪೂರ್ವಫಲ್ಗುಣಿ ನಕ್ಷತ್ರ ರೂಪ ಶ್ರೇಷ್ಠ ವೇಳೆಯಲ್ಲಿ ಶ್ರೀ ಗೋದಾದೇವಿಯನ್ನು ಶ್ರೀ ಗೋವಿಂದರಾಜ ಸ್ವಾಮಿಯೊಡನೆ ಕೂಡಿಸಿ ತಿರುಮಲೆಯ ತಪ್ಪಲಿನ 'ಅಡಿಪ್ಪುಳಿ' (ಅಲಿಪಿರಿ) ಮಂಟಪದಲ್ಲಿ ಸ್ವಯಂವ್ಯಕ್ತವಾದ ಶ್ರೀವೇಂಕಟಾಚಲಪತಿ ಪಾದಾರವಿಂದ ಪಾದುಕೆಗಳನ್ನು ಮೊದಲು ಮೆರವಣಿಗೆ ಮಾಡಿಸಿ, ಶ್ರೀವೇಂಕಟೇಶ್ವರ ಸ್ವಾಮಿ ಬಹುದೂರದಿಂದ ಶ್ರೀವೈಷ್ಣವರಿಗೆ ಪ್ರತ್ಯಕ್ಷ ಕಾಣಿಸಿ ದೂರದೇಶ ನಿವಾಸಿಗಳ ಕೈಯಿಂದಲೇ ಗೋವಿಂದನ್ ಎನ್ಬದೊನೆ ಪೇರುಳಿಂದಿವಿತ್ತಗನ್ ವೇಂಗಡವಾಣನ್ (ಗೋವಿಂದನು ಒಂದು ಹೆಸರನ್ನು ಬರೆದು ವಿದ್ವಾಂಸನಾದ ವೇಂಕಟೇಶ್ವರನು) ಎಂದು ಮಾಧವನ್ ಗೋವಿಂದನ್ ವೇಂಗಡವಾಣನ್ (ಮಾಧವನು, ಗೋವಿಂದನು, ವೇಂಗಡ ಪ್ರಭುವು) ಎನಲು, "ಗೋವಿಂದಾಯ ನಮೋ ನಿತ್ಯಂ ಶ್ರೀನಿವಾಸಾಯ ಮಂಗಳಂ" (ಗೋವಿಂದನಿಗೆ ಪ್ರತಿನಿತ್ಯದ ವಂದನೆಗಳು, ಶ್ರೀನಿವಾಸನಾದ ನಿನಗೆ ವಂದನೆಗಳು) ಎಂದು ಪುರಾಣ ಪುರುಷರಾದ ಸೂತಮುನಿಗಳು ಅನುಸಂಧಾನ ಮಾಡಿರಲು, ಆತನ ತಂದೆಯಾದ ಜನಕನಾದ ನಮ್ಮಾಳ್ವಾರರು ಈ ಪುರವು ವೇಂಕಟಗಿರಿಗೆ ಅಭೇದ್ಯವೆಂದು ತೋರಲು, ಹಾಗೆಯೇ ನುಡಿದು, ಶ್ರೀವೇಂಕಟಾಚಲ ಪತಿಗೆ ಅಪರಾವತಾರವಾದ ಶ್ರೀಗೋವಿಂದ ಸ್ವಾಮಿ



ಯೊಂದಿಗೆ 'ಕೂಡಲ್‌ವಳ್ಳೈಚ್ಚು' (ವಿಚಿತ್ರ ಗತಿಯಲ್ಲಿ ರೇಖೆಗಳನ್ನು ಗೀಚಿ ಪ್ರಶ್ನೆ ಹಾಕುವ ಸಂಪ್ರದಾಯ) ಆಟ ಆಡುವಂತೆ ಸಂಕಲ್ಪಿಸಿದ ಆ ಕಾಲದಲ್ಲಿ ಮಲ್ಲೈಕುನಿಯನಿನ್ನಾರ್ ಆರೈಯರ್ ಎಂಬ ಪ್ರಬಂಧ ಗಾಯಕರು ಶ್ರೀಭಾಷ್ಯಕಾರರು ಅನುಮತಿಯನ್ನಿತ್ತು 'ಕೂಡಲ್ ವಳ್ಳೈಚ್ಚು' ಅನ್ನು ಮಾಡಿದರು. 'ಕೂಡಲ್‌ವಳ್ಳೈಕ್ಕೆ' (ವಳ್ಳೈಚ್ಚು)ಎಂಬುವುದು ದ್ರಾವಿಡ ಶಾಸ್ತ್ರದಲ್ಲಿನ ಒಂದು ದೂರದೇಶದಲ್ಲಿರುವ ಶಕುನವನ್ನು ನೋಡುವುದಾಗಿದೆ. ಇದು ಉಪದೇಶದಿಂದ ತಿಳಿದು ಬಂದದ್ದಾಗಿದೆ.

ಒಂದು ವಿಶಾಲವಾದ ಪಾತ್ರೆಯಲ್ಲಿ (ತಟ್ಟೆಯಲ್ಲಿ) ಎಂಟುಮಂದಿ ಪುರುಷರಿಗೆ ಸಾಕಾಗುವಷ್ಟು ಅಕ್ಷತೆಯನ್ನಿಟ್ಟುಕೊಂಡ ಇವರನ್ನು, ಅಂದರೆ ಶಾಲಿತಂಡುಲವನ್ನು (ಉತ್ತಮವಾದ ಅಕ್ಕಿ) ಸುರಿದು, ಅದರ ಮೇಲೆ ಒಂದನ್ನೊಂದು ಕಲಿಯದಂತೆ ಮಂಡಲಾಕಾರದಲ್ಲಿ (ದುಂಡಾಗಿ) ಎಂಟು ಗೆರೆಗಳನ್ನು ಬರೆದು (ರೇಖೆಗಳ ಮಧ್ಯೆ) ಏಳು ವೃತ್ತಗಳನ್ನು ಹಾಕಿ ಎಲ್ಲಾ ವೃತ್ತಗಳಿಗೂ ಸೊನ್ನೆ ಸೊನ್ನೆಯಾಕಾರ ಬರೆದು, ಈ ಸೊನ್ನೆಗಳಲ್ಲಿ ಎರೆಡೆರಡು (ಜೊತೆ ಜೊತೆಯಾಗಿ) ತಾಗಿಸಿ (ತಟ್ಟುವಂತೆ) ಹಾಕಿದಾನಂತರ ಒಂದು ಸೊನ್ನೆ ಉಳಿದರೆ ಅದು ಶುಭ ಶಕುನವಾದುದಲ್ಲವೆಂದೂ, ಮತ್ತೆ ಒಂದು ವೃತ್ತದಲ್ಲಿ ಸೊನ್ನೆಗಳನ್ನು ಹಿಂದೆಯೇ ಎರಡೆರಡಾಗಿ ಜೋಡಿಸಿ ಹಾಕುತ್ತಾ, ನಂತರ ಎರಡು ಉಳಿದರೆ ಶುಭ ಶಕುನವೆಂದು ನಿಶ್ಚಯಿಸಿ ಗೋದಾದೇವಿಯನ್ನು 'ತಿರುತ್ತಾಯ್ ಶಮ್ಬಾತ್ತೆ' ಎಂಬ ತಿರುಮೊಳಿಯನ್ನು (ದಶಕ ಗೀತೆಯನ್ನು) ಅನುಸಂಧಾನ ಮಾಡಿ, ಸ್ವಯಂವ್ಯಕ್ತವಾದ ಶ್ರೀವೇಂಕಟಾಚಲಪತಿ ಶ್ರೀಪಾದ ಸನ್ನಿಧಿಯನ್ನು ಶ್ರೀಗೋವಿಂದರಾಜು ಸ್ವಾಮಿಯೊಡನೆ ಸೇರಿಸಿ ವಿಜಯ ಮಾಡಿ ಆರತಿ ಬೆಳಗಿಸಿ ಕಾಲೋಚಿತ ಉಪಚಾರಗಳನ್ನು ಮಾಡಿ 'ಕೂಡಲ್ ವಳ್ಳೈಕ್ಕೈ' ಜಪಿಸತಕ್ಕದ್ದು. ಇದು ಒಂದು ನೇಮವು. ಇದ ನ್ನಾಚರಿಸುವ ವಿಧಾನಗಳು ಸಹ ಇವೆಯೆಂಬುದು ಸಿದ್ಧ.

ಹರಿದ್ರಾಚೂರ್ಣ ಸಂಸ್ಕಾರ ಮಾಚರೇತ್ ಬ್ರಹ್ಮಾವಿತ್ ಪಿತುಃ
ಕಾಲೇ ತು ಚರಮೇ ಪುತ್ರ ಸ್ತುತಿರ್ಗೇಯಾಚ ವೈಷ್ಣವಃ

ಹರಿದ್ರಾಚೂರ್ಣ ರಂಗಾನಾಂ ಗುರೂಣಾಂ ಚ ಮಹಾತ್ಮನಾಂ
ಕಾಲೇನ್ತಿಮೇ ಪರಿಷ್ಕಾರಂ ಕುರ್ಯಾನ್ಮಂತ್ರ ಪವಿತ್ರಿತೈಃ

ಪೂರ್ಣ ಚೂರ್ಣಾಭಿಷೇಕಂ ಚ ಬ್ರಹ್ಮಾ ಮೇಧಾಕ್ರಿಯಾಂ ಚರೇತ್
ಅವಿಲಂಬೇನ ಕಾಲೇನ ತುಷ್ಟೇನ ಮನಸಾ ಪುನಃ"

(ತಂದೆಯು ಚರಮಕಾಲದಲ್ಲಿ (ಪರಮ ಪದದಲ್ಲಿದ್ದಾಗ) ಬ್ರಹ್ಮವೇದಿಯಾದ ಮಗನು ಹರಿದ್ರಾಚೂರ್ಣ ಸಂಸ್ಕಾರವನ್ನು (ಶ್ರೀಚೂರ್ಣ ಪರಿಪಾಲನೆಯನ್ನು) ಮಾಡತಕ್ಕದ್ದು ವೈಷ್ಣವರು ಸ್ತೋತ್ರಗಾನವನ್ನು ಮಾಡತಕ್ಕದ್ದು. ಚರಮಕಾಲದಲ್ಲಿ ಮಹಾತ್ಮರಿಗೂ, ಗುರುಗಳಿಗೂ ಮಂತ್ರೋಕ್ತವಾದ ಹರಿದ್ರಾಚೂರ್ಣದಿಂದ ಪರಿಷ್ಕಾರವನ್ನು ಮಾಡತಕ್ಕದ್ದು. ಕಾಲವಿಳಂಬವಿಲ್ಲದೆ ಸಂತುಷ್ಟವಾದ ಮನಸ್ಸಿನಿಂದ ಪುತ್ರನು ಮೊದಲು ಚೂರ್ಣಾಭಿಷೇಕವನ್ನು ಮಾಡಿ ಬ್ರಹ್ಮಮೇಧ ಕ್ರಿಯೆಯನ್ನು (ಚರಮ ಸಂಸ್ಕಾರ ವಿಶೇಷವನ್ನು) ಅನುಷ್ಠಾನ ಮಾಡತಕ್ಕದ್ದು.

(ಮುಂದುವರೆಯುತ್ತದೆ)

### ಜನವರಿ ತಿಂಗಳ ರಸಪ್ರಶ್ನೆ ಉತ್ತರಗಳು

01. ಆಧ್ಯಾತ್ಮಿಕ ಜ್ಞಾನ ಮತ್ತು ಭಕ್ತಿ
02. ಪೊಂಗಲ್
03. ತಿರುಪ್ಪಾವೈ
04. ಕಹಿ,ಸಿಹಿ,ಒಗರು, ಹುಳಿ,ಉಪ್ಪು,ಖಾರ
05. ರಥಸಪ್ತಮಿ
06. ನಾಲ್ಕು
07. ಉತ್ತರಾಯಣ
08. ಪರಬ್ರಹ್ಮ
09. ಮಧ್ವವಿಜಯ
10. ನಂಬಿಳ್ಳೈ
11. ಓಡ್ರ ರಾಜ
12. ಶ್ರೀಮನ್ನಾರಾಯಣನು
13. ಆಧ್ಯಾತ್ಮಿಕ
14. ದಡ್ಡ
15. ಗಾಂಧರ್ವ ವಿವಾಹ

**ಕಳೆದ ಸಂಚಿಕೆಯಿಂದ**

ಭೂಮಿಯ ಮೇಲೆ ಶ್ರೀನಿವಾಸನು ಇಲ್ಲದ ಕಾರಣ, ಮಾನವರು ದುಷ್ಕೃತ್ಯಗಳನ್ನು ಮಾಡುತ್ತಿದ್ದಾರೆ. ಅವರು ಕಲಿ ಮಾಯೆಗೆ ಅಧೀನರಾಗಿದ್ದಾರೆ. ಸತ್ಕರ್ಮಗಳಿಂದ ದೂರವಾಗಿದ್ದಾರೆ. ಭಗವಂತ ಮತ್ತೆ ಬರದಿದ್ದರೆ, ಯಮನು ಭೂವಾಸಿಗಳನ್ನು ನರಕಕ್ಕೆ ಎಸೆಯುತ್ತಾನೆ. ಆದ್ದರಿಂದ ಶ್ರೀ ಹರಿಯನ್ನು ಶೇಷ ಪರ್ವತಕ್ಕೆ ಮರಳಿ ತರುವ ಮಾರ್ಗವನ್ನು ಹೇಗಾದರೂ ಯೋಚಿಸು?ಎನ್ನುತ್ತಿದ್ದಂತೆ ನಾರದನು ಬ್ರಹ್ಮಪಾದಗಳಿಗೆ ನಮಸ್ಕರಿಸಿದನು. ನಂತರ ಅವನು ಗಂಗಾ ತೀರದಲ್ಲಿ ಯಜ್ಞವನ್ನು ಮಾಡುತ್ತಿದ್ದ ಕಶ್ಯಪಾದರ ಬಳಿಗೆ ಹೋದನು. ಯಜ್ಞವಾಟಿಕೆಗೆ ಬಂದಾಗ ವೀಣೆಯನ್ನು ನುಡಿಸುತ್ತಾ ನಾರಾಯಣನನ್ನು ಸ್ಮರಿಸಿಕೊಂಡು ಯಜ್ಞವಾಟಿಕೆಗೆ ಬಂದ ನಾರದನನ್ನು ಕಶ್ಯಪಾದನು ವಿಶೇಷ ಗೌರವದಿಂದ ಸನ್ಮಾನಿಸಿದನು. ಆ ಸಂದರ್ಭದಲ್ಲಿ ನಾರದನು ಅಮಾಯಕನಂತೆ ಋಷಿಗಳನ್ನು ನೋಡಿ.

"ಮಹಾತ್ಮರೇ! ನೀವು ಲೋಕ ಕಲ್ಯಾಣಕ್ಕಾಗಿ ಅನೇಕ ಯಜ್ಞಗಳನ್ನು ಮಾಡುತ್ತಿದ್ದೀರಿ. ಈ ಯಜ್ಞಗಳ ಫಲವನ್ನು ನೀವು ಯಾರಿಗೆ ಅರ್ಪಿಸುತ್ತಿದ್ದೀರಿ ಹೇಳಿ" ಎಂದು ಅವರನ್ನು ಕೋರಿದನು. ಈ ಹಠಾತ್ ಪ್ರಶ್ನೆಗೆ ಋಷಿಗಳು ಕಂಗಾಲಾದರು.



ನಂತರ ಅವನು ಭೃಗು ಮಹರ್ಷಿಯೊಂದಿಗೆ ಯಜ್ಞದ ಫಲದ ಕುರಿತು ಸುದೀರ್ಘವಾಗಿ ಚರ್ಚಿಸಿದನು. ಆದರೆ, ಮಹರ್ಷಿಯು ಉತ್ತರಿಸಲು ಸಾಧ್ಯವಾಗದಿದ್ದಾಗ, ನಾರದನು ತನ್ನ ವೀಣೆಯಲ್ಲಿ ಅಷ್ಟಾಕ್ಷರಿ ಮಂತ್ರವನ್ನು ಜಪಿಸುತ್ತಾ "ಓ ಪ್ರಜಾಪತಿಗಳೇ! ನೀವು ಸತ್ಕರ್ಮಗಳನ್ನು ಮಾಡಿ,ಎಲ್ಲಾ ಲೋಕಗಳಲ್ಲಿ ಪ್ರಜಾಭಿವೃದ್ಧಿ ಮಾಡಿರುವಿರಿ. ಆದರಿಂದ, ಒಳ್ಳೆಯದೇ ಆಗಿದೆ. ಮೋಕ್ಷಪ್ರದನು ಯಾರು ಎಂದು ನೀವು ಭಾವಿಸಿರುವಿರಿ. ಬ್ರಹ್ಮನೋ?ಪದ್ಮಾಕ್ಷನೋ? ಅಥವಾ ಪರಮ ಶಿವನೋ? ಇವರಲ್ಲಿ ಮುಕ್ತಿ ಪ್ರದನಾದವನಿಗೆ ಯಜ್ಞ ಫಲವನ್ನು ಅರ್ಪಿಸಿ ಸಂತೃಪ್ತರಾಗಿರಿ" ಎಂದು ಹೇಳಿ ಅಲ್ಲಿಂದ ನಿಷ್ಕ್ರಮಿಸಿ, ತ್ರಿಲೋಕ ಸಂಚಾರಕ್ಕೆ ಹೊರಟನು. ಬ್ರಹ್ಮದೇವನು ಕೂಡಾ ಶೇಷಾದ್ರಿಯಲ್ಲಿ ಒಂದು ಹುತ್ತ ಮತ್ತು ಎರಡು ತಿಂತ್ರಿಣಿ ಮರಗಳನ್ನು ಸೃಷ್ಟಿಸಿದನು.

ನಾರದ ಋಷಿಗಳ ಮಾತುಗಳನ್ನು ಕೇಳಿ, ಋಷಿಗಳು ಏನು ಮಾಡಬೇಕು, ಹೇಗೆ ಮಾಡಬೇಕೆಂದು ತಮ್ಮೊಳಗೆ ಚರ್ಚಿಸಿದರು. ಮೂವರು ದೇವತೆಗಳಲ್ಲಿ ಯಾರು ಮೋಕ್ಷಪ್ರದರು ಯಾರೆಂದು ನಿರ್ಧರಿಸಲು ಸಾಧ್ಯವೇ ಎಂಬ ಗೊಂದಲದಲ್ಲಿದ್ದರು. ಕೊನೆಗೆ ಭೃಗುವೇ ಆ ಪರೀಕ್ಷೆಯನ್ನು ಮಾಡಬಲ್ಲನೆಂದು ಸರ್ವಾನುಮತದಿಂದ ನಿರ್ಧರಿಸಿ, ಆ ಜವಾಬ್ದಾರಿಯನ್ನು ಭೃಗುವಿಗೆ ವಹಿಸಿದರು.

ಬ್ರಹ್ಮನು ತ್ರಿಮೂರ್ತಿಯರಲ್ಲಿ ಮೊದಲಿಗನಾಗುತ್ತಾನೆಂದು ಭೃಗು ಸತ್ಯಲೋಕಕ್ಕೆ ಹೊರಟನು. ಅವನು ಸತ್ಯಲೋಕವನ್ನು ತಲುಪಿದನು. ತಪಸ್ವಿಗಳಲ್ಲಿ ಬ್ರಹ್ಮನನ್ನು ನೋಡಿದನು. ಬ್ರಹ್ಮನು ಕುಳಿತುಕೊಳ್ಳಲು ಆದೇಶಿಸುವ ಮೊದಲೇ, ಭೃಗು ಸ್ವತಃ ಒಂದು ಆಸನವನ್ನು ಅಲಂಕರಿಸಿದನು. ಬ್ರಹ್ಮನು ಈ ಕೃತ್ಯವನ್ನು ವಿಧೇಯತೆಯ ಕ್ರಿಯೆ ಎಂದು ಪರಿಗಣಿಸಿದನು

# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್

ಅನುವಾದ – ಶ್ರೀಮತಿ. ಎನ್. ಪಾರ್ವತಿ

ಮತ್ತು ಕನಿಷ್ಠ ಗೌರವವನ್ನು ಕೂಡಾ ನೀಡದೇ ಭೃಗುವನ್ನು ಸ್ವಾಗತಿಸಲಿಲ್ಲ.

ತನ್ನನ್ನು ಕಡೆಗಣಿಸದ ಮತ್ತು ಕಣ್ಣೆತ್ತಿಯೂ ನೋಡದವನು ರಜೋಗುಣ ಸ್ವಭಾವದವನೆಂದು ಭೃಗು ನಿರ್ಧರಿಸಿ ಈ ಭೂಮಿಯಲ್ಲಿ ಬ್ರಹ್ಮನಿಗೆ ದೇವಾಲಯವಿರದಿರಲಿ ಎಂದು ಶಪಿಸಿ ಕೈಲಾಸದ ಕಡೆಗೆ ಹೊರಟನು. ಪಾರ್ವತಿ ಮತ್ತು ಪರಮೇಶ್ವರರು ಕೈಲಾಸದಲ್ಲಿ ಕ್ರೀಡಾಸಕ್ತರಾಗಿರುವುದನ್ನು ಗಮನಿಸಿದನು.

ತಮ್ಮ ಏಕಾಂತದ ಸಮಯದಲ್ಲಿ, ಅತ್ಯಂತ ಸಾಮಾನ್ಯವಾದ ಲೌಕಿಕ ಧರ್ಮವನ್ನೂ ಲಕ್ಷಿಸದೇ, ಋಷಿ ತಮ್ಮ ಬಳಿಗೆ ಬಂದದ್ದನ್ನು ನೋಡಿ ಪಾರ್ವತಿಗೆ ನಾಚಿಕೆಯಾಯಿತು.

ಭೃಗುವನ್ನು ನೋಡಿ ಶಿವನು ಕೋಪಗೊಂಡು, ಸತಿಪತಿಗಳು ಒಂಟಿಯಾಗಿರುವಾಗ ರಹಸ್ಯ ಸ್ಥಳಕ್ಕೆ ಬರಬಹುದೇ ಎಂದು ತನ್ನಲ್ಲೇ ಯೋಚಿಸಿ ಋಷಿಯೊಂದಿಗೆ ಮಾತನಾಡದೆ ಮುಖ ತಿರುಗಿಸಿದನು.

ಆ ಸಂದರ್ಭದಲ್ಲಿ ಭೃಗುವು ಶಿವನ ಮನಸ್ಸನ್ನು ಗ್ರಹಿಸಿ, ತಮೋಗುಣ ರೂಪನೆಂದು ಪರಿಗಣಿಸಿ, ಮೋಕ್ಷ ಪ್ರದಾತನಲ್ಲ ಎಂದು ನಿರ್ಧರಿಸಿ ಶಿವನಿಗೆ ಭೂಲೋಕದಲ್ಲಿ ಶರೀರ ಪೂಜೆ ಇಲ್ಲ. ಲಿಂಗ ರೂಪದಲ್ಲಿ ಮಾತ್ರ ಪೂಜಿಸಲ್ಪಡಬೇಕೆಂದು ಶಪಿಸಿ ಅಲ್ಲಿಂದ ವೈಕುಂಠಕ್ಕೆ ತೆರಳಿದನು.

ಅಲ್ಲಿ ರಮಾಸಮೇತನಾದ ಶ್ರೀನಿವಾಸನನ್ನು ನೋಡಿ ಅವನ ಎದೆಗೆ ಒದ್ದನು. ಅನಿರೀಕ್ಷಿತ ಘಟನೆಗಳಿಂದ ಆಘಾತಕ್ಕೊಳಗಾದ ಹರಿ ಎದ್ದು ನಿಂತು ಋಷಿಗೆ ನಮಸ್ಕರಿಸಿ, ಅರ್ಘ್ಯಾದಿಗಳಿಂದ ಪೂಜಿಸಿ, ಕುಳಿತು ತನ್ನನ್ನು ಒದ್ದ ಋಷಿಯ ಪಾದವನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಭೃಗುವನ್ನು ನೋಡಿ ನಸುನಗುತ್ತಾ ಹೇಳಿದನು.

"ಮುನೀಶ್ವರ! ನೀವು ಬರುವುದನ್ನು ನಾನು ಗಮನಿಸಲಿಲ್ಲ, ನಾನು ನೆಲದ ಮೇಲೆ ಮಲಗಿದ್ದೆ. ನಾನು ನಿಮಗೆ ಅಗೌರವ ತೋರಿಸಿದ್ದೇನೆ. ದಯವಿಟ್ಟು ನನ್ನನ್ನು ಕ್ಷಮಿಸಿ" ನನ್ನ ಅಗೌರವಕ್ಕೆ ನೀವು ಶಿಕ್ಷೆ ನೀಡಿದ್ದೀರಿ.

ಇದು ನನ್ನ ವಿಧಿ. ನೀವು ನನ್ನ ಗಟ್ಟಿಯಾದ ತೊಡೆಗಳನ್ನು ಒದ್ದ ಕಾರಣ ನಿಮ್ಮ ಪಾದಗಳು ನೋಯುತ್ತಿವೆಯೋ? ಆದರೆ ಈಗ ನಾನು ಏನೂ ಮಾಡಲು ಸಾಧ್ಯವಿಲ್ಲ.ನನಗೆ ಯಾವುದೇ ನೋವು ಅನಿಸುತ್ತಿಲ್ಲ. ನಿಮ್ಮ ಪಾದಗಳು ಕೋಮಲವಾಗಿವೆ ಮತ್ತು ಮೊಳಕೆಯಂತೆ ಮೃದುವಾಗಿವೆ.



ಆದ್ದರಿಂದ ನನಗೇನು ನೋವು ಇಲ್ಲ. ನಿಮ್ಮ ಮಾತುಗಳು ಭೂಷಣವೇ ಎಂದು ಪಾದ ಪ್ರಕ್ಷಾಲನ ಮಾಡಿ, ಪ್ರಕ್ಷಾಲನ ತೀರ್ಥವನ್ನು ತಲೆಯ ಮೇಲೆ ಸಿಂಪಡಿಸಿಕೊಂಡನು.

ಸ್ವಾಮಿ! ವಿಪ್ರನ ಪಾದಧೂಳನ್ನು ತಲೆಯ ಮೇಲೆ ಧರಿಸುವವನು ನಾನು. ನಿಮ್ಮ ಪಾದಗಳು ಸ್ಪರ್ಶದಿಂದ ನನ್ನ ತೊಡೆಗಳು ಪಾವನವಾದವು ಎಂದು ಶಾಂತವಾಗಿ ಹೇಳುತ್ತಿದ್ದಂತೆ ಭೃಗು ಶಾಂತನಾದನು. ಭೃಗುವು "ಸ್ವಾಮಿ! ನೀನು ಶಾಶ್ವತ ಸದ್ಗುಣಮೂರ್ತಿ.

ನೀನು ನಿಖಿಲೋನ್ನತನು. ನಿನ್ನನ್ನು ಸ್ತುತಿಸಲು ಪದಗಳು ಸಾಕಾಗುತ್ತಿಲ್ಲ" ಎನ್ನುತ್ತಾ, ವೈಕುಂಠ ಸೀಮೆಯನ್ನು ದಾಟಿ ಗಂಗಾ ತೀರದಲ್ಲಿರುವ ಋಷಿಗಳ ಬಳಿಗೆ ಹೋಗಿ, ಬ್ರಹ್ಮಾದಿಯರ ಸ್ವಭಾವಗಳನ್ನು ವಿವರಿಸಿ, ಹರಿ ಮಾತ್ರ ಶುದ್ಧ ಸದ್ಗುಣ ಸ್ವರೂಪನೆಂದು ತನ್ನ ನಿರ್ಧಾರವನ್ನು ತಿಳಿಸಿದನು.

ಭೃಗುವಿನ ಮಾತುಗಳಿಂದ ಋಷಿಗಳು ತುಂಬಾ ಸಂತೋಷಪಟ್ಟರು. ಅವರು ನಾರದರ ಮಾತುಗಳನ್ನು ನೆನಪಿಸಿಕೊಂಡರು.ಅವರ ಸಂದೇಹಗಳು ದೂರವಾದವು. ಅವರು ತಮ್ಮ ಎಲ್ಲಾ ಕರ್ಮಗಳ ಪುಣ್ಯಫಲವನ್ನು ನಾರಾಯಣನಿಗೆ ಅರ್ಪಿಸಿದರು.

ಅದು ವೈಕುಂಠ, ಭೃಗುವಿನ ಆಗಮನ, ಕೋಪದಿಂದ ಹರಿಯ ಎದೆಯನ್ನು ಒದೆಯುವುದು, ತನಗೇನು ನೋವಿಲ್ಲವೆಂದು ಹರಿಯು ಋಷಿಯನ್ನು ಸತ್ಕಾರ ಮಾಡುವುದನ್ನು ಕಣ್ಣಾರೆ ನೋಡಿದ ಲಕ್ಷ್ಮೀ ದೇವಿಯು ಭೃಗು ಹೊರಟುಹೋದ ಮೇಲೆ ದುಃಖಿತಳಾದಳು.

(ಮುಂದುವರೆಯುತ್ತದೆ)



# ಮಾರ್ಚ್ 2026 ತಿಂಗಳ ರಾಶಿ ಫಲಗಳು



**ಶ್ರೀಮಾತಾ ಅನುಗ್ರಹ**

### ಮೇಷ
ಸರಕಾರಿ ಕೆಲಸ ಕಾರ್ಯಗಳು ಸುಸೂತ್ರವಾಗಿ ನೆರವೇರುತ್ತವೆ. ಕೋರ್ಟು ವಿವಾದಗಳು ಬಗೆ ಹರಿಯಲಿವೆ. ಕ್ರೀಡಾ ಕ್ಷೇತ್ರದಲ್ಲಿರುವವರಿಗೆ ಶುಭಫಲ. ಮಾಧ್ಯಮ ಕ್ಷೇತ್ರದವರಿಗೆ ಲಾಭದಾಯಕ. ಅನೇಕ ಮೂಲಗಳಿಂದ ಧನಲಾಭವಾಗುವುದು. ಹನೂಮಾನ್ ಚಾಲೀಸಾ ಪಠಣೆ ಶುಭಕರ.

### ವೃಷಭ
ವಿದ್ಯಾರ್ಥಿಗಳು ಜಯ ಕಾಣುವರು. ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುವು. ಅವಿವಾಹಿತರಿಗೆ ವಿವಾಹ ಯೋಗವಿರುವುದು. ಸಂತಾನಾಪೇಕ್ಷಿಗಳಿಗೆ ಸಂತಾನ ಭಾಗ್ಯವಿರುವುದು. ಕೃಷಿಕರಿಗೆ ಲಾಭದಾಯಕ. ಹಣದ ಹರಿವು ಚೆನ್ನಾಗಿ ಆಗುವುದು.

### ಮಿಥುನ
ಕಾರ್ಯಕ್ಷೇತ್ರದಲ್ಲಿ ಪ್ರಗತಿ ಕಾಣುವಿರಿ. ಆಧ್ಯಾತ್ಮಿಕತೆಯತ್ತ ಮನಸ್ಸುವಾಲುವುದು. ಸಹೋದರರಿಗೆ ಅನುಕೂಲ. ತಂದೆಯ ಆರೋಗ್ಯದ ಕಡೆ ಗಮನ ಹರಿಸುವುದು ಒಳ್ಳೆಯದು. ವಿದ್ಯಾರ್ಥಿಗಳು ಶ್ರಮಪಟ್ಟು ಓದಬೇಕು. ಮಕ್ಕಳ ಭವಿಷ್ಯ ಉತ್ತಮವಾಗಿರುತ್ತದೆ. ನವಗ್ರಹ ಶಾಂತಿ ಮಂತ್ರವನ್ನು ಪಠಿಸುವುದು ಶುಭಕರ.

### ಕರ್ಕಾಟಕ
ವಿದ್ಯಾರ್ಥಿಗಳಿಗೆ ಓದಿನಲ್ಲಿ ಅನುಕೂಲವಾಗುವುದು. ಸರಕಾರಿ ಕೆಲಸ ಕಾರ್ಯಗಳು ಮುಂದುವರಿಯುವುದಿಲ್ಲ. ಮಾತಿನಲ್ಲಿ ನಯವಿರಲಿ. ಶ್ರೀನರಸಿಂಹ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಮಾಡಿ ಬನ್ನಿ.

### ಸಿಂಹ
ಸಂಗಾತಿಯೊಂದಿಗೆ ಹೆಚ್ಚು ವಾದ ಮಾಡಲಿಕ್ಕೆ ಹೋಗಬೇಡಿ. ಅನೇಕ ಮೂಲಗಳಿಂದ ಧನ ಲಾಭವಾಗುವುದು. ಮನೆಯಲ್ಲಿ ಶುಭ ಕಾರ್ಯಗಳು ನೆರವೇರಲಿದೆ. ಮಕ್ಕಳಿಂದ ಲಾಭ. ಅವಿವಾಹಿತರಿಗೆ ವಿವಾಹ ಯೋಗವಿರುವುದು.ಸಂತಾನಾಪೇಕ್ಷಿಗಳಿಗೆ ಮಕ್ಕಳ ಭಾಗ್ಯ ಲಭಿಸುವುದು. ಹನುಮಾನ್ ಚಾಲೀಸಾ ಪಠಿಸಿ.

### ಕನ್ಯೆ
ನೀವು ಅಂದುಕೊಂಡಿದ್ದೆಲ್ಲಾ ಕೈಗೂಡುತ್ತವೆ. ಸರಕಾರಿ ಕೆಲಸ ಕಾರ್ಯಗಳು ಸಲೀಸಾಗಿ ಆಗುತ್ತದೆ. ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಲಾಭದಾಯಕ. ಕೋರ್ಟು ವ್ಯವಹಾರಗಳಲ್ಲಿ ಜಯಶಾಲಿಯಾಗುವಿರಿ. ವಿದ್ಯಾರ್ಥಿಗಳಿಗೆ ಶುಭದಾಯಕ. ಹಣಕಾಸಿನ ಸ್ಥಿತಿಗತಿ ಉತ್ತಮವಾಗಿರುತ್ತದೆ.

### ತುಲಾ
ವ್ಯವಸಾಯಗಾರರಿಗೆ ಲಾಭದಾಯಕ. ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುವು. ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿಬರುವುದು. ಭೋಗವಸ್ತುಗಳ ಖರೀದಿ ಮಾಡುವಿರಿ. ಆರ್ಥಿಕ ಸ್ಥಿತಿ ಗತಿ ಉತ್ತಮವಾಗಿರುವುದು. ಅಮ್ಮನವರ ದೇವಾಲಯಕ್ಕೆ ಶುಕ್ರವಾರ ಹೋಗಿಬನ್ನಿ.

### ವೃಶ್ಚಿಕ
ನೂತನ ವಸ್ತ್ರಾಭರಣ ಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಶುಭದಾಯಕ. ಆಕಸ್ಮಿಕ ಧನಲಾಭವಾಗುವುದು. ಹೊಸ ವಾಹನ ಖರೀದಿಸುವಿರಿ. ವಿಭಾಗೀಯ ಪರೀಕ್ಷೆಗಳನ್ನು ಸಮರ್ಪಕವಾಗಿ ಪೂರೈಸುವಿರಿ. ಸಮಾಜದ ಉನ್ನತ ವರ್ಗದವರೊಂದಿಗೆ ಸ್ನೇಹವಾಗಿ ನಿಮ್ಮ ಸ್ಥಿತಿಗತಿಯೂ ಮೇಲೇರುತ್ತದೆ.

### ಧನಸ್ಸು
ಸರಕಾರಿ ಕೆಲಸ ಕಾರ್ಯಗಳು ನೆರವೇರುತ್ತದೆ. ಪೋಲೀಸು ಇಲಾಖೆ, ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಲಾಭಾದಾಯಕ. ಕೋರ್ಟು ವಿವಾದಗಳಲ್ಲಿ ಗೆಲ್ಲುವಿರಿ. ಹೊಸ ವಾಹನ ಖರೀದಿ ಯೋಗವಿರುವುದು. ಮನೆಯಲ್ಲಿ ಶುಭಕಾರ್ಯಗಳು ನೆರವೇರುವುವು.

### ಮಕರ
ಹೊಸ ಗೆಳೆಯರು ಸಿಗುವರು. ಶತ್ರುಗಳ ನಾಶವಾಗುವುದು. ನಿಮ್ಮ ಕೆಲಸಗಾರರು ವಿಧೇಯರಾಗಿರುವರು. ಸರಕಾರದಿಂದ ಸನ್ಮಾನ ದೊರೆಯುವುದು. ಹೊಸ ವಸ್ತ್ರ ಖರೀದಿಸಿರುವಿರಿ. ವ್ಯವಸಾಯಗಾರರಿಗೆ ಶುಭಫಲ. ಮಾತಿನಲ್ಲಿ ನಯವಿರಲಿ.

### ಕುಂಭ
ಧನಾಗಮನ ನಿರಂತರವಾಗಿ ಆಗುತ್ತಲೇ ಇರುವುದು. ಆರೋಗ್ಯ ಉತ್ತಮವಾಗಿರುವುದು. ನೂತನ ವಸ್ತ್ರಾಭರಣ ಕೊಳ್ಳುವಿರಿ. ಸಂತಾನ ಭಾಗ್ಯ ಉಂಟಾಗುವುದು. ವಿದ್ಯಾಭ್ಯಾಸ ಚೆನ್ನಾಗಿ ಆಗುವುದು. ಹಾಡುಗಾರರಿಗೆ ಉತ್ತಮ ಸಮಯ.

### ಮೀನ
ಶತ್ರುಗಳು ದೂರ ಸರಿಯುವರು. ವಿವಾಹಬಾಹಿರ ಸಂಬಂಧದಿಂದ ದೂರವಿರಿ. ಅವಿವಾಹಿತರಿಗೆ ವಿವಾಹ ಭಾಗ್ಯ ದೊರೆಯುವುದು. ಸಂತಾನಾಪೇಕ್ಷಿಗಳಿಗೆ ಸಂತಾನ. ವಿದ್ಯೆಯಲ್ಲಿ ಪ್ರಗತಿ. ಭೋಗಭಾಗ್ಯಗಳು ಲಭಿಸುವುವು. ವ್ಯಾಪಾರದಲ್ಲಿ ಅಭಿವೃದ್ಧಿ ಉಂಟಾಗುವುದು. ದ್ರವ ಪದಾರ್ಥಗಳ ಮಾರಾಟದಲ್ಲಿ ಲಾಭದಾಯಕ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

## 1. ಆಂಜನೇಯನನ್ನು ಆರಾಧಿಸುವವರಿಗೆ ಶನಿಯು ತೊಂದರೆ ಕೊಡುವುದಿಲ್ಲ ಎಂಬುದಕ್ಕೆ ಕಾರಣವೇನು?

**ಉತ್ತರ:** ಒಂದು ಸಲ ಶನಿಯು ತಂದೆಯ ಮೇಲೆ ಬೇಸರಿಸಿಕೊಂಡು ಹೊರಟು ಹೋಗುತ್ತಾನೆ. ಎಷ್ಟು ದಿನವಾದರೂ ಬರುವುದಿಲ್ಲ. ಛಾಯೆಯು ಸೂರ್ಯನಲ್ಲಿ ಗೋಳಾಡುತ್ತಾಳೆ. ಕೊನೆಗೆ ಛಾಯೆಯ ದುಃಖಕ್ಕೆ ಮಣಿದು ಕರೆತರುವುದಾಗಿ ಒಪ್ಪುತ್ತಾನೆ. ಸೂರ್ಯನು ಬಹಳ ಯೋಚಿಸಿ ಆಂಜನೇಯನನ್ನು ಕರೆದು ತನ್ನ ಮಗನ ಬಗ್ಗೆ ತಿಳಿಸಿ ಕರೆತರಲು ಕೇಳಿಕೊಳ್ಳುತ್ತಾನೆ. ಆಂಜನೇಯನು ಇದಕ್ಕೆ ಒಪ್ಪಿ ಕರೆತರಲು ಹೋಗುತ್ತಾನೆ. ಶನಿಯನ್ನು ನೋಡಿ ವಿನಯದಿಂದ ಸೂರ್ಯನ ಬಳಿಗೆ ಬರುವಂತೆ ವಿನಂತಿಸಿಕೊಳ್ಳುತ್ತಾನೆ. ಆದರೆ ಶನಿಯು ಕೋಪಿಷ್ಠನಾಗಿ ಬರುವುದಿಲ್ಲವೆನ್ನುತ್ತಾನೆ. ಆಂಜನೇಯ ಎಷ್ಟೇ ಬಲವಂತ ಮಾಡಿದರೂ ಶನಿ ಬರುವುದಿಲ್ಲ ಎನ್ನುತ್ತಾನೆ. ಆಂಜನೇಯ ನೀನು ಬರುವುದಿಲ್ಲ ಎಂದರೆ ನಾನು ಬಿಡುವುದಿಲ್ಲ. ನಿನ್ನನ್ನು ಎತ್ತಿಕೊಂಡು ಹೋಗುತ್ತೇನೆಂದು ಬೆದರಿಕೆ ಹಾಕುತ್ತಾನೆ. ಆದರೆ ಶನಿಯು ಹೆದರುವುದಿಲ್ಲ.

ಉಗ್ರದೃಷ್ಟಿಯಿಂದ ಆಂಜನೇಯನನ್ನು ನೋಡಲು, ಆಂಜನೇಯ ಶ್ರೀರಾಮನ ಭಕ್ತನಾಗಿರುವುದರಿಂದ ಆ ಕ್ರೂರ ದೃಷ್ಟಿಯು ಆಂಜನೇಯನ ಮೇಲೆ ಕೆಲಸ ಮಾಡುವುದಿಲ್ಲ. ಕೊನೆಗೆ ವಿಧಿಯಿಲ್ಲದೆ ಶನಿಯೇ ಸೋತು ಆಂಜನೇಯನ ಜೊತೆ ಬರಲು ಒಪ್ಪಿ ಸೂರ್ಯನ ಹತ್ತಿರ ಬರುತ್ತಾನೆ. ಅಹಂಕಾರರಹಿತನಾದ ರಾಮಭಕ್ತನಾದ ಆಂಜನೇಯನನ್ನು ಶನಿಯು ಮೆಚ್ಚಿ, ಯಾರು ನಿನ್ನನ್ನು ಆರಾಧಿಸುವರೋ ಅವರಿಗೆ ನಾನು ತೊಂದರೆ ಕೊಡಲಾರೆ ಎಂದು ಹೇಳುತ್ತಾನೆ. ಹಾಗಾಗಿ ಆಂಜನೇಯನ ಆರಾಧನೆಯಿಂದ ಶನಿ ಶಾಂತಿಯಾಗುತ್ತದೆ.

## 2. ರಾಹುಕೇತುಗಳಿಗೆ ಆಕಾರವಿಲ್ಲದಿರಲು ಕಾರಣವೇನು?

**ಉತ್ತರ :** ರಾಹು ಮತ್ತು ಕೇತು ಛಾಯಗ್ರಹಗಳಾದುದರಿಂದ ಅವುಗಳಿಗೆ ಆಕಾರವಿಲ್ಲ. ಪೌರಾಣಿಕವಾಗಿ ಒಂದು ಕಥೆಯೇ ಇದೆ. ದೇವತೆಗಳು ಮತ್ತು ರಾಕ್ಷಸರೂ ಸೇರಿ ಸಮುದ್ರಮಥನ ಮಾಡಿದಾಗ ಬಂದಂತಹ ಅಮೃತವನ್ನು ಸೇವಿಸುವ ವಿಷಯವಾಗಿ ದೇವದಾನವರು ಚರ್ಚಿಸುತ್ತಿರುವಾಗ ವಿಷ್ಣುವು ಸ್ತ್ರೀರೂಪ ತಾಳಿ ಮೋಹಿನಿ ರೂಪದಲ್ಲಿ ಅಮೃತವನ್ನು ಬಡಿಸಲು ಬರುತ್ತಾನೆ. ದೇವತೆಗಳು ಒಂದು ಸಾಲಿನಲ್ಲೂ ದಾನವರು ಮತ್ತೊಂದು ಸಾಲಿನಲ್ಲೂ ಕುಳಿತಾಗ ಮೋಹಿನಿ ರೂಪಿ ವಿಷ್ಣುವು ದೇವತೆಗಳಿಗೆ ಮೊದಲು ಬಡಿಸಲು ಪ್ರಾರಂಭಿಸುತ್ತಾನೆ. ಆಗ ಸ್ವರ್ಭಾನು ಎಂಬ ರಾಕ್ಷಸನು ಅಮೃತವನ್ನು ಹಂಚುವ ಬಗ್ಗೆ ಅನುಮಾನಗೊಂಡವನಾಗಿ ಯಾರಿಗೂ ತಿಳಿಯದಂತೆ ದೇವತೆಗಳ ಸಾಲಿನಲ್ಲಿ ಬಂದು ಕುಳಿತು ಅಮೃತವನ್ನು ಪಡೆದುಕೊಂಡನು. ಈ ಆಕಸ್ಮಿಕ ವಂಚನೆಯನ್ನು ಸೂರ್ಯ ಮತ್ತು ಚಂದ್ರರು ಗಮನಿಸಿದವರಾಗಿ ಆ ಕೂಡಲೇ ವಿಷ್ಣುವಿಗೆ ಗೌಪ್ಯವಾಗಿ ತಿಳಿಸುತ್ತಾರೆ. ಇದನ್ನು ಕೇಳಿದ ಕೂಡಲೆ ವಿಷ್ಣುವು ಮಿಂಚಿನ ವೇಗದಲ್ಲಿ ತನ್ನ ಸುದರ್ಶನ ಚಕ್ರವನ್ನು ಸ್ವರ್ಭಾನುವಿನ ಮೇಲೆ ಪ್ರಯೋಗಿಸಿದವನಾದರೂ ಸುದರ್ಶನ ಚಕ್ರವು ಸ್ವರ್ಭಾನುವಿನ ಶಿರಸ್ಸನ್ನು ಛೇದಿಸುವ ವೇಳೆಗಾಗಲೇ ಅವನ ಗಂಟಲಿಂದ ಅಮೃತವು ದೇಹದೊಳಗಡೆ ಪ್ರವೇಶಿಸಿದ್ದ ಕಾರಣ ಸ್ವರ್ಭಾನುವಿನ ರುಂಡ ಮುಂಡಗಳು ಬೇರ್ಪಟ್ಟರೂ ಅವನು ಸೇವಿಸಿದ್ದ ಅಮೃತದ ಪ್ರಭಾವದಿಂದಾಗಿ ಅವುಗಳಿಗೆ ಸಾವು ಸಂಭವಿಸದೆ ಅಮರತ್ವವನ್ನು ಹೊಂದುವ ಮೂಲಕ ಸೂರ್ಯ ಚಂದ್ರರಂತೆ ಗ್ರಹಗಳ ಸಾಲಿನಲ್ಲಿ ಸೇರಿ ತನ್ನ ಈ ದುಸ್ಥಿತಿಗೆ ಕಾರಣರಾದ ಸೂರ್ಯ ಚಂದ್ರರನ್ನು ಬೆನ್ನು ಹತ್ತಿ ಸಮಯಾನುಸಾರ ಅವರನ್ನು ಬಾಧಿಸುತ್ತಿದ್ದಾರೆ ಎಂಬುದಾಗಿದೆ. ಈ ರುಂಡಕ್ಕೆ ರಾಹುವೆಂದೂ ಮುಂಡಕ್ಕೆ ಕೇತುವೆಂದೂ ಹೆಸರಾಯಿತು.

# ವಿನೀತಭಾವವೇ ಎಲ್ಲರಿಗೂ ಭೂಷಣ

- ಎ. ಆರ್. ರಘುರಾಮ
9916138436

ಭಾಗವತದ 9 ನೇ ಸ್ಕಂದದಲ್ಲಿ ಬರುವ ಕತೆ. ಚಂದ್ರವಂಶದಲ್ಲಿ ಯಯಾತಿ ಎಂಬ ರಾಜ ಇದ್ದ. ಈತ ಯಾದವರು ಮತ್ತು ಪಾಂಡವರ ಮೂಲಪುರುಷ. ಅವನು 100 ರಾಜಸೂಯ ಯಾಗ, 100 ಅಶ್ವಮೇಧ, 100 ವಾಜಪೇಯ ಯಾಗ, 1000 ಅತಿರಾತ್ರ, 1000 ಪುಂಡರೀಕ ಮತ್ತು ಅಸಂಖ್ಯಾತ ಅಗ್ನೀಷ್ಟೋಮ ಮತ್ತು ಚಾತುರ್ಮಾಸ್ಯಗಳನ್ನು ಮಾಡಿದ್ದ. ಹಾಗಾಗಿ ಹರಿವಂಶ ಗ್ರಂಥವು ಈತನನ್ನು ವಿಶ್ವ ಸಾಮ್ರಾಟ ಎಂದು ಪ್ರಶಂಸೆ ಮಾಡಿದೆ. ಅವನು ಬೆಟ್ಟದಷ್ಟು ಚಿನ್ನವನ್ನು, ಶತಕೋಟಿ ಗೋವುಗಳನ್ನು ಬ್ರಾಹ್ಮಣ ಮತ್ತು ಋಷಿಗಳಿಗೆ ದಾನ ಮಾಡಿದ್ದನಂತೆ.

ಈತ ಸಾವಿರಾರು ವರ್ಷ ರಾಜ್ಯಭಾರ ನಡೆಸಿ ಮಗ ಪುರುವಿಗೆ ಉತ್ತರಾಧಿಕಾರಿ ಮಾಡಿ ತಪಸ್ಸಿಗೆ ಹೋದ. ಫಲವಾಗಿ ಸ್ವರ್ಗಲೋಕ ಪಡೆದ. ನೂರಾರು ವರ್ಷ ಅಲ್ಲೇ ಸುಖವಾಗಿ ಇದ್ದ. ಒಮ್ಮೆ ಇಂದ್ರದೇವ ಇವನನ್ನು ಭೇಟಿ ಮಾಡಿದ. ಯಯಾತಿ ನೀನು ಮಹಾ ಚಕ್ರವರ್ತಿ. ದೊಡ್ಡ ದಾನಿ ಮತ್ತು ಮಹಾತಪಸ್ವಿ, ನೀನು ಯಾರಿಗೆ ಸಮನಾಗಿದ್ದ ವ್ಯಕ್ತಿ? ಎಂದು ಕೇಳಿದ. ಯಯಾತಿ ಜೋರಾಗಿ ನಕ್ಕ. ನನ್ನ ಹಾಗೆ ರಾಜ್ಯಭಾರ ಮಾಡಿದವರು, ಸಾವಿರಾರು ಹೋಮ, ದಾನ, ಘೋರ ತಪಸ್ಸು ಮಾಡಿದವರು ಯಾವ ಲೋಕದಲ್ಲೂ ಇಲ್ಲವೇ ಇಲ್ಲ. ಹಾಗಾಗಿ ನನಗೆ, ನನ್ನ ತಪಸ್ಸಿಗೆ ಯಾರೂ ಸಾಟಿಯೇ ಇಲ್ಲ.ಎಂಥಾ ಪ್ರಶ್ನೆ ಕೇಳಿದೆಯಲ್ಲಾ ದೇವೇಂದ್ರ ಎಂದು ದರ್ಪದಿಂದಲೇ ಉತ್ತರಿಸಿದ.

ದೇವೇಂದ್ರ ಹೇಳಿದ. ನೀನು ಸರ್ವ ಲೋಕಕ್ಕೂ ಮಹಾ ಸಾಧಕ, ತಪಸ್ವಿ. ಆದರೆ ನನ್ನ ಸಮಾನ ಯಾರು ಇಲ್ಲ ಎಂಬ 'ಅಹಂಕಾರ' ಎಂಬ ಮಹಾನ್ ದೋಷ ನಿನ್ನನ್ನು ಹಾಳು ಮಾಡಿದೆ. ನಿನ್ನ ಸಾಧನೆ - ಪುಣ್ಯದ ಫಲಗಳು ಇದರಿಂದ ಕ್ಷಯಿಸಿವೆ. ಪುಣ್ಯ ಖಾಲಿಯಾದ ನಂತರ ಸ್ವರ್ಗದಲ್ಲಿ ಜಾಗ ಇಲ್ಲ. ಭೂಲೋಕಕ್ಕೆ ಹೋಗಿ ಬೀಳು ಎಂದು ಆದೇಶಿಸಿದ! ಛೇ ಎಂಥಾ ಪ್ರಮಾದವಾಯಿತು? ಯಯಾತಿ ಮರುಗಿದ. ಇಂದ್ರನ ಮಾತು ಸುಳ್ಳಾಗದು. ಸ್ವರ್ಗ, ಬ್ರಹ್ಮ ಲೋಕದಲ್ಲಿ ಲೀಲಾಜಾಲವಾಗಿ ಸಂಚಾರ ಮಾಡುವ ಅರ್ಹತೆ, ಯೋಗ್ಯತೆ ಪಡೆದಿದ್ದವನಿಗೆ ನನ್ನ ಸಮಾನ ಯಾರು ಇಲ್ಲ ಎಂಬ ಅಹಂಕಾರವೊಂದೇ ಅಧಃಪತನಕ್ಕೆ ಮೂಲವಾಗಿ ಬಿಟ್ಟಿತು. ಕೋಟಿ ಕೋಟಿ ಪುಣ್ಯ ಒಂದೇ ಕ್ಷಣದಲ್ಲಿ ಕ್ಷಯವಾಗಿ ಹೋಯಿತು. ಸೀದಾ ಭೂಮಿಗೆ ಬಿದ್ದ. ಅಹಂಕಾರ ಎಂಬುದು ಆವರಿಸಿದರೆ ಎಲ್ಲರಿಗೂ ಇದೇ ಗತಿ ಎಂದಿದೆ ಭಾಗವತ.

ಹೌದಲ್ಲವೇ? ಒಂದು ಸಣ್ಣ ಕೆಲಸ ಮಾಡಿದರೂ ನಾವು ಬೀಗುತ್ತೇವೆ. ಸಣ್ಣ ಉಪಕಾರ ಮಾಡಿದರೂ ನನ್ನದೇ ಶ್ರೇಷ್ಠ ಎನ್ನುತ್ತೇವೆ.

ಉನ್ನತ ಶ್ರೇಣಿಯಲ್ಲಿ ಪರೀಕ್ಷೆ ಉತ್ತೀರ್ಣ ಮಾಡಿದರೆ ಜಗತ್ತಿನಲ್ಲೇ ನನ್ನಂಥ ಜಾಣ ಇಲ್ಲ ಎಂದು ಮರೆಯುತ್ತೇವೆ. 4 ಕಾಸು ಕೈಯಲ್ಲಿ ಇದ್ದರೆ ನಾನೇ ಕುಬೇರ ಎಂದುಕೊಳ್ಳುತ್ತೇವೆ. ಆಸ್ತಿ, ಮನೆ, ತೋಟ, ಜಮೀನು, ರೂಪ, ಯೌವ್ವನ ಇದ್ದರಂತೂ ಮುಗಿದೇ ಹೋಯಿತು. ನನ್ನ ಸಮಾನ ಯಾರು? ಎಂದು ಅಹಂ ಪಡುತ್ತೇವೆ. ಆದರೆ ಹರಿವಂಶ ಹೇಳಿದೆ. ಎಷ್ಟೇ ಕೀರ್ತಿ ಬಂದರೂ ಬೀಗಬೇಡ. ಗುರು-ಹಿರಿಯರಿಗೆ ಬಾಗಿ ಬಾಳು ಎಂದು.

ಸಂಯಮ, ಸೌಜನ್ಯ, ಗುರುಭಕ್ತಿ, ಹಿರಿಯರಲ್ಲಿ ಗೌರವ ಇದ್ದಾತನಿಗೆ ವಿನಯವೇ ಭೂಷಣ ಎಂಬುದು ಈ ಪ್ರಸಂಗದ ಸಾರ. ಇಷ್ಟಾದರೂ ಯಯಾತಿಯು ಇಂದ್ರನಲ್ಲಿ ಮತ್ತೆ ವಿನೀತನಾಗಿ ಬೇಡಿದ. ನಾನು ಭೂಮಿಗೆ ಬೀಳುತ್ತಿರುವುದು ಖಚಿತ. ಬಿದ್ದರೂ ಸಜ್ಜನರ ನಡುವೆ ಬೀಳಿಸು. ಇನ್ನಷ್ಟು ಸಾಧನೆಗೆ ಅವರು ಪ್ರೇರಕರಾಗುತ್ತಾರೆ. ನನ್ನನ್ನು ತಿದ್ದಿ ಬೆಳೆಸುತ್ತಾರೆ ಎಂದು ಪ್ರಾರ್ಥಿಸಿದ. ಇದೇ ಪಶ್ಚಾತ್ತಾಪ ಮತ್ತು ಆಡಿದ ಮಾತಿಗೆ ಗರಿಷ್ಠ ಕ್ಷಮೆ, ಕಷ್ಟ, ಸಂಕಟ, ಶಾಪ ದೊರೆತರೂ ಅಲ್ಲೂ ಧನಾತ್ಮಕವಾಗಿ ಏನೆಲ್ಲಾ ಮಾಡಬಹುದು ಎಂಬ ಮಾರ್ಗ.

ಹಿಂದೆಲ್ಲಾ ಮಾಡಿದ ಪುಣ್ಯದ ಫಲವಾಗಿ ಆತ ಭೂಲೋಕಗದಲ್ಲಿ ಮತ್ತೆ ಸಜ್ಜನರ ನಡುವೆಯೇ ಬಿದ್ದ. ಕಲಿಗಾಲದಲ್ಲಿ ಏನೆಲ್ಲಾ ದೊರಕಬಹುದು. ಆದರೆ ಸಜ್ಜನರ ಸಂಗ ದೊರಕುವುದು ಬಹಳ ಕಷ್ಟ. ಸತ್ಸಂಗ ದೊರಕಲಿ ಎಂದು ನಾವು ನಿತ್ಯ ಸಂಕಲ್ಪ ಮಾಡಲೇಬೇಕು. ಸಜ್ಜನರನ್ನು ಅರಸಿ ಹೋಗಬೇಕು. ಅಲ್ಲಿ ಇಹ ಪರ ಸಾಧನೆಗೆ ರಹದಾರಿ ಇದೆ.

# ಪುಟಾಣಿ ಮಕ್ಕಳಿಗಾಗಿ



ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.







ಬಣ್ಣವನ್ನು ತುಂಬಿರಿ.



## ಮಾರ್ಗ ಅನ್ವೇಷಣೆ



ಮಕ್ಕಳೇ, ಇಲ್ಲಿರುವ ಅಳಿಲು ಯಾವ ಹಾದಿಯಲ್ಲಿ ಹೋಗಿ ಹಣ್ಣುಗಳನ್ನು ತಿನ್ನುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ !

## ಗೊಂಬೆಯನ್ನು ಗಮನಿಸಿ



ಈ ಚಿತ್ರದಲ್ಲಿರುವ ಆನೆ ಹಾಗೂ ಗುಬ್ಬಾರಿಯಲ್ಲಿ ಯಾವುದು ವಿಭಿನ್ನವಾಗಿವೆ ಎಂದು ಕಂಡು ಹಿಡಿಯಿರಿ ಮಕ್ಕಳೆ ನೋಡೋಣ

ಉತ್ತರಗಳು: ಇದರಲ್ಲಿ 4 ಗುಬ್ಬಾರಿಯಿಂದ 9 ಗುಬ್ಬಾರಿಯನ್ನು ಆನೆ ಹಿಡಿದಿದೆ. ಆದರೆ ಅದರಲ್ಲಿ 7 ಗುಬ್ಬಾರಿಗಳು ಇಲ್ಲ ಇದೇ ಇದರಲ್ಲಿ ವಿಭನ್ನವಾಗಿದೆ.

# ರಸ ಪ್ರಶ್ನೆಗಳು

01. ಯಾವ ಮಾಸದಲ್ಲಿ ಸ್ನಾನ ಮಾಡಿದರೆ ಶುಭವಾಗುತ್ತದೆ? ..........................................
02. ಪುಷ್ಪಕ ವಿಮಾನ ನಿರ್ಮಿಸಿದವರು ಯಾರು? ..........................................
03. ರಾಶಿಗಳಲ್ಲಿ ಕೊನೆಯ ರಾಶಿ ಯಾವುದು?..........................................
04. ಹೊಳವನಹಳ್ಳಿಯಲ್ಲಿರುವ ದೇವಾಲಯ ಯಾವುದು? ..........................................
05. ತಿರುವಣ್ಣಾಮಲೈ ಯಾವ ಜಿಲ್ಲೆಯಲ್ಲಿದೆ?..........................................
06. ಯಾವ ಅಕ್ಷರವನ್ನು ಸ್ಮರಿಸುತ್ತಿದ್ದರೆ ಒಳ್ಳೆಯದು? ..........................................
07. ಯಾವ ದಿನದಂದು ಪಂಚಾಂಗ ಶ್ರವಣ ಮಾಡುತ್ತಾರೆ?..........................................
08. ಶಬರಿಯ ಮತ್ತೊಂದು ಹೆಸರೇನು? ..........................................
09. ಅನ್ನಮಾಚಾರ್ಯರು ರಚಿಸಿದ ಕೀರ್ತನೆಗಳಷ್ಟು?..........................................
10. ನಾಡಿಗಳ ಸಂಗಮವನ್ನು ಏನ್ನೆನ್ನುತ್ತಾರೆ? ..........................................
11. ಅಮರತ್ವ ಎಂದರೆ ಏನು? ..........................................
12. ಎಷ್ಟು ಮಂದಿಗೆ ಸಾಕಾಗುವಷ್ಟು ತಟ್ಟೆಯಲ್ಲಿ ಇಟ್ಟರು? ..........................................
13. ನಾರದನು ಯಾವ ಮಂತ್ರವನ್ನು ಜಪಿಸಿದನು?..........................................
14. ಸರ್ವಲೋಕಕ್ಕೂ ಮಹಾಸಾಧಕ ಯಾರು ಎಂದು ಹೇಳಿದರು?..........................................
15. ಹನುಮಂತನು ಯಾವ ವೇಷದಲ್ಲಿ ರಾಮಲಕ್ಷ್ಮಣರ ಬಳಿಗೆ ಹೋದನು? ..........................................

## ಸೂಚನೆಗಳು

44 ಕ್ವಿಜ್

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

ಹೆಸರು :
ಚಂದಾ ಸಂಖ್ಯೆ :
ತಂದೆಯ ಹೆಸರು :
ತಾಯಿಯ ಹೆಸರು:

ವಿಳಾಸ :

ದೂರವಾಣಿ ಸಂಖ್ಯೆ :

ಶ್ರೀರಾಮಚಂದ್ರನ ವಂಶ ಯಾವುದು?

ಶ್ರೀರಾಮಚಂದ್ರನ ತಾಯಿ ಯಾರು?

ರಾಮ ರಾಜ್ಯ ಯಾವುದು?

ಶ್ರೀರಾಮಚಂದ್ರನ ಜನ್ಮ ನಕ್ಷತ್ರ ಯಾವುದು?

ಬಾಲಕ ರಾಮನನ್ನು ನನ್ನ ಜೊತೆ ಕಳಿಸೆಂದು ಕೇಳಿದ ಋಷಿಗಳು ಯಾರು?

ರಾಮನೊಂದಿಗೆ ವನವಾಸಕ್ಕೆ ಹೊರಟವರು ಯಾರು ಯಾರು?

ಶ್ರೀರಾಮನು ಹನುಮಂತನನ್ನು ನೋಡಿದ್ದು ಎಲ್ಲಿ?

ಶ್ರೀರಾಮನ ಪತ್ನಿಯ ಹೆಸರೇನು?

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ.



1) ಸೂರ್ಯವಂಶ 2) ಕೌಸಲ್ಯ 3) ಅಯೋಧ್ಯ 4) ಪುನರ್ವಸು 5) ವಿಶ್ವಾಮಿತ್ರ 6) ಸೀತೆ, ಲಕ್ಷ್ಮಣ
7) ಋಷ್ಯಮೂಕದಲ್ಲಿ 8) ಸೀತಾದೇವಿ

ಮಕ್ಕಳೇ! ಈ ಚಿತ್ರದಲ್ಲಿರುವ ಬಿಲ್ಲಿನಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಬಾಣ ಸರಿ ಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ!

1 — 21+2
2 — 17+4
3 — 32-5
4 — 28-2
5 — 44+2

i — 46
iii — 23
v — 26
ii — 24
iv — 27
vi — 21

1) ii 2) vi 3) iv 4) v 5) i



ಮಕ್ಕಳೇ ನಾನು ಕಾಡಿನಲ್ಲಿ ವಾಸಿಸುತ್ತೇನೆ. ನಾನು ಸೀತೆಯನ್ನು ಅಪಹರಿಸಲು ರಾವಣನಿಗೆ ಸಹಾಯವನ್ನು ಮಾಡಿದೆ ನಾನು ಯಾರು ಎಂದು ಹೇಳಿ ನೋಡೋಣ.

ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!


ಜಿಂಕೆ


ಚಿತ್ರಕಥೆ

# ಶ್ರೀರಾಮ - ಸುಗ್ರೀವರ ಸ್ನೇಹ


ಕಥೆ: ಮೂಲ: ಡಿ. ಶ್ರೀನಿವಾಸ ದೀಕ್ಷಿತರು
ಅನುವಾದ: ಆರ್.ಕೆ.ವಿ.
ಚಿತ್ರಗಳು : ಕೆ. ದ್ವಾರಕನಾಥ್


ರಾವಣ ಸೀತಾ ದೇವಿಯನ್ನು ಅಪಹರಿಸಿ ಕರೆದುಕೊಂಡು ಹೋದನು. ರಾಮ ಮತ್ತು ಲಕ್ಷ್ಮಣ ಅವಳನ್ನು ಹುಡುಕುತ್ತಾ ಋಷ್ಯಮೂಕ ಪರ್ವತವನ್ನು ತಲುಪಿದರು. ಸುಗ್ರೀವ ಪರ್ವತದ ತುದಿಯಿಂದ ಅವರನ್ನು ನೋಡಿದನು. ಸುಗ್ರೀವ ಮತ್ತು ಹನುಮಂತ....




ಶ್ರೀರಾಮ ಲಕ್ಷ್ಮಣರು ಮಾರುತಿಯನ್ನು ನೀವು ಯಾರು ಎಂದು ಕೇಳಿದರು.
ಪೂಜ್ಯರೇ! ನನ್ನ ಹೆಸರು ಆಂಜನೇಯ. ನಾನು ಸುಗ್ರೀವನ ಮಂತ್ರಿ. ಸುಗ್ರೀವ ವಾನರ ರಾಜ. ವಾಲಿ ಅನ್ಯಾಯವಾಗಿ ಸುಗ್ರೀವನನ್ನು ಸಿಂಹಾಸನ ತ್ಯಜಿಸುವಂತೆ ಮಾಡಿದನು. ಸುಗ್ರೀವ ನಿಮ್ಮ ಸಹಾಯವನ್ನು ಬೇಡುತ್ತಿದ್ದೇನೆ.
ನಂತರ ಹನುಮಂತನು ರಾಮಲಕ್ಷ್ಮಣರನ್ನು ಸುಗ್ರೀವನ ಬಳಿಗೆ ಕರೆದೊಯ್ದನು. ಸುಗ್ರೀವನು ಅವರನ್ನು ಆತ್ಮೀಯವಾಗಿ ಸ್ವಾಗತಿಸಿದನು.
ಶ್ರೀರಾಮ! ವಾಲಿ ನನ್ನ ಹೆಂಡತಿ ಮತ್ತು ರಾಜ್ಯವನ್ನು ತನ್ನ ಹಿಡಿತಕ್ಕೆ ತೆಗೆದು ಕೊಂಡಿದ್ದಾನೆ. ಈ ಅನ್ಯಾಯವನ್ನು ನೀವು ಸರಿಪಡಿಸಬೇಕು! ನಾನು ಸೀತಾದೇವಿಯನ್ನು ಕಂಡು ಹಿಡಿಯುತ್ತೇನೆ.
ಸುಗ್ರೀವ ಮಾತು ಕೇಳಿ ಶ್ರೀರಾಮನಿಗೆ ಸಂತೋಷವಾಯಿತು
ಸುಗ್ರೀವ ! ನಾನು ವಾಲಿಯನ್ನು ಕೊಲ್ಲುತ್ತೇನೆ. ಧರ್ಮವನ್ನು ರಕ್ಷಿಸುತ್ತೇನೆ.
ಹನುಮಂತನು ಎರಡು ಮರದ ಕೋಲುಗಳನ್ನು ತಂದು ಬೆಂಕಿಯನ್ನು ಸೃಷ್ಟಿಸಲು ಒಟ್ಟಿಗೆ ಹೊಡೆದನು. ರಾಮ ಮತ್ತು ಸುಗ್ರೀವರು...
ಈ ಅಗ್ನಿ ಸಾಕ್ಷಿಯಾಗಿರುವುದರಿಂದ ನಮ್ಮ ಸ್ನೇಹವು ಚಿರಕಾಲವಿರುತ್ತದೆ.
ಇಬ್ಬರೂ ಪರಸ್ಪರ ವಾಗ್ದಾನ ಮಾಡಿದರು ಹನುಮಂತನು ಸಾಕ್ಷಿಯಾಗಿ ನಿಂತನು.
ಶ್ರೀರಾಮ ಮತ್ತು ಸುಗ್ರೀವರ ಸ್ನೇಹವು ಜಗತ್ತಿಗೆ ಆದರ್ಶ ಪ್ರಾಯವಾಗಿದೆ.
ಸರ್ವೇ ಜನಾಃ ಸುಖಿನೋ ಭವಂತು

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :

(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :

☐ ಕನ್ನಡ ☐ ತೆಲುಗು ☐ ತಮಿಳು

☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

7. ಸಲ್ಲಿಸಿದ ಹಣ :

ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :

ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (editorsapthagiri@gmail.com) ಅನ್ನು ಸಂಪ್ರದಿಸಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and Published by Dr. V. G. Chokkalingam, M.A.,Ph.D.,P.G Dip In JMC on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.,P.G Dip In JMC





# ತಿರುಪತಿ,
# ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು
## ಮಾರ್ಚ್ 16 ರಿಂದ 25 ರವರೆಗೆ

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 16-03-2026 | ಸೋಮವಾರ | ------------- | ಅಂಕುರಾರ್ಪಣೆ |
| 17-03-2026 | ಮಂಗಳವಾರ | ಧ್ವಜಾರೋಹಣ | ದೊಡ್ಡಶೇಷವಾಹನ |
| 18-03-2026 | ಬುಧವಾರ | ಚಿಕ್ಕಶೇಷವಾಹನ | ಹಂಸವಾಹನ |
| 19-03-2026 | ಗುರುವಾರ | ಸಿಂಹವಾಹನ | ಮುತ್ತಿನ ಚಪ್ಪರವಾಹನ |
| 20-03-2026 | ಶುಕ್ರವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 21-03-2026 | ಶನಿವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 22-03-2026 | ಭಾನುವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 23-03-2026 | ಸೋಮವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 24-03-2026 | ಮಂಗಳವಾರ | ರಥೋತ್ಸವ | ಅಶ್ವವಾಹನ |
| 25-03-2026 | ಬುಧವಾರ | ಚಕ್ರಸ್ನಾನ | ಧ್ವಜಾವರೋಹಣ |



SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-02–2026 and Posting at Tirupati RMS.Regd. with the Registrar of News papers for India under RNI.No.APKAN/2021/80589. Postal Regd.No.TRP/156/2024-2026 ''Licenced to Post Without Prepayment No. PMGK/RNP/WPP-04(6)/ 2024-2026'' Posting on 1st of Every Month





ದಿನಮು ದ್ವಾದಶಿ ನೇಂಡು ತೀರ್ಥ ದಿವಸಮು ನೀಕು
ಜನಕುಂಡ ಅನ್ನಮಾಚಾರ್ಯಂಡ ವಿಚ್ಚೆಯವೇ

ಅನಂತಗರುಡ ಮುಖ್ಯುಲೈನ ಸೂರಿಜನುಲತೋ
ಘನ ನಾರದಾದಿ ಭಾಗವತುಲತೋ
ದನುಜಮರ್ಧನುಂಡೈನ ದೈವ ಶಿಖಾಮಣಿ ತೋಡ
ವೆನುಕೋನಿ ಯಾರಗಿಂಚ ವಿಚ್ಚೆಯವೇ

ವೈಕುಂಠಾನ ನುಂಡಿ ಯಾಳುವಾರಲಲೋಪಲ ನುಂಡಿ
ಲೋಕಪು ನಿತ್ಯ ಮುಕ್ತುಲಲೋನ ನುಂಡಿ
ಶ್ರೀಕಾಂತತೋಡನುನ್ನ ಶ್ರೀವೆಂಕಟೇಶುಂ ಗೂಡಿ
ಯಿಕಡ ನಾರಗಿಂಚ ನಿಂಟಿಕಿ ವಿಚ್ಚೆಯವೇ

ಸಂಕೀರ್ತನಮು ತೋಡ ಸನಕಾದುಲೆಲ್ಲಂಬಾಡ
ಪೋಂಕಪು ಶ್ರೀ ವೆಂಕಟಾದ್ರಿ ಭೂಮಿನುಂಡಿ
ಲಂಕೆ ಶ್ರೀ ವೆಂಕಟಗಿರಿ ಲಕ್ಷ್ಮೀ ವಿಭುಂಡು ನೀವು
ನಂಕೆಲ ಮಾಯಿಂಟಿ ಮಿಂದು ಲಾರಗಿಂಚವೇ

ಅನ್ನಮಾಚಾರ್ಯರ
ವರ್ಧಂತಿ
15-03-2026

ಪೆದ ತಿರುಮಲಯ್ಯ ತನ್ನ ತಂದೆಯ ಬಗ್ಗೆ ಅಪಾರ ಭಕ್ತಿಯನ್ನು ತೋರಿಸಿದರು. ಅನ್ನಮಾಚಾರ್ಯರ ಪುಣ್ಯತಿಥಿ ಫಾಲ್ಗುಣ ಮಾಸದ ದ್ವಾದಶಿ ದಿನದಂದು ಗುರುಗಳಿಗೆ ಭಕ್ಷ್ಯ ಭೋಜ್ಯಾದಿಗಳನ್ನು ಸಮರ್ಪಿಸಿ ಶ್ರೀ ಲಕ್ಷ್ಮಿ ಸಮೇತನಾದ ಶ್ರೀ ವೇಂಕಟೇಶ್ವರನೊಂದಿಗೆ, ವೈಷ್ಣವ ಭಕ್ತಾಗ್ರೇಸರೊಂದಿಗೆ ಔತಣವನ್ನು ಮಾಡಿದರು. ತಿರುಮಲಯ್ಯ ತನ್ನ ತಂದೆಯ ಬಗ್ಗೆ ಅಪಾರ ಭಕ್ತಿಯಿಂದ ಈ ಹಾಡನ್ನು ಹಾಡಿದರು. ಇದು ಅವರ ತಂದೆಯ ಮೇಲಿನ ಅಪಾರ ಭಕ್ತಿಗೆ ಸಾಕ್ಷಿಯಾಗಿದೆ.